ಭಾನುವಾರ, ಜುಲೈ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 188 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದೂರದ ಬೆಟ್ಟ ಕಣ್ಣಿಗೆ ನುಣ್ಣನೆ ಎಂಬಂತೆ ಹಿಮಾಲಯವೂ ಕಣ್ಣಿಗೆ ತಂಪಾಗಿ ಕಂಡರೂ ಅದನ್ನೇರುವುದು ಸುಲಭವೇನಲ್ಲ

ಪ್ರಯಾಣಿಕ ವಾಹನ ಮಾರಾಟ ಇಳಿಕೆ 8

ಅಧಿಕಾರಿಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ
‘ಪೊಲೀಸರೇ ನಿಮಗೆ ಬಂದೂಕು ಕೊಟ್ಟಿರುವುದೇಕೆ?’ 7

ಮುಡಾದಲ್ಲಿ ಶಿಫಾರಸುಗಳದ್ದೇ ಕಾರುಬಾರು 4

23ಕ್ಕೆ ಕೇಂದ್ರ ಬಜೆಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನ ಜುಲೈ 22ರಿಂದ ಆಗಸ್ಟ್ 12ರ ವರೆಗೆ ನಡೆಯಲಿದೆ.

ಈ ಆರ್ಥಿಕ ವರ್ಷದ ಪೂರ್ಣ ಪ್ರಮಾಣದ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜುಲೈ 23ರಂದು ಮಂಡಿಸಲಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಗೆ ಮುನ್ನ ಫೆಬ್ರುವರಿಯಲ್ಲಿ ಮಧ್ಯಂತರ ಬಜೆಟ್ ಅನ್ನು ಹಣಕಾಸು ಸಚಿವರು ಮಂಡಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿ ಸರ್ಕಾರದಲ್ಲಿ ಮಂಡನೆಯಾಗುತ್ತಿರುವ ಮೊದಲ ಬಜೆಟ್ ಇದಾಗಿದೆ.

ಹಣಕಾಸು ಸಚಿವರಾಗಿದ್ದ ಮೊರಾರ್ಜಿ ದೇಸಾಯಿ ಐದು ಬಾರಿ ವಾರ್ಷಿಕ ಹಾಗೂ ಒಂದು ಮಧ್ಯಂತರ ಬಜೆಟ್ ಮಂಡಿಸಿದ್ದಾರೆ. ಈಗಾಗಲೇ, ನಿರ್ಮಲಾ ಅವರು ಈ ದಾಖಲೆಯನ್ನು ಸರಿಗಟ್ಟಿದ್ದಾರೆ. 2024–25ನೇ ಸಾಲಿನ ಬಜೆಟ್ ಮಂಡಿಸಿದರೆ ಸತತ ಏಳನೇ ಬಾರಿಗೆ ಬಜೆಟ್ ಮಂಡಿಸಿದ ದೇಶದ ಮೊದಲ ಹಣಕಾಸು ಸಚಿವೆ ಎಂಬ ದಾಖಲೆ ಬರೆಯಲಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬದಲಾದ ಐಸಿಡಿಎಸ್ ಹೆಸರು: ಬದಲಾಗದ ಸ್ವರೂಪ

ಅಂಗನವಾಡಿ: ಸಮಸ್ಯೆ ನೂರು!

• ಮಂಜುಶ್ರೀ ಎಂ. ಕಡಕೋಳ

ಒಳನೋಟ

ಬೆಂಗಳೂರು: ಸುತ್ತಲೂ ನಾಲ್ಕು ತಗಡಿನ ಶೀಟ್, ಮೇಲೂ ತಗಡಿನ ಸೂರು, ಬಿದಿರಿನ ತುಂಡುಗಳ ಬಾಗಿಲು. ಬಾಗಿಲು ತೆರೆದರಷ್ಟೇ ಗಾಳಿ, ಬೆಳಕು. ಬೇಸಿಗೆಯಲ್ಲಿ ಉಸಿರು ಗಟ್ಟಿಸುವ ವಾತಾವರಣ, ಮಳೆಗಾಲದಲ್ಲಿ ತಗಡಿನ ಶೆಡ್ ಮೇಲೆ ಬೀಳುವ ಮಳೆಹನಿಗಳ ಸದ್ದು... ಕೋಳಿ ಗೂಡಿಗೂ ಇದಕ್ಕೂ ಹೆಚ್ಚಿನ ವ್ಯತ್ಯಾಸ ಇಲ್ಲ.

– ಇದು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ಟಿನ್ ಶೆಡ್‌ನಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರದ ಸ್ಥಿತಿ.

ಇರುವುದು ಒಂದೇ ಕೋಣೆ. ಅದರಲ್ಲೇ ಹದಿನೈದರಿಂದ ಇಪ್ಪತ್ತು ಮಕ್ಕಳು ಆಡಬೇಕು, ಕಲಿಯಬೇಕು. ಮಕ್ಕಳ ಆಟಿಕೆಗಳ ಜತೆಗೆ ರೇಷನ್ ದಾಸ್ತಾನು ಕೂಡಾ ಅದೇ ಕೋಣೆಯಲ್ಲೇ. ಗರ್ಭಿಣಿ–ಬಾಣಂತಿಯರು ಬಂದರೆ ಅವರೂ ಇಕ್ಕಟ್ಟಾದ ಜಾಗದಲ್ಲೇ ಕೂರಬೇಕು. ಇದು ರಾಜಧಾನಿ ಬೆಂಗಳೂರಿನ ದಕ್ಷಿಣ ಭಾಗದಲ್ಲಿರುವ ಸಣ್ಣ ರೈಲ್ವೆ ಬೋಗಿಯಂತಿರುವ ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿಯೊಂದರ ಚಿತ್ರಣ.

ಈ ಉದಾಹರಣೆಗಳು ಬೆಂಗಳೂರು, ರಾಯಚೂರು ಜಿಲ್ಲೆಗಳ ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರಗಳದ್ದು ಮಾತ್ರವಲ್ಲ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿರುವ ಅಂಗನವಾಡಿ ಕೇಂದ್ರಗಳದ್ದೂ ಹೆಚ್ಚು ಕಡಿಮೆ ಇದೇ ರೂಪದಲ್ಲಿದೆ.

ತಾತ್ಕಾಲಿಕವಾಗಿ ತಗಡಿನ ಶೆಡ್‌ನಲ್ಲಿಯೇ ನಡೆಯುತ್ತಿರುವ ಸುಂಕೇಶ್ವರಹಾಳ ಗ್ರಾಮದ ಬಾಡಿಗೆ ಅಂಗನವಾಡಿಯ ಸ್ಥಿತಿ ಮಳೆಗಾಲದಲ್ಲಿ ಮತ್ತಷ್ಟು ಭೀಕರ. ಬೇಸಿಗೆಯಲ್ಲಿ ಮಕ್ಕಳನ್ನು ತಗಡಿನ ಶೆಡ್‌ನಿಂದ ಹೊರಗೆ ಆಡಲು ಬಿಡುವ ಕಾರ್ಯಕರ್ತೆ, ಮಳೆಗಾಲದಲ್ಲಿ ಇಕ್ಕಟ್ಟಾದ ಶೆಡ್‌ನಲ್ಲೇ ಮಕ್ಕಳನ್ನು ಕೂರಿಸುತ್ತಾರೆ.

ಕೊಪ್ಪಳ ನಗರದ ದಿಡ್ಡಿ ಓಣಿಯಲ್ಲಿನ ಅಂಗನವಾಡಿ ಕಟ್ಟಡದ ಅವ್ಯವಸ್ಥೆಯ ನೋಟ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

6ನೇ | ಪುಟ ನೋಡಿ

ಹೊಸ ಕಾಲೇಜುಗಳ ಸೀಟುಗಳು ಸೇರ್ಪಡೆಯಾಗುವ ನಿರೀಕ್ಷೆ

‘ನೀಟ್–ಯುಜಿ’: ತಿಂಗಳ ಕೊನೆಗೆ ಕೌನ್ಸೆಲಿಂಗ್?

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಯುವ ‘ನೀಟ್-ಯುಜಿ’ ಕೌನ್ಸೆಲಿಂಗ್ ಪ್ರಕ್ರಿಯೆಯು ಈ ತಿಂಗಳ ಅಂತ್ಯದ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆಯಿದೆ.

ಕೌನ್ಸೆಲಿಂಗ್ ಪ್ರಕ್ರಿಯೆಗೆ ಜುಲೈ ಮೊದಲ ವಾರದಲ್ಲಿಯೇ ಚಾಲನೆ ದೊರೆಯವ ಸಾಧ್ಯತೆ ಇತ್ತು. ಆದರೆ, ಈ ಕುರಿತು ಅಧಿಕಾರಿಗಳು ಯಾವುದೇ ದಿನಾಂಕ ಮತ್ತು ವೇಳಾಪಟ್ಟಿ ಪ್ರಕಟಿಸದ ಕಾರಣ ಅದು ವಿಳಂಬವಾಗಿದೆ.

‘ಕೆಲ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ಪತ್ರ ನೀಡುವ ಪ್ರಕ್ರಿಯೆ ನಡೆಯುತ್ತಿದ್ದು, ಹೆಚ್ಚುವರಿ ಸೀಟುಗಳು ಸೇರ್ಪಡೆಯಾಗುವ ಸಾಧ್ಯತೆಯಿದೆ. ಈ ಸೀಟುಗಳು ಮೊದಲ ಸುತ್ತಿನ ಕೌನ್ಸೆಲಿಂಗ್‌ನಲ್ಲಿಯೇ ದೊರೆಯುವ ನಿರೀಕ್ಷೆಯಿದೆ. ಅದು ಖಚಿತವಾದ ಕೂಡಲೇ ಕೌನ್ಸೆಲಿಂಗ್‌ನ ದಿನಾಂಕ ಪ್ರಕಟಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಕೌನ್ಸೆಲಿಂಗ್ ಪ್ರಕ್ರಿಯೆಯು ಈ ತಿಂಗಳ ಕೊನೆಯಲ್ಲಿ ಆರಂಭವಾಗಬಹುದು’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೇ 5ರಂದು ನಡೆದಿದ್ದ ನೀಟ್–ಯುಜಿ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳು ವ್ಯಕ್ತವಾದ ಬೆನ್ನಲ್ಲೇ, ಪರೀಕ್ಷೆ ರದ್ದುಗೊಳಿಸಲು ಮತ್ತು ಮರು ಪರೀಕ್ಷೆ ನಡೆಸಲು ಬೇಡಿಕೆ ವ್ಯಕ್ತವಾಗಿತ್ತು.

9ನೇ | ಪುಟ ನೋಡಿ

‘ಸುಪ್ರೀಂ’ಗೆ ಬಿಹಾರದ ಪ್ರಮಾಣಪತ್ರ

ಮೇ 5ರಂದು ನಡೆದ ‘ನೀಟ್-ಯುಜಿ’ಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಇತರ ಅಕ್ರಮಗಳ ಕುರಿತ ಆರೋಪದ ಬಗ್ಗೆ ತನಿಖೆ ನಡೆಸಿದ ಬಿಹಾರದ ಪೊಲೀಸರು 13 ಆರೋಪಿಗಳನ್ನು ಬಂಧಿಸಿದ್ದು, ಅವರಿಂದ ಮೊಬೈಲ್ ಫೋನ್, ಇತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಬಿಹಾರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಬಿಹಾರ ಸರ್ಕಾರ ಪ್ರಮಾಣಪತ್ರ ಸಲ್ಲಿಸಿದೆ. ಪ್ರಸ್ತುತ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ ಎಂದು ಅದು ಹೇಳಿದೆ.

ಭಾನುವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

ಮುನ್ನೋಟ

ಸೋಮವಾರ	ಮಂಗಳವಾರ	ಬುಧವಾರ
27° 20°	28° 21°	29° 21°

‘13ಕ್ಕೆ ಜಗಜೀವನರಾಂ ಭವನ ಉದ್ಘಾಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಸುಮಾರು ₹3 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಡಾ.ಬಾಬು ಜಗಜೀವನರಾಂ ಭವನದ ಉದ್ಘಾಟನೆ ಜುಲೈ 13ರಂದು ನಡೆಯಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂ ಪುಣ್ಯತಿಥಿ ಅಂಗವಾಗಿ ವಿಧಾನಸೌಧ ಪಶ್ಚಿಮ ದ್ವಾರದ ಬಳಿ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

‘ಹಿಂದೆ ನಮ್ಮ ಸರ್ಕಾರವಿದ್ದಾಗ ಭವನದ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗಿತ್ತು. ಅಭ್ಯರ್ಥಿಗಳಿಗೆ ವಿಜ್ಞಾನ, ಕೌಶಲಾಭಿವೃದ್ಧಿ ಕುರಿತ ತರಬೇತಿಯನ್ನು ಭವನದಲ್ಲಿ ನೀಡಲಾಗುವುದು’ ಎಂದು ತಿಳಿಸಿದರು.

ಭಾರತ ಸರ್ಕಾರ
ಸಿಬ್ಬಂದಿ ನೇಮಕಾತಿ ಆಯೋಗ
(ಕರ್ನಾಟಕ ಕೇರಳ ಪ್ರದೇಶ), ಬೆಂಗಳೂರು

ಬಹು ಕಾರ್ಯಕ (ತಾಂತ್ರಿಕೇತರ) ಸಿಬ್ಬಂದಿ (Multi-Tasking Staff Non- Technical ಎಂ.ಟಿ.ಎಸ್) ಮತ್ತು ಹವಾಲ್ದಾರ್ (ಸಿಬಿಐಸಿ & ಸಿಬಿಎನ್) ಪರೀಕ್ಷೆ–2024

ಭಾರತ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಮೇಲ್ಕಂಡ ಹುದ್ದೆಗಳ ನೇಮಕಾತಿಗಾಗಿ ಕಂಪ್ಯೂಟರ್ ಆಧಾರಿತ ಪರೀಕ್ಷೆ–2024 ನಡೆಸಲಿದೆ. ಈ ಕುರಿತು ಅಧಿಸೂಚನೆಯನ್ನು **27/06/2024** ರಂದು ಹೊರಡಿಸಲಾಗಿದೆ. ವಿವರಗಳು **www.ssckkr.kar.nic.in** ಮತ್ತು **https://ssc.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

1	ವಯೋಮಿತಿ	ವಿವಿಧ ವಿಭಾಗಗಳ ನೇಮಕಾತಿ ನಿಯಮಗಳ ಪ್ರಕಾರ – (ಎರಡು ರೀತಿಯ) ಹುದ್ದೆಗಳಿಗೆ ವಯೋಮಿತಿ:– ಅ) ಸಿ ಬಿ.ಎನ್.ನಲ್ಲಿ MTS ಮತ್ತು ಹವಾಲ್ದಾರ್ ಹುದ್ದೆಗೆ 01/08/2024 ರಂತೆ 18 ರಿಂದ 25 ವರ್ಷಗಳು ಆ) ಸಿ ಬಿ ಐ ಸಿ ನಲ್ಲಿ ಹವಾಲ್ದಾರ್ ಮತ್ತು ಇತರ MTS ಹುದ್ದೆಗಳಿಗೆ 01/08/2024 ರಂತೆ 18 ರಿಂದ 27 ವರ್ಷ ವಿವಿಧ ವರ್ಗದವರಿಗೆ ಗರಿಷ್ಠ ವಯೋಮಿತಿ ಸಡಿಲಿಕೆ ಇದ್ದು ಆಯೋಗದ ಅಧಿಸೂಚನೆಯ ಪ್ಯಾರ 6.2 ಅನ್ನು ಪರಿಶೀಲಿಸಬಹುದು.
2	01/08/2024 ರಂತೆ ಆಗತ್ಯ ವಿದ್ಯಾರ್ಹತೆ	ಅಭ್ಯರ್ಥಿಯು ಮಾನ್ಯತೆ ಪಡೆದ ಮಂಡಳಿಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆ (SSLC/ ಹತ್ತನೇ ತರಗತಿ) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿರಬೇಕು
3	ಪರೀಕ್ಷೆ ವಿಧಾನ	ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುವ ಕಂಪ್ಯೂಟರ್ ಆಧಾರಿತ ಪರೀಕ್ಷೆ. #ಹವಾಲ್ದಾರ್ ಹುದ್ದೆಗೆ ದೈಹಿಕ ಸಾಮರ್ಥ್ಯ ಪರೀಕ್ಷೆ / ದೈಹಿಕ ಪ್ರಮಾಣ ಪರೀಕ್ಷೆ ಕೂಡ ಇರುತ್ತದೆ. ಪ್ರಶ್ನೆ ಪತ್ರಿಕೆಗಳು ಇಂಗ್ಲಿಷ್, ಹಿಂದಿ ಮತ್ತು ಕನ್ನಡವೂ ಸೇರಿದಂತೆ 13 ಪ್ರಾಂತೀಯ ಭಾಷೆಗಳಲ್ಲಿ ಲಭ್ಯವಿರುತ್ತವೆ. ಸಂದರ್ಶನ ಇರುವುದಿಲ್ಲ.
4	ಹುದ್ದೆಗಳ ಸಂಖ್ಯೆ	ಎಂ ಟಿ ಎಸ್ – ಸುಮಾರು 4887 ಹವಾಲ್ದಾರ್ – ಸುಮಾರು 3439
5	ಶುಲ್ಕ	ರೂ.100/– (ಮಹಿಳಾ ಅಭ್ಯರ್ಥಿಗಳಿಗೆ ಮತ್ತು ಎಸ್ಸಿ /ಎಸ್ಟಿ /ಪಿಡಬ್ಲ್ಯೂಡಿ/ ಅರ್ಹ ಮಾಜಿ ಸೈನಿಕರಿಗೆ ಶುಲ್ಕವಿಲ್ಲ.)
6	ಪರೀಕ್ಷೆಯ ಸಂಭವನೀಯ ದಿನಾಂಕ	ಅಕ್ಟೋಬರ್ – ನವೆಂಬರ್ 2024
7	ಅರ್ಜಿ ಸ್ವೀಕರಿಸಲು ಅಂತಿಮ ದಿನಾಂಕ	31/07/2024 (23:00 ಗಂಟೆಯವರೆಗೆ) ಈ ಪರೀಕ್ಷೆಗೆ ಅಂತರ್ಜಾಲದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
8	ಅರ್ಜಿ ಸಲ್ಲಿಸುವ ವಿಧಾನ ಮತ್ತು ಅಂತರ್ಜಾಲದಲ್ಲಿ ಅರ್ಜಿ ಸಲ್ಲಿಸಲು ಲಿಂಕ್	ಅಂತರ್ಜಾಲ ಮಾಧ್ಯಮದಲ್ಲಿ SSC ಮುಖ್ಯಾಲಯದ ಜಾಲತಾಣ https://ssc.gov.in ನಲ್ಲಿ ಮಾತ್ರ. ವಿವರಗಳಿಗೆ ಅಧಿಸೂಚನೆಯ ಅನುಬಂಧ–III ಮತ್ತು ಅನುಬಂಧ-IV ನೋಡಿ.
9	ಸಹಾಯವಾಣಿ	080 25502520 –ಸೋಮವಾರದಿಂದ– ಶುಕ್ರವಾರದವರೆಗೆ 10:00 to 17:00 ಗಂಟೆಗಳು.
10	ತಿಂಗಳ ಒಟ್ಟು ವೇತನ	ವೇತನ ಸು. ರೂ. 32,877/– (ಮತ್ತು ಇತರೆ ಭತ್ಯೆಗಳು.)
11	ಪರೀಕ್ಷೆ ನಡೆಯುವ ಸ್ಥಳಗಳು	ಕರ್ನಾಟಕ– (ಬೆಳಗಾವಿ, ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿ) ಕೇರಳ– (ಎರ್ನಾಕುಲಂ, ಕೊಲ್ಲಂ, ಕೋಟಯಂ, ಕೋಝಿಕೋಡ್, ತ್ರಿಶೂರ್, ತಿರುವನಂತಪುರಂ)

ಖಚಿತ ಪರೀಕ್ಷಾ ದಿನಾಂಕ, ಅಡ್ಮಿಟ್ ಕಾರ್ಡ್, ಪರೀಕ್ಷೆಯ ವಿವರಗಳು ಇತ್ಯಾದಿ ಮಾಹಿತಿಗಾಗಿ, ಅಭ್ಯರ್ಥಿಗಳು ನಿಯಮಿತವಾಗಿ **SSC** ಮುಖ್ಯಾಲಯ ನವದೆಹಲಿಯ ಜಾಲತಾಣ **https://ssc.gov.in** ಮತ್ತು ಸ್ಥಳೀಯ ಕಚೇರಿ, ಬೆಂಗಳೂರಿನ (ಇದರ ವ್ಯಾಪ್ತಿಯಲ್ಲಿ ಕರ್ನಾಟಕ, ಕೇರಳ, ಲಕ್ಷದ್ವೀಪ ಪರೀಕ್ಷಾ ಕೇಂದ್ರಗಳು ಇವೆ) ಜಾಲತಾಣ **www.ssckkr.kar.nic.in** ಗಮನಿಸಿ.

CBC-32203/11/0002/2425 ಸಹಿ/– ಪ್ರಾದೇಶಿಕ ನಿರ್ದೇಶಕರು

ಬೇಡಿಕೆಗಳನ್ನು ಈಡೇರಿಸಲು ಆದೇಶ ಹೊರಡಿಸಿದ ಮಹಾನಗರ ಪಾಲಿಕೆ

ಬಿಬಿಎಂಪಿ ಗುತ್ತಿಗೆದಾರರ ಮುಷ್ಕರ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಿಬಿಎಂಪಿ ಗುತ್ತಿಗೆದಾರರ ಸಂಘದ ಮನವಿಗಳನ್ನು ಈಡೇರಿಸಿ, ಆದೇಶ ಹೊರಡಿಸಿರುವುದರಿಂದ ಗುತ್ತಿಗೆದಾರರು ಮುಷ್ಕರವನ್ನು ವಾಪಸ್ ಪಡೆದಿದ್ದಾರೆ.

ಒಂಬತ್ತು ಬೇಡಿಕೆಗಳನ್ನು ಈಡೇರಿಸಲು ಸಾಕಷ್ಟು ಸಮಯ ನೀಡಿದ್ದರೂ ಅದಕ್ಕೆ ಮುಖ್ಯ ಆಯುಕ್ತರು ಸ್ಪಂದಿಸಿರಲಿಲ್ಲ. ಹೀಗಾಗಿ ಜುಲೈ 8ರಿಂದ ನಗರದಾದ್ಯಂತ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಹೋರಾಟ ನಡೆಸಲಾಗುತ್ತದೆ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಎಚ್ಚರಿಸಿತ್ತು.

ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ನೇತೃತ್ವದಲ್ಲಿ ಪದಾಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಯೋಜನಾ ವಿಭಾಗದ ವಿಶೇಷ ಆಯುಕ್ತ ಹರೀಶ್‌ಕುಮಾರ್ ಅವರು ಗುತ್ತಿಗೆದಾರರ ಬೇಡಿಕೆಗಳನ್ನು ಈಡೇರಿಸಲು ಸಮ್ಮತಿಸಿದ್ದರು.

‘ಇದರಬಗ್ಗೆ ಆದೇಶವಾಗುವವರೆಗೂ ಮುಷ್ಕರ ವಾಪಸ್ ಪಡೆಯುವುದಿಲ್ಲ’ ಎಂದು ಸಂಘದ ಸದಸ್ಯರು ಪಟ್ಟು ಹಿಡಿದಿದ್ದರು. ಜುಲೈ 6ರಂದು ಕಚೇರಿ ಆದೇಶ ಹೊರಡಿಸಲಾಗಿದ್ದು, ಗುತ್ತಿಗೆದಾರರ ಎಲ್ಲ ಬೇಡಿಕೆಗಳನ್ನೂ ಈಡೇರಿಸಿದಂತಾಗಿದೆ.

‘ಗುತ್ತಿಗೆದಾರರಿಗೆ ಬಿಲ್ ಸಲ್ಲಿಸಲು ಸರಳ ಮಾದರಿ ಹಾಗೂ ಟಿವಿಸಿಸಿ ರ್‍ಯಾಂಡಮೈಸೇಷನ್ ತನಿಖೆ ಕೈಬಿಡಬೇಕು. ಕೇಂದ್ರ ಕಚೇರಿಯ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಿಂದ ಬಿಲ್ ಪಾವತಿಸಬೇಕು. ಕಟ್ಟಡ ಕಾಮಗಾರಿಗಳ ಬಿಲ್ಲುಗಳನ್ನು ‘ಎಸೆನ್ಷಿಯಲ್’ ಎಂದು ಪರಿಗಣಿಸಿ ತ್ವರಿತವಾಗಿ ಪಾವತಿಸಬೇಕು. ಹಿಂದಿನ ಪದ್ಧತಿಯಂತೆ ಟೆಂಡರ್ ಪ್ರೀಮಿಯಂ ಅಧಿಕಾರವನ್ನು ಮುಖ್ಯ ಎಂಜಿನಿಯರ್‌ಗೆ ನೀಡಬೇಕು’ ಎಂದು ಸಂಘದವರು ಮನವಿ ಮಾಡಿದ್ದರು. ಇದನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಬಿಬಿಎಂಪಿ ಕಚೇರಿ ಆದೇಶವಾಗಿದೆ.

ಬಿಬಿಎಂಪಿ ಗುತ್ತಿಗೆದಾರ ಸಂಘದ ಬೇಡಿಕೆಗಳನ್ನು ಈಡೇರಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಯೋಜನಾ ವಿಭಾಗದ ವಿಶೇಷ ಆಯುಕ್ತ ಹರೀಶ್‌ಕುಮಾರ್ ಅವರು ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು

‘ಎಲ್ಲಾ ಬೇಡಿಕೆಗಳು ಈಡೇರಿವೆ’

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಧ್ಯ ಪ್ರವೇಶದಿಂದ ಬಿಬಿಎಂಪಿ ಮುಖ್ಯ ಆಯುಕ್ತರು ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದಾರೆ. ಹೀಗಾಗಿ, ಜು. 8ರಿಂದ ಆರಂಭಿಸಬೇಕಿದ್ದ ಮುಷ್ಕರವನ್ನು ಹಿಂಪಡೆಯಲಾಗಿದೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

‘ಪೂರ್ಣಗೊಂಡ ಕಾಮಗಾರಿಗಳಿಗೆ 2022ರ ಡಿಸೆಂಬರ್‌ವರೆಗೆ ಬಿಲ್ ಪಾವತಿಸಲು ಸಮ್ಮತಿಸಲಾಗಿದೆ. ಬಿಲ್ ಪಾವತಿ ಮಾಡಿರುವ ಮೊತ್ತದಲ್ಲಿ ಶೇ 25ರಷ್ಟು ತಡೆಹಿಡಿದಿರುವುದು ಸರ್ಕಾರದ ಅನುಮೋದನೆಯಲ್ಲಿದೆ. ಅಲ್ಲಿಂದ ಸಮ್ಮತಿ ಪಡೆದ ಮೇಲೆ ಅದನ್ನೂ ಪಾವತಿಸುವ ಭರವಸೆಯು ದೊರೆತಿದೆ’ ಎಂದು ತಿಳಿಸಿದರು.

ಪಿಇಎಸ್: ನೂರು ಎಂಬಿಬಿಎಸ್ ಸೀಟ್‌ಗೆ ಅನುಮತಿ

ಬೆಂಗಳೂರು: ಪಿ.ಇ.ಎಸ್. ವಿವಿಯ ಎಲೆಕ್ಟ್ರಾನಿಕ್ ಸಿಟಿ ಕ್ಯಾಂಪಸ್‌ನಲ್ಲಿರುವ ವೈದ್ಯಕೀಯ ಕಾಲೇಜಿನಲ್ಲಿ 2024–25ನೇ ಸಾಲಿನಿಂದ ಎಂಬಿಬಿಎಸ್ ಪದವಿಯಲ್ಲಿ 100 ಸೀಟುಗಳ ಪ್ರವೇಶಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅನುಮತಿ ನೀಡಿದೆ.

‘ಇಡೀ ಪಿಇಎಸ್ ಸಮುದಾಯಕ್ಕೆ ಇದು ಹೆಮ್ಮೆಯ ಕ್ಷಣವಾಗಿದೆ. ಮೂರು ವರ್ಷಗಳ ಅವಿರತ ಪ್ರಯತ್ನಕ್ಕೆ ಫಲ ದೊರೆತಿದೆ. ಗುಣಮಟ್ಟದ ವೈದ್ಯಕೀಯ ಶಿಕ್ಷಣ ಒದಗಿಸಲು ಈ ಕೇಂದ್ರ ಸಹಕಾರಿಯಾಗಲಿದೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ತಿಳಿಸಿದ್ದಾರೆ.

Form No. 22
General Notice in respect of Interlocutory Application
IN THE HIGH COURT OF KARNATAKA AT BENGALURU
WRIT PETITION No. 17732/2021
[KLR-RES]

PETITIONER : SRI D V VENKATARAMAIAH, S/o Late D V Venkatappa, Aged about 73 years, R/at No. 327, Devanarayanaswamy Street, Kandavarpet, Chickballapura - 562 101.
By Sri. A. Nagarajappa, Adv.,

Vs

RESPONDENTS : 1. THE GOVERNMENT OF KARNATAKA, Represented by its Secretary, Department of Revenue, M S Building, Dr. B R Ambedkar Veedhi, Bengaluru - 560 001. and 10 Others.

Whereas the above named Sri D V VENKATARAMAIAH, has preferred I.A. No. 2/22 filed on 08.09.2022 by the advocate for the petitioner as in the copy annexed hereunto, praying this court for brining LR's of deceased Respondent No. 10.

Notice is hereby given to you to appear in this Court in person or through an advocate or through someone duly authorized to act for you in this matter within 10 days after receipt of this notice to show cause why the application should not be allowed. If you fail to appear, the application will be dealt with, heard and decided in your absence.

Issued under my hand and the seal of this Court on Monday, THE 14TH DAY OF NOVEMBER 2022

BY ORDER OF THE COURT
I/C ASSISTANT REGISTRAR

To, **Sri. Aswath Narayanachar,**
Since Dead by his LR's
10(d) SMT. PRAPULLA D/o Late Aswath Narayanachar, Aged about 48 years, R/at. No.14, 2nd Cross, Shabarinagara, Byatarayanapura, Bengaluru-560 092.
10(e) SMT. PRAGATHI D/o Late Aswath Narayanachar, Aged about 44 years, R/at. No. 14, 2nd Cross, Shabarinagara, Byatarayanapura, Bengaluru - 560 092.

ಬಾಡಿಗೆ ಬಾಕಿ: ಬ್ಯಾಂಕ್, ಅಂಚೆ ಕಚೇರಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಜಿ.ರಸ್ತೆಯಲ್ಲಿರುವ ಪಿಯುಬಿ ಕಟ್ಟಡದ ನೆಲ ಅಂತಸ್ತಿನಲ್ಲಿರುವ ಬ್ಯಾಂಕ್ ಆಫ್ ಬರೋಡಾ (ವಿಜಯಾ ಬ್ಯಾಂಕ್) ಹಾಗೂ ಅಂಚೆ ಕಚೇರಿಗಳು ಬಾಡಿಗೆ ಪಾವತಿಸದ್ದರಿಂದ ಬಿಬಿಎಂಪಿ ಸಿಬ್ಬಂದಿ ಶನಿವಾರ ಬೆಳಿಗ್ಗೆ ಬೀಗ ಹಾಕಿದ್ದಾರೆ.

ಪಿಯುಬಿ ಕಟ್ಟಡದ ನೆಲ ಅಂತಸ್ತಿನಲ್ಲಿರುವ ಮಳಿಗೆ ಸಂಖ್ಯೆ 14/15 ಬ್ಯಾಂಕ್ ಆಫ್ ಬರೋಡಾ (ವಿಜಯಾ ಬ್ಯಾಂಕ್) ಮತ್ತು ಮಳಿಗೆ ಸಂಖ್ಯೆ 17, ಅಂಚೆ ಕಚೇರಿಗಳಿವೆ.

ಬ್ಯಾಂಕ್ ಆಫ್ ಬರೋಡಾದವರು 2011ರಿಂದ ಹಳೆಯ ಬಾಡಿಗೆಯನ್ನು ಪಾವತಿಸುತ್ತಿದ್ದು, ಪರಿಷ್ಕೃತ ಬಾಡಿಗೆ ಪಾವತಿಸುತ್ತಿರುವುದಿಲ್ಲ. ಅಲ್ಲದೆ, ಡಿಸೆಂಬರ್ 2022ರಿಂದ ಯಾವುದೇ ಬಾಡಿಗೆಯನ್ನು ಪಾವತಿಸಿಲ್ಲ. ಈ ಬಗ್ಗೆ ಹಲವು ಬಾರಿ ನೋಟಿಸ್ ಜಾರಿ ಮಾಡಿದ್ದರೂ ಸ್ಪಂದಿಸಿಲ್ಲ. ಪಾಲಿಕೆಗೆ ಬ್ಯಾಂಕ್ ಆಫ್ ಬರೋಡಾ ₹17.56 ಕೋಟಿ ಬಾಡಿಗೆ ಪಾವತಿಸಬೇಕಿದೆ ಎಂದು ಪ್ರಕಟಣೆ ತಿಳಿಸಿದೆ.

ಅಂಚೆ ಕಚೇರಿಯವರು 2006ರಿಂದ ಹಳೆಯ ಬಾಡಿಗೆಯನ್ನು ಪಾವತಿಸುತ್ತಿದ್ದು, ಪರಿಷ್ಕೃತ ಬಾಡಿಗೆಯನ್ನು ಪಾವತಿಸುತ್ತಿರುವುದಿಲ್ಲ. ಪರಿಷ್ಕೃತ ಬಾಡಿಗೆಪಾವತಿಸುವಂತೆ ನೋಟಿಸ್ ನೀಡಲಾಗಿದ್ದರೂ, ಪಾವತಿಸಿರುವುದಿಲ್ಲ. ಹೀಗಾಗಿ ₹2.32 ಕೋಟಿ ಬಾಡಿಗೆ ಪಾವತಿಸಬೇಕಿದೆ.

ನಗರದಲ್ಲಿ ಇಂದು

ಯೂಥ್ ಸೆನ್ಸೇಷನ್ಸ್ ಆಫ್ ಯೂಟ್ಯೂಬ್: ಗಾಯನ: ಸ್ಫೂರ್ತಿರಾವ್, ಸೂರ್ಯ ಗಾಯತ್ರಿ, ವಿಘ್ನೇಶ್, ರಾಹುಲ್ ವೆಲ್ಲಲ್, ಆಯೋಜನೆ: ಎಂ.ಎ. ನರಸಿಂಹಚಾರ್ ಮ್ಯೂಸಿಕ್ ಫೌಂಡೇಷನ್, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 9.45ರಿಂದ

ಬುದ್ಧಪ್ರಿಯ ಗಂಗಾಧರ್ ಮಾವಳ್ಳಿ ಅವರ ‘ಜಲ ಸ್ವಾತಂತ್ರ್ಯ’ ಪುಸ್ತಕ ಬಿಡುಗಡೆ: ಎಂ. ನಾರಾಯಣ, ಉದ್ಘಾಟನೆ: ಸಂತೋಷ್ ಎಸ್. ಲಾಡ್, ಅಧ್ಯಕ್ಷತೆ: ಎಸ್.ಎನ್. ನಾರಾಯಣಸ್ವಾಮಿ, ಉಪನ್ಯಾಸ: ಮಾವಳ್ಳಿ ಶಂಕರ್, ಅತಿಥಿಗಳು: ಲಕ್ಷ್ಮೀದೇವಿ ಆರ್., ಎ. ಅಮೃತ್ ರಾಜ್, ರಾಜಶೇಖರ್ ಮೂರ್ತಿ ಬಿ., ಮಹಾನಂದ್, ಸಿದ್ಧಾರ್ಥ ಆನಂದ್ ಮಾಲೂರು, ಆಯೋಜನೆ: ಸ್ಯಾಮ್ ಪಬ್ಲಿಕೇಶನ್ಸ್, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ, ಬೆಳಿಗ್ಗೆ 10

ಕಾವ್ಯಾ ಕಡಮೆ ಅವರ ‘ಸಂಜೀವಿನಿ ಸ್ಟೋರ್ಸ್’, ‘ತೊಟ್ಟು ಕ್ರಾಂತಿ’ ಪುಸ್ತಕಗಳ ಬಿಡುಗಡೆ: ಉಪಸ್ಥಿತಿ: ಕೆ.ವೈ. ನಾರಾಯಣಸ್ವಾಮಿ, ದು. ಸರಸ್ವತಿ, ಹುಲಿಕುಂಟೆ ಮೂರ್ತಿ, ಆಯೋಜನೆ: ಡಿಮ್ ಎನ್ ಡಿಪ್ ಸ್ಟುಡಿಯೋಸ್, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಮರಣೆ: ಉಪನ್ಯಾಸ: ಶ್ರೀನಿವಾಸಯ್ಯ, ಅತಿಥಿ: ರೂಪಶ್ರೀ, ಮೋಹನ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಗುರುಪ್ರಸಾದ ಕಾಗಿನೆಲೆ ಅವರ ‘ಸತ್ಕುಲಪ್ರಸೂತರು’, ಸಂತೋಷ್ ಅನಂತಪುರ ಅವರ ‘ತೃಷೆ’, ಮೌನೇಶ ಬಡಿಗೇರ ಅವರ ‘ಜೀವ ಜಾತ್ರೆ, ಸುಶೀಲಾ ಡೋಣೂರ ಅವರ ‘ಪೀಜಿ’ ಪುಸ್ತಕಗಳ ಬಿಡುಗಡೆ: ನಾಗತಿಹಳ್ಳಿ ಚಂದ್ರಶೇಖರ್, ಅತಿಥಿಗಳು: ಜೋಗಿ, ರಶ್ಮಿ ಎಸ್., ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ನಾಗತಿಹಳ್ಳಿ ಚಂದ್ರಶೇಖರ್

ಜಲ ಸಂರಕ್ಷಣೆ ಕಾರ್ಯಾಗಾರ: ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ರಾಷ್ಟ್ರೋತ್ಥಾನ ಯೋಗ ಕೇಂದ್ರ, ಸದಾಶಿವನಗರ, ಬೆಳಿಗ್ಗೆ 10.30

ಮಾಸದ ಮಂಥನ: ‘ನಾನು ಸೀಮಂತ ಡಾಕ್ಟರ್ ಹೇಗಾದೆ?’ ಕುರಿತು: ಡಾ.ಬಿ.ಬಿ. ರಘುನಾಥ್, ಆಯೋಜನೆ ಮತ್ತು ಸ್ಥಳ: ನಂ. 17, ಸಾನಿಧ್ಯ 1ನೇ ಅಡ್ಡರಸ್ತೆ ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಪ್ರಭಾ ಮಲ್ಲೇಶ್ ಅವರ ‘ಟ್ರೆಡಿಷನಲ್ ಮೈಸೂರು ಪೇಂಟಿಂಗ್ಸ್’ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪ್ರದರ್ಶನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಕಿ.ರಾ. ಕೃಷ್ಣಸ್ವಾಮಿ ಸಂಗ್ರಹಿಸಿದ ‘ಅಶ್ವರೇಖೆ–ಅಶ್ವತ್ಥ ಅವರ ವ್ಯಂಗ್ಯಚಿತ್ರಗಳ ಗುಚ್ಛ’ ಪುಸ್ತಕ ಬಿಡುಗಡೆ: ಸ್ಥಳ: ಚಿತ್ರಕಲಾ ಪರಿಷತ್, ಗ್ಯಾಲರಿ ಸಂಖ್ಯೆ–7, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3

‘ದೃಶ್ಯಾವಳಿ ಕರೋಕೆ ರಸ ಸಂಜೆ’ ಆಯೋಜನೆ: ಕಲಾಭೂಮಿ, ಸ್ಥಳ: ಸುಚಿತ್ರ ಫಿಲ್ಮ್ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ 4

ಹಾಡು ಹೊಸ ಹಾಡು: ಚಾಲನೆ: ಎಲ್. ಎನ್. ಮುಕುಂದರಾಜ್, ಅತಿಥಿ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅಭಿಜ್ಞಾ ಸರಸ್ವತಿ ದೀಕ್ಷಿತ್, ಅತಿಥಿಗಳು: ಜಗದೀಶ್ ಶರ್ಮ ಸಂಪ, ಆರ್.ವಿ. ರಾಘವೇಂದ್ರ, ನಂದಿನಿ ಕೆ. ಮೆಹ್ತಾ, ಆಯೋಜನೆ: ನೃತನಂ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5

‘ಕಾವ್ಯ ಸೌಗಂಧಿಕಾ ಡಾ.ಎಚ್.ಎಸ್. ವೆಂಕಟೇಶಮೂರ್ತಿ–80’ ಅಭಿನಂದನೆ–ಗೀತ ಗೌರವ: ಅಭಿನಂದನಾ ನುಡಿ: ನಾ. ದಾಮೋದರ ಶೆಟ್ಟಿ, ಗಾಯನ: ವೈ.ಕೆ. ಮುದ್ದುಕೃಷ್ಣ, ಎಂ.ಡಿ. ಪಲ್ಲವಿ, ಪ್ರೇಮಲತಾ ದಿವಾಕರ್, ಪ್ರವೀಣ್ ಬಿ.ವಿ., ಸುನೀತಾ ಮುರಳಿ, ಡೇವಿಡ್ ಪ್ರತಿಭಾಂಜಲಿ, ಮಧು ಮನೋಹರನ್, ಮಹೇಶ್ ಪ್ರಿಯಾದರ್ಶನ್, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಎಂ.ಡಿ.ಪಲ್ಲವಿ

ಅಮೋಘ ಸಂಗೀತ ಕಛೇರಿ: ಗಾಯನ: ಎಚ್.ಆರ್. ರಾಘವೇಂದ್ರ ರಾವ್, ಎಚ್. ಆರ್. ಮಂಜುನಾಥ್, ಪಿಟೀಲು: ಎಸ್. ಯಶಸ್ವಿ, ಮೃದಂಗ: ದತ್ತಾತ್ರೇಯ ಶರ್ಮ, ಘಟ: ಎ. ಸೋಮಶೇಖರ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, 3ನೇ ಅಡ್ಡರಸ್ತೆ, 3ನೇ ಹಂತ, ಜೆ.ಪಿ. ನಗರ, ಸಂಜೆ 5.30

ನೃತ್ಯ ರಂಗೋಲಿ: ‘ಕೃಷ್ಣ ಫೈರ್ ಟು ಫ್ರೋಸ್ಟ್’ ನೃತ್ಯ: ನಿರುಪಮಾ–ರಾಜೇಂದ್ರ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

‘ಮರಣ ಮೃದಂಗ’ ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ಮೆ ನಟನೆ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 7

‘ಪುಕ್ಕಟೆ ಸಲಹೆ’ ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಬಿ. ಅಶೋಕ್, ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30



ಗುರುಕಿರಣ್

ಸಪ್ತಸ್ವರ ಸಂಗೀತ ಸಂಜೆ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಕೆ.ಎನ್. ರಮೇಶ್, ಅತಿಥಿಗಳು: ಗುರುಕಿರಣ್, ಅರುಣ್ ಚಕ್ರವರ್ತಿ, ಎನ್. ಮುರಳಿಕೃಷ್ಣ, ಶಿವರಾಜ್ ಗೌಡ, ಮಹೇಂದ್ರ ಮುನ್ನೋತ್, ಆಯೋಜನೆ: ವಿಜಯ ಮ್ಯೂಸಿಕ್ ಸ್ಕೂಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಜಯನಗರದ ‘ವಾಯು ಚೆಸ್ಟ್ ಆ್ಯಂಡ್ ಸ್ಲೀಪ್ ಸೆಂಟರ್’ನಲ್ಲಿ ಬಿಎಂಟಿಸಿ ಸಿಬ್ಬಂದಿಗೆ ಶ್ವಾಸಕೋಶ, ಉಸಿರಾಟದ ಸಮಸ್ಯೆ ಬಗ್ಗೆ ತಪಾಸಣೆ ನಡೆಯಿತು

ಬಿಎಂಟಿಸಿ ಸಿಬ್ಬಂದಿಗೆ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿಯ ಸಿಬ್ಬಂದಿಗೆ ಪ್ರತಿ ಶನಿವಾರ ಮತ್ತು ಭಾನುವಾರ ಶ್ವಾಸಕೋಶ ಮತ್ತು ಉಸಿರಾಟದ ಸಮಸ್ಯೆಗಳ ಬಗ್ಗೆ ತಪಾಸಣೆ ನಡೆಸುವ ಯೋಜನೆ ಶನಿವಾರ ಆರಂಭವಾಯಿತು.

ಜಯನಗರದ 5ನೇ ಬ್ಲಾಕ್ ನಲ್ಲಿರುವ ‘ವಾಯು ಚೆಸ್ಟ್ ಆ್ಯಂಡ್ ಸ್ಲೀಪ್ ಸೆಂಟರ್’ನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ದಿನಕ್ಕೆ 50 ಸಿಬ್ಬಂದಿಗೆ ಅಧಿಕ ರಕ್ತದೊತ್ತಡ, ಆಮ್ಲಜನಕದ ಪ್ರಮಾಣ, ರಕ್ತದಲ್ಲಿ ಸಕ್ಕರೆಯ ಅಂಶ, ಶ್ವಾಸಕೋಶದ ಶಕ್ತಿ ಚೈತನ್ಯ, ಇಎನ್‌ಟಿ (ಕಿವಿ, ಮೂಗು, ಗಂಟಲು) ಪರೀಕ್ಷೆ, ಶ್ವಾಸಕೋಶದ ಎಕ್ಸ್–ರೇ ಸೇರಿದಂತೆ ಉಸಿರಾಟ ಹಾಗೂ ಶ್ವಾಸಕೋಶ ಸಂಬಂಧಿತ ತಪಾಸಣೆ ಮತ್ತು ತಜ್ಞರೊಡನೆ ಸಮಾಲೋಚನೆ ನಡೆಯಲಿದೆ.

ಸೆಂಟರ್ ನಿರ್ದೇಶಕ ಡಾ. ರವೀಂದ್ರ ಎಂ. ಮೆಹ್ತಾ ನೇತೃತ್ವದಲ್ಲಿ ತಪಾಸಣೆ ಮತ್ತು ಸಮಾಲೋಚನೆ ನಡೆಯಲಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ರಾಮಚಂದ್ರನ್ ಆರ್. ತಿಳಿಸಿದ್ದಾರೆ.

ಬಿಎಂಟಿಸಿಯ 40 ವರ್ಷ ದಾಟಿದ 11,200 ಸಿಬ್ಬಂದಿಗೆ ಈಗಾಗಲೇ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹೃದಯ ಸಂಬಂಧಿತ ತಪಾಸಣೆಯನ್ನು ಮಾಡಲಾಗಿದೆ ಎಂದು ಸಾರ್ವಜನಿಕ ಸಂಪರ್ಕ ಅಧಿಕಾರಿ ಮಾಹಿತಿ ನೀಡಿದ್ದಾರೆ.

‘ಸ್ಪೈ ರಿಸರ್ಚ್ ಟೀಂ’ನಿಂದ ಹಲವರ ಸುಲಿಗೆ

‘ರಾಜ್ ನ್ಯೂಸ್’ ಸುದ್ದಿ ವಾಹಿನಿಯ ವೆಂಕಟೇಶ್, ನಿರೂಪಕಿ ದಿವ್ಯಾ ಸಹೋದರ ಸಂದೇಶ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಸ್ಪಾ ವ್ಯವಸ್ಥಾಪಕರಿಗೆ ಬೆದರಿಸಿ ₹15 ಲಕ್ಷ ಸುಲಿಗೆಗೆ ಪ್ರಯತ್ನಿಸಿದ್ದ ಆರೋಪದಡಿ ‘ರಾಜ್ ನ್ಯೂಸ್’ ಸುದ್ದಿವಾಹಿನಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂದು ಹೇಳಿಕೊಂಡಿದ್ದ ವ್ಯಕ್ತಿ ಸೇರಿ ಇಬ್ಬರನ್ನು ಜೆ.ಬಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಾನುಕುಂಟೆ ವೆಂಕಟೇಶ್ ಹಾಗೂ ನಿರೂಪಕಿ ದಿವ್ಯಾ ವಸಂತಾ ಅವರ ಸಹೋದರ ಸಂದೇಶ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ಮೂರು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಪ್ರಕರಣ ದಾಖಲಾದ ಮೇಲೆ ದಿವ್ಯಾ, ಸಚಿನ್, ಆಕಾಶ್ ತಲೆಮರೆಸಿಕೊಂಡಿದ್ದಾರೆ.

ಇಂದಿರಾನಗರದ 100 ಅಡಿ ರಸ್ತೆಯ 15ನೇ ಮುಖ್ಯರಸ್ತೆಯಲ್ಲಿರುವ ‘ಟ್ರೀ ಸ್ಪಾ ಆ್ಯಂಡ್ ಬ್ಯೂಟಿ ಪಾರ್ಲರ್’ನ ವ್ಯವಸ್ಥಾಪಕ ಶಿವಕುಮಾರ್ ಅವರು ಜುಲೈ 1ರಂದು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ತಾಂತ್ರಿಕ ಮಾಹಿತಿ ಹಾಗೂ ಕೆಲವು ಸಾಕ್ಷ್ಯ ಆಧರಿಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ವೆಂಕಟೇಶ್

ದಿವ್ಯಾ ವಸಂತಾ

ಸಂದೇಶ್

ಆಕಾಶ್

ಅಪರಾಧ ಸುದ್ದಿ

ಏನಿದು ಪ್ರಕರಣ?: ‘ಬ್ಯೂಟಿ ಪಾರ್ಲರ್‌ನಲ್ಲಿ ವೇಶ್ಯಾವಾಟಿಕೆ ದಂಧೆ ನಡೆದಿದೆ’ ಎಂದು ಬೆದರಿಸಿ ಲಕ್ಷಾಂತರ ರೂಪಾಯಿ ಸುಲಿಗೆಗೆ ವೆಂಕಟೇಶ್ ಹಾಗೂ ಸಹಚರರು ಪ್ರಯತ್ನಿಸಿದ್ದರು.

‘ವೆಂಕಟೇಶ್ ಹಾಗೂ ದಿವ್ಯಾ ತಂಡದವರು ಜೂನ್ 21ರಂದು ಇಂದಿರಾನಗರದ ‘ಟ್ರೀ ಸ್ಪಾ ಆ್ಯಂಡ್ ಬ್ಯೂಟಿ ಪಾರ್ಲರ್’ಗೆ ಈಶಾನ್ಯ ರಾಜ್ಯದ ಯುವತಿಯನ್ನು ಕೆಲಸಕ್ಕೆ ಸೇರಿಸಿದ್ದರು. ಬಳಿಕ, ಗ್ರಾಹಕನ ಸೋಗಿನಲ್ಲಿ ಸ್ಪಾಗೆ ದಿವ್ಯಾ ಸಹೋದರ ಸಂದೇಶ್ ಬಂದಿದ್ದರು. ತಮ್ಮದೇ ತಂಡ ಕೆಲಸಕ್ಕೆ ಸೇರಿಸಿದ್ದ ಯುವತಿಯಿಂದ ಮಸಾಜ್ ಮಾಡಿಸಿಕೊಳ್ಳಲು ಬೇಡಿಕೆ ಸಲ್ಲಿಸಿದ್ದರು. ಅದಕ್ಕೆ ಒಪ್ಪಿದ್ದ ಸ್ಪಾ ಸಿಬ್ಬಂದಿ ಆಕೆಯನ್ನೇ ಕೊಠಡಿಗೆ ಕಳುಹಿಸಿದ್ದರು. ಆಗ ಕೊಠಡಿಯಲ್ಲಿ ರಹಸ್ಯ ಕ್ಯಾಮೆರಾವಿಟ್ಟು ಸಲುಗೆಯಿಂದಿರುವ ದೃಶ್ಯಗಳನ್ನು ಆರೋಪಿ ಚಿತ್ರೀಕರಿಸಿಕೊಂಡಿದ್ದರು. ಬಳಿಕ ಸುದ್ದಿವಾಹಿನಿಯ ವರದಿಗಾರ್ತಿಯನ್ನು ಸ್ಪಾಗೆ ಕಳುಹಿಸಿ ವೆಂಕಟೇಶ್ ಹಣ ಸುಲಿಗೆಗೆ ಯತ್ನಿಸಿದ್ದರು. ಸಂದೇಶ್ ಚಿತ್ರೀಕರಿಸಿಕೊಂಡಿದ್ದ ವಿಡಿಯೊವನ್ನು ಸ್ಪಾ ವ್ಯವಸ್ಥಾಪಕರಿಗೆ ಕಳುಹಿಸಿ ವೆಂಕಟೇಶ್ ಬೆದರಿಸಿದ್ದರು’ ಎಂದು ಪೊಲೀಸರು ಹೇಳಿದರು.

ದೊಡ್ಡ ಮೊತ್ತಕ್ಕೆ ಬೇಡಿಕೆ: ₹15 ಲಕ್ಷ ನೀಡಿದರೆ ವಿಡಿಯೊ ಡಿಲೀಟ್ ಮಾಡುವುದಾಗಿ ಆರೋಪಿಗಳು ಹೇಳಿದ್ದರು. ಬೆದರಿದ್ದ ಸ್ಪಾ ಸಿಬ್ಬಂದಿ, ‘ಅಷ್ಟು ಹಣವಿಲ್ಲ. ₹1 ಲಕ್ಷ ಮಾತ್ರವಿದೆ’ ಎಂದು ಹೇಳಿದ್ದರು. ಕೊನೆಗೆ ₹8 ಲಕ್ಷ ನೀಡುವಂತೆ ಪಟ್ಟು ಹಿಡಿದಿದ್ದರು. ಅದಾದ ಮೇಲೆ ವ್ಯವಸ್ಥಾಪಕರು ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.

ಗ್ರೂಪ್ ರಚನೆ: ‘ಆರೋಪಿಗಳಾದ ದಿವ್ಯಾ ಹಾಗೂ ವೆಂಕಟೇಶ್ ಅವರು ತಮ್ಮ ವಾಟ್ಸ್‌ಆ್ಯಪ್‌ನಲ್ಲಿ ಸುಲಿಗೆ ಕೃತ್ಯ ನಡೆಸಲು ‘ಸ್ಪೈ ರಿಸರ್ಚ್ ಟೀಂ’ ಹೆಸರಿನಲ್ಲಿ ಗ್ರೂಪ್ ಮಾಡಿಕೊಂಡಿದ್ದರು. ಮುಂದಿನ ಕಾರ್ಯಾಚರಣೆ ಬಗ್ಗೆ ಇದೇ ಗ್ರೂಪ್‌ನಲ್ಲಿ ಚರ್ಚಿಸುತ್ತಿದ್ದರು’ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸದ್ದು ಮಾಡಿದ್ದ ಖುಷಿ ಸುದ್ದಿ: ‘ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುತ್ತಿದ್ದ ದಿವ್ಯಾ ಆರು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು ಎನ್ನಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಇವರು ಸಕ್ರಿಯವಾಗಿದ್ದಾರೆ. ಸುದ್ದಿ ವಾಹಿನಿಯಲ್ಲಿ ಕಾರ್ಯಕ್ರಮ ನಿರೂಪಣೆ ನಡೆಸುತ್ತಿದ್ದ ವೇಳೆ ರಾಜ್ಯಕ್ಕೆ ಖುಷಿ ಸುದ್ದಿ ಎಂದು ದಿವ್ಯಾ ಪ್ರಸ್ತಾಪಿಸಿದ್ದ ಮಾತು ಸಾಮಾಜಿಕ ಮಾಧ್ಯಮದಲ್ಲಿ ಹೆಚ್ಚು ಸದ್ದು ಮಾಡಿತ್ತು’ ಎಂದು ಮೂಲಗಳು ಹೇಳಿವೆ.

‘ರಾಜ್ ನ್ಯೂಸ್ ಸುದ್ದಿ ವಾಹಿನಿ ಸೇರುವ ಮುನ್ನ ವೆಂಕಟೇಶ್ ಅವರು ತಮ್ಮದೇ ಯುಟ್ಯೂಬ್ ಚಾನಲ್ ನಡೆಸುತ್ತಿದ್ದರು. ಇದೇ ಚಾನಲ್‌ಗೆ ದಿವ್ಯಾ ಅವರು ಸಂದರ್ಶನಕ್ಕೆ ಬಂದಿದ್ದರು. ಆಗ ಇಬ್ಬರೂ ಪರಿಚಯವಾಗಿದ್ದರು. ಅದೇ ಸ್ನೇಹದ ಮೇಲೆ ಕೃತ್ಯಕ್ಕೆ ಇಳಿದಿದ್ದರು’ ಎಂದು ಪೊಲೀಸರು ಹೇಳಿದರು.

ಹಲವರಿಂದ ಹಣ ಸುಲಿಗೆ: ‘ಇವರಿಬ್ಬರು ವೈದ್ಯರು ಸೇರಿ ಹಲವರ ಬಳಿಯಿಂದ ಹಣ ಸುಲಿಗೆ ಮಾಡಿದ್ದಾರೆ. ಆನ್‌ಲೈನ್ ಮೂಲಕ ಪೇಮೆಂಟ್ ಮಾಡಿಸಿಕೊಂಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ. ಲಗ್ಗೆರೆಯಲ್ಲಿ ದಿವ್ಯಾ ನೆಲೆಸಿದ್ದು ತಲೆಮರೆಸಿಕೊಂಡಿದ್ದಾರೆ. ಮನೆಯಿಂದ ಕೆಲ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಮನೆಯಲ್ಲಿದ್ದ ಲ್ಯಾಪ್‌ಟಾಪ್ ಅನ್ನು ಆರೋಪಿ ತೆಗೆದುಕೊಂಡು ಹೋಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ವೆಂಕಟೇಶ್ ವಿರುದ್ಧ ಕ್ರಮ’

‘ಸುಲಿಗೆ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳಿಗೂ ‘ರಾಜ್’ ನ್ಯೂಸ್‌ಗೂ ಸಂಬಂಧ ಇಲ್ಲ. ನಾವು ಯಾವುದೇ ಸಿಇಒ ಹುದ್ದೆಯನ್ನು ಸೃಷ್ಟಿಸಿಲ್ಲ. ರಾಜಾನುಕುಂಟೆ ವೆಂಕಟೇಶ್ ಎಂಬುವವರು ಮೂರು ತಿಂಗಳಿಂದ ನಮ್ಮ ಸಂಸ್ಥೆಯಲ್ಲಿ ಮಾರುಕಟ್ಟೆ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ನಮ್ಮ ಸಂಸ್ಥೆಯ ಸಿಇಒ ಹಾಗೂ ಉದ್ಯೋಗಿ ಅಲ್ಲ. ಅವರು ಸಿಇಒ ಎಂದು ಹೇಳಿಕೊಂಡಿರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ’ ಎಂದು ಶಿವಶ್ರೀ ಮೀಡಿಯಾ ಸಂಸ್ಥೆಯ (ರಾಜ್ ನ್ಯೂಸ್) ವ್ಯವಸ್ಥಾಪಕ ನಿರ್ದೇಶಕ ಶಿವರುದ್ರಪ್ಪ ಪ್ರಕಟಣೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿಯಿಂದ ಶೋಧ ಕಾರ್ಯ, ಸಿಗದ ಸುಳಿವು

ರಾಜಕಾಲುವೆಯಲ್ಲಿ ಕೊಚ್ಚಿಹೋದ ಯುವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದ ಡೆಲಿವರಿ ಬಾಯ್ ಒಬ್ಬರು ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದು ರಾಜಕಾಲುವೆಗೆ ಬಿದ್ದಿದ್ದು, ಕೊಚ್ಚಿ ಹೋಗಿದ್ದಾರೆ.

ಬ್ಯಾಟರಾಯನಪುರದ ಹೇಮಂತ್ ಕುಮಾರ್ (28) ನಾಪತ್ತೆಯಾಗಿದ್ದು, ಅವರ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ. ಅವರು ಪೋರ್ಟರ್ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು.

‘ಶುಕ್ರವಾರ ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಮೈಸೂರು ರಸ್ತೆಯ ಜ್ಞಾನಭಾರತಿ ಕಡೆಯಿಂದ ಬ್ಯಾಟರಾಯನಪುರದ ಕಡೆಗೆ ತೆರಳುತ್ತಿದ್ದರು. ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿ ಬೈಕ್‌ನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಆಯತಪ್ಪಿ ರಸ್ತೆ ಪಕ್ಕದಲ್ಲಿರುವ ರಾಜಕಾಲುವೆಗೆ ಬಿದ್ದಿದ್ದರು. ರಾತ್ರಿ ಸುರಿದ ಭಾರಿ ಮಳೆಯಿಂದ ನೀರಿನ ಹರಿವು ಹೆಚ್ಚಾಗಿದ್ದರಿಂದ ಅವರು ಕೊಚ್ಚಿ ಹೋಗಿರುವ ಸಾಧ್ಯತೆಯಿದೆ’ ಎಂದು ಪೊಲೀಸರು ಹೇಳಿದರು.

‘ಶುಕ್ರವಾರ ರಾತ್ರಿಯೇ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದರು. ಆದರೆ, ತಡರಾತ್ರಿವರೆಗೂ ಹೇಮಂತ್ ಪತ್ತೆಯಾಗಿಲ್ಲ. ಹೀಗಾಗಿ ಶನಿವಾರ ಕೂಡ ಸುಮಾರು 2–3 ಕಿ.ಮೀ ಶೋಧ ನಡೆಸಲಾಯಿತು. ಆತನ ಸುಳಿವು ಸಿಕ್ಕಿಲ್ಲ. ಭಾನುವಾರ ಕಾರ್ಯಾಚರಣೆ ನಡೆಸಲಾಗುವುದು. ಸದ್ಯ ನಾಪತ್ತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ನಡೆದ ಸ್ಥಳದಲ್ಲಿ ಕಂದಕವಿದ್ದು, ಅದನ್ನು ಮುಚ್ಚಿಲ್ಲ. ಅದರಿಂದಲೇ ಈ ಅವಘಡ ಸಂಭವಿಸಿದೆ ಎಂದು ಸ್ಥಳೀಯರು ದೂರಿದ್ದಾರೆ.

ಡ್ರಗ್ಸ್ ದಂಧೆ: ತಾಯಿ, ಪುತ್ರಿ ವಿರುದ್ಧ ಎಫ್‌ಐಆರ್

ಬೆಂಗಳೂರು: ವಿದೇಶದಲ್ಲಿ ಕುಳಿತು ನಗರದಲ್ಲಿ ಡ್ರಗ್ಸ್ ದಂಧೆ ನಡೆಸುತ್ತಿದ್ದ ತಾಯಿ ಹಾಗೂ ಪುತ್ರಿ ಸೇರಿ ಮೂವರ ವಿರುದ್ಧ ಕೇಂದ್ರ ಅಪರಾಧ ದಳದ (ಸಿಸಿಬಿ) ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

‘ದುಬೈನಲ್ಲಿ ನೆಲೆಸಿರುವ ಲೀನಾ, ಅವರ ಪುತ್ರಿ ನತಾಲಿಯಾ ಹಾಗೂ ಬೆಂಗಳೂರಿನ ರಂಜನ್ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

‘23 ವರ್ಷದ ಪುತ್ರನಿಗೆ ಡ್ರಗ್ಸ್ ಪೂರೈಸಿದ್ದ ಆರೋಪಿಗಳ ವಿರುದ್ಧ ಕ್ರಮ ಕೋರಿ ಉದ್ಯಮಿಯೊಬ್ಬರು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು. ‘ತಾಯಿ ಹಾಗೂ ಪುತ್ರಿ ವಿದೇಶದಲ್ಲಿದ್ದುಕೊಂಡೇ ನಗರದ ರಂಜನ್ ಎಂಬುವವರಿಗೆ ಹೈಡ್ರೊ ಗಾಂಜಾ, ಎಂಡಿಎಂಎ ಕ್ರಿಸ್ಟಲ್ ಪೂರೈಸುತ್ತಿದ್ದರು. ಆರೋಪಿ ನತಾಲಿಯಾ ಆಗಾಗ್ಗೆ ಬೆಂಗಳೂರಿಗೆ ಬರುತ್ತಿದ್ದರು. ಕೆಲ ದಿನಗಳು ನೆಲೆಸಿ ಗ್ರಾಹಕರನ್ನು ಸೆಳೆಯುತ್ತಿದ್ದರು. ಗ್ರಾಹಕರಿಂದ ಹಣ ಪಡೆಯಲು ಆರೋಪಿಗಳು ಬ್ಯಾಂಕ್‌ನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆದಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಡ್ರಗ್ಸ್ ಪೂರೈಕೆಯಲ್ಲಿ ಹಲವರು ಭಾಗಿಯಾಗಿರುವ ಮಾಹಿತಿಯಿದೆ. ಎಫ್‌ಐಆರ್ ದಾಖಲಾಗಿರುವ ಮೂವರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಮೊಬೈಲ್ ಚಾರ್ಜ್: ವಿದ್ಯುತ್ ಪ್ರವಹಿಸಿ ವಿದ್ಯಾರ್ಥಿ ಸಾವು

ಬೆಂಗಳೂರು: ನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಪಿಜಿಯೊಂದರಲ್ಲಿ ಶುಕ್ರವಾರ ರಾತ್ರಿ ಮೊಬೈಲ್ ಫೋನ್ ಚಾರ್ಜ್‌ಗೆ ಹಾಕುವಾಗ ವಿದ್ಯುತ್ ಪ್ರವಹಿಸಿ ವಿದ್ಯಾರ್ಥಿ ಶ್ರೀನಿವಾಸ್ (23) ಮೃತಪಟ್ಟಿದ್ದಾರೆ.

‘ಬೀದರ್‌ನ ಶ್ರೀನಿವಾಸ್ ಬಿಎಸ್ಸಿ ಪದವಿ ಪಡೆದಿದ್ದರು. ಕಂಪ್ಯೂಟರ್ ಕೋರ್ಸ್ ಮಾಡಲು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ಪಿ.ಜಿಯಲ್ಲಿ ನೆಲೆಸಿದ್ದರು. ಶುಕ್ರವಾರ ರಾತ್ರಿ ಶೌಚಾಲಯದಿಂದ ಬಂದು ತೇವದ ಕೈಯಲ್ಲಿ ಮೊಬೈಲ್ ಫೋನ್ ಚಾರ್ಜ್‌ಗೆ ಹಾಕಲು ಮುಂದಾಗಿದ್ದಾರೆ. ಆಗ ವಿದ್ಯುತ್ ಪ್ರವಹಿಸಿದೆ. ಪ್ರಜ್ಞಾಹೀನವಾಗಿ ಬಿದ್ದಿದ್ದ ಶ್ರೀನಿವಾಸ್ ಅವರನ್ನು ಕಂಡ ಸ್ನೇಹಿತರು ಮುಟ್ಟಿ ಎಚ್ಚರಗೊಳಿಸಲು ಮುಂದಾಗಿದ್ದಾರೆ. ಆಗ ಅವರಿಗೂ ವಿದ್ಯುತ್ ಶಾಕ್ ಹೊಡೆದಿದೆ’ ಎಂದು ಪೊಲೀಸರು ಹೇಳಿದರು.

‘ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿ, ಶ್ರೀನಿವಾಸ್‌ನನ್ನು ಸಮೀಪದ ಆಸ್ಪತ್ರೆಗೆ ಕರದೊಯ್ದಿದ್ದಾರೆ. ಪರೀಕ್ಷಿಸಿದ ವೈದ್ಯರು ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿರುವುದಾಗಿ ದೃಢಪಡಿಸಿದ್ದರು’ ಎಂದರು.

ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಪ್ರಕರಣ ದಾಖಲಾಗಿದೆ.

1 ಲಕ್ಷ ಆಟೊಗಳಿಗೆ ಪರವಾನಗಿ ನೀಡಲು ಸರ್ಕಾರದ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜನಸಂಖ್ಯೆ ತೀವ್ರಗತಿಯಲ್ಲಿ ಏರಿಕೆಯಾಗಿದೆ. ಅದಕ್ಕೆ ಅನುಗುಣವಾಗಿ 1 ಲಕ್ಷ ಆಟೊ ರಿಕ್ಷಾಗಳಿಗೆ ಪರವಾನಗಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ನಗರದಲ್ಲಿ ಸದ್ಯ 1.55 ಲಕ್ಷ ಆಟೊಗಳಿವೆ. ಇವುಗಳ ಸಂಖ್ಯೆಯನ್ನು ಮುಂದಿನ ಐದು ವರ್ಷಗಳಲ್ಲಿ 2.55 ಲಕ್ಷಕ್ಕೆ ಏರಿಸಲಾಗುವುದು’ ಎಂದು ಸಾರಿಗೆ ಇಲಾಖೆ ಈ ಕುರಿತ ಅಧಿಸೂಚನೆಯಲ್ಲಿ ತಿಳಿಸಿದೆ.

‘ವಾಯು ಮತ್ತು ಶಬ್ದ ಮಾಲಿನ್ಯವನ್ನು ತಪ್ಪಿಸಲು ಎಲ್‌ಪಿಜಿ, ಸಿಎನ್‌ಜಿ ಕಿಟ್, ಎಲೆಕ್ಟ್ರಿಕ್‌ನ ‘ಹಸಿರು’ ಆಟೊಗಳಿಗೆ ಪರವಾನಗಿ ನೀಡಲಾಗುವುದು. ಈ ಆಟೊಗಳು ಡಿಜಿಟಲ್ ದರ ಮೀಟರ್ ಹೊಂದಿರಬೇಕು. ಈಗ ಆಟೊರಿಕ್ಷಾ ಪರ್ಮಿಟ್ ಹೊಂದಿರುವವರಿಗೆ ಪರವಾನಗಿ ನೀಡಲಾಗುವುದಿಲ್ಲ’ ಎಂದು ತಿಳಿಸಿದೆ.

ಈ ಹಿಂದೆ 2018ರಲ್ಲಿ 30 ಸಾವಿರ ಆಟೊಗಳಿಗೆ ಪರವಾನಗಿಯನ್ನು ನೀಡಲು ಆದೇಶಿಸಲಾಗಿತ್ತು. ಐದು ವರ್ಷಗಳ ನಂತರ 1 ಲಕ್ಷ ಆಟೊಗಳಿಗೆ ಪರವಾನಗಿ ನೀಡಲು ನಿರ್ಧರಿಸಲಾಗಿದೆ.

ನಗರದ ಇನ್ನಷ್ಟು ಸುದ್ದಿಗಳಿಗಾಗಿ ಪುಟ 8B, 9A ನೋಡಿ

ಅನಧಿಕೃತ ಕೇಬಲ್‌ಗಳ ತೆರವಿಗೆ ಬೆಸ್ಕಾಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕಂಬಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಒಎಫ್‌ಸಿ ಕೇಬಲ್, ಡೇಟಾ ಕೇಬಲ್ ಹಾಗೂ ಡಿಶ್ ಕೇಬಲ್‌ಗಳನ್ನು ಜುಲೈ 8ರ ಒಳಗೆ ತೆರವುಗೊಳಿಸಲು ಬೆಸ್ಕಾಂ ಸೂಚನೆ ನೀಡಿದೆ.

2023ರ ಆಗಸ್ಟ್‌ನಲ್ಲಿ ಬೆಸ್ಕಾಂನಿಂದ ವಿಶೇಷ ಕಾರ್ಯಾಚರಣೆ ನಡೆಸಿ ಕೇಬಲ್‌ಗಳನ್ನು ತೆರವು ಮಾಡಲಾಗಿತ್ತು. ಮತ್ತೆ ಕೇಬಲ್ ಅಳವಡಿಸಲಾಗಿದೆ.

‘ಸಂಬಂಧಿಸಿದ ಇಂಟರ್‌ನೆಟ್ ಸೇವಾ ಕಂಪನಿಗಳು, ಟಿವಿ ಕೇಬಲ್ ಆಪರೇಟರ್‌ಗಳು ತೆರವುಗೊಳಿಸದೇ ಇದ್ದರೆ ಬೆಸ್ಕಾಂ ವತಿಯಿಂದ ಯಾವುದೇ ಸೂಚನೆ ನೀಡದೇ ತೆರವುಗೊಳಿಸಲಾಗುವುದು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದೆ.

ಕೇಬಲ್

ಅನಧಿಕೃತ ಕೇಬಲ್‌ಗಳಿಂದಾಗಿ ವಿದ್ಯುತ್ ಅವಘಡ ಉಂಟಾದರೆ ಸಂಬಂಧಿಸಿದ ಕೇಬಲ್ ಆಪರೇಟರ್‌ಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ತಿಳಿಸಿದೆ.

ವಿದ್ಯಾರ್ಥಿಗಳಿಗೆ ‘ಡೆಂಗಿ ವಾರಿಯರ್’ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಡೆಂಗಿ ಪ್ರಕರಣಗಳನ್ನು ನಿಯಂತ್ರಿಸಲು ಬಿಬಿಎಂಪಿ ಆರೋಗ್ಯ ವಿಭಾಗವು ನಾಗರಿಕರು, ವಿದ್ಯಾರ್ಥಿಗಳಿಗೆ ‘ಡೆಂಗಿ ವಾರಿಯರ್’ ಸ್ಪರ್ಧೆ ಆಯೋಜಿಸಿದೆ.

‘ಡೆಂಗಿ ನಿಯಂತ್ರಣಕ್ಕಾಗಿ ನಾಗರಿಕರು, ವಿದ್ಯಾರ್ಥಿಗಳು ಕೈಗೊಂಡಿರುವ ಕ್ರಮಗಳು, ಜಾಗೃತಿ ಕಾರ್ಯಕ್ರಮಗಳ ಬಗ್ಗೆ ಕಿರು ಚಿತ್ರಗಳನ್ನು ಮಾಡಿ, ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ, ಬಿಬಿಎಂಪಿ ಖಾತೆಗೆ (@BBMPSplHealth) ಟ್ಯಾಗ್ ಮಾಡಬೇಕು. ಅದರ ಜೊತೆಗೆ https://bit.ly/3zFFNKg ಲಿಂಕ್ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ವಿಡಿಯೊಗಳನ್ನು ಜುಲೈ 25ರೊಳಗೆ ಸ್ವವಿವರಗಳೊಂದಿಗೆ ಅಪ್‌ಲೋಡ್ ಮಾಡಬಹುದು’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ. ತಿಳಿಸಿದ್ದಾರೆ.

ಲೈಕ್ ಆಧರಿಸಿ ಐದು ಅತ್ಯುತ್ತಮ ವಿಡಿಯೊ ಮಾಡಿದ ವಿದ್ಯಾರ್ಥಿಗಳಿಗೆ ‘ಡೆಂಗಿ ವಾರಿಯರ್’ ಎಂಬ ಬಿರುದು ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಹೊಸ ಕಾಯ್ದೆ: ಸರ್ಕಾರದ ನಡೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಕ್ರಿಮಿನಲ್ ಕಾಯ್ದೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಯು ಅತ್ಯಾಚಾರ ವಿರುದ್ಧದ ಸೆಕ್ಷನ್‌ಗಳಿಗೆ ಎತ್ತಿರುವ ಆಕ್ಷೇಪಗಳಿಗೆ ಭಾರತೀಯ ಮಹಿಳಾ ಒಕ್ಕೂಟದ ರಾಜ್ಯ ಸಮಿತಿ ವಿರೋಧ ವ್ಯಕ್ತಪಡಿಸಿದೆ.

‘ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಸೆಕ್ಷನ್‌ಗಳನ್ನು ಲಿಂಗತ್ವ ತಟಸ್ಥ ಮಾಡಬೇಕು ಎಂದು ಸಮಿತಿ ಪ್ರಸ್ತಾಪಿಸಿರುವುದನ್ನು ಕೂಡಲೇ ಹಿಂಪಡೆಯಬೇಕು. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀದ್ವೇಷ ಆಳವಾಗಿ ಬೇರೂರಿವಾಗ ಲಿಂಗತ್ವ ತಟಸ್ಥ ಮಾಡಬೇಕು ಎಂದು ಹೇಳುವುದು ಮಹಿಳಾ ಸಮುದಾಯಕ್ಕೆ ಮತ್ತು ಸಾಂವಿಧಾನಿಕ ಮೌಲ್ಯಗಳಿಗೆ ಅಪಚಾರ ಮಾಡಿದಂತಾಗುತ್ತದೆ’ ಎಂದು ಸಮಿತಿಯ ಅಧ್ಯಕ್ಷೆ ಜ್ಯೋತಿ ಎ., ಕಾರ್ಯದರ್ಶಿ ರೇಣುಕಾ ಕೆ. ತಿಳಿಸಿದ್ದಾರೆ.

ರೌಡಿ ಶೀಟರ್ ಕೊಲೆ: 6 ಮಂದಿಗೆ ಜೀವಾವಧಿ ಸಜೆ ಕಾಯಂ

ಬೆಂಗಳೂರು: ಬೊಮ್ಮನಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಶೀಟರ್ ಅರುಣ್ ಕೊಲೆ ಸಂಬಂಧ ಆರು ಜನರಿಗೆ ಸೆಷನ್ಸ್ ಕೋರ್ಟ್ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ. ಒಬ್ಬ ಅಪರಾಧಿಯನ್ನು ಖುಲಾಸೆಗೊಳಿಸಿದೆ.

ಈ ಕುರಿತ ಕ್ರಿಮಿನಲ್ ಮೇಲ್ಮನವಿ ಮೇಲಿನ ಆದೇಶವನ್ನು ನ್ಯಾಯಮೂರ್ತಿಗಳಾದ ಶ್ರೀನಿವಾಸ ಹರೀಶ್ ಕುಮಾರ್, ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

ಏಳನೇ ಆರೋಪಿ ಬಂಡೆಪಾಳ್ಯದ ಅಂಗಡಿ ರಾಜಣ್ಣ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ರಾಜಣ್ಣ ವಿರುದ್ಧ ಕೊಲೆಗೆ ಸಂಚು ಆರೋಪಕ್ಕೆ ಪೂರಕ ಸಾಕ್ಷ್ಯಗಳು ಲಭ್ಯವಿಲ್ಲ. ಅವರನ್ನು ಖುಲಾಸೆಗೊಳಿಸಬೇಕು’ ಎಂದು ಮಾಡಿದ ಮನವಿಯನ್ನು ನ್ಯಾಯಪೀಠ ಪುರಸ್ಕರಿಸಿ, ಶಿಕ್ಷೆಯಿಂದ ಖುಲಾಸೆಗೊಳಿಸಿತು.

ಅರುಣ್ ಕೊಲೆ 2017ರ ಫೆಬ್ರುವರಿ 5ರಂದು ನಡೆದಿತ್ತು. ಈ ಸಂಬಂಧ ಏಳು ಜನರನ್ನು ಬಂಧಿಸಿದ್ದ ಪೊಲೀಸರು ಐಪಿಸಿ ಕಲಂ 143, 147, 148, 120(ಬಿ), 302 ಮತ್ತು 149 ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಅಧಿನಿಯಮದ ಕಲಂ 3(2),(5)ರ ಅಡಿ ಪ್ರಕರಣ ದಾಖಲಿಸಿದ್ದು, ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

Commercial Premises Required at Bangalore City

A Leading Private Sector Bank requires commercial premises for long lease on Gr. Floor (1000 to 1400 sq. ft. carpet) in following areas of Bangalore

- KIADB
- Horamavu (from Horamavu Signal to 1km)
- BTM 1st Stage
- Konnenkunte Cross Near Falcon Mall
- Konappana agrahara (Bommanahalli to ECITY stretch)
- Near Bannerghatta National Park
- BTM 2nd Stage

Interested parties may send their details to Subhabrata Majumdar 98313 14521 | Shankarnag M 83559 80124

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, 2ನೇ ಮಹಡಿ, ಸೆಂಟ್ರಮ್ ಕಟ್ಟಡ, ಏರ್‌ಪೋರ್ಟ್ ರಸ್ತೆ, ಹುಬ್ಬಳ್ಳಿ. ಫೋ: 0836-2239424

NOTICE FOR EMPANELMENT

ಸಿವಿಲ್ / ಸ್ಟ್ರಕ್ಚರಲ್ ಕನ್ಸಲ್ಟೆಂಟ್ಸ್, ಆರ್ಕಿಟೆಕ್ಸ್, ಇಲೆಕ್ಟ್ರಿಕಲ್ ಕನ್ಸಲ್ಟೆಂಟ್ಸ್, ಸಿವಿಲ್, ಇಂಟೀರಿಯರ್ ಫರ್ನಿಷಿಂಗ್ & ಇಲೆಕ್ಟ್ರಿಕಲ್ ಕಂಟ್ರ್ಯಾಕ್ಟರ್ಸ್, ಇಲೆಕ್ಟ್ರಿಕಲ್ ಫಿಕ್ಚರ್ಸ್, ಫಿಟ್ಟಿಂಗ್ಸ್ & ಇಕ್ವಿಪ್‌ಮೆಂಟ್ಸ್ ಸಪ್ಲಾಯರ್ಸ್, ಆಫೀಸ್ ಫರ್ನಿಚರ್ / ಮಾಡ್ಯೂಲರ್ ಫರ್ನಿಚರ್ ಸಪ್ಲಾಯರ್ಸ್, ಏರ್ ಕಂಡಿಷನರ್ ಸಪ್ಲಾಯರ್ಸ್ & ಸರ್ವಿಸ್ ಪ್ರೊವೈಡರ್ಸ್, ಗ್ಲೊ ಸೈನ್ ಬೋರ್ಡ್ ವೆಂಡರ್ಸ್, ಯುಪಿಎಸ್ ಸಪ್ಲಾಯರ್ಸ್ & ಸರ್ವಿಸ್ ಪ್ರೊವೈಡರ್ಸ್, ಪೆಸ್ಟ್ ಕಂಟ್ರೋಲ್ ಸರ್ವೀಸ್ಸ್ ಏಜೆನ್ಸಿ, ಲ್ಯಾಂಡ್‌ಸ್ಕೆಪಿಂಗ್, ಫೈರ್ ಅಲಾರಾಮ, ಬರ್ಗಲರ್ ಅಲಾರಾಂ, ಸಿಸಿಟಿವಿ ಸರ್ವೇಲನ್ಸ್ ಸಿಸ್ಟಮ್ಸ್, ಫೈರ್ ಎಕ್ಸ್‌ಟಿಂಗ್‌ವಿಷರ್, ಸೆಕ್ಯೂರಿಟಿ ಐಟಮ್ಸ್ (ಸ್ಟ್ರಾಂಗ್ ರೂಮ್ ಡೋರ್, ಟಿಆರ್‌ಟಿಎಲ್ / ಎಫ್‌ಆರ್‌ಆರ್‌ಸಿ ಸೇಫ್, ಸೇಫ್ ಡೆಪಾಸಿಟ್ ಲಾಕರ್ಸ್) ಸಪ್ಲಾಯರ್ಸ್, ಪ್ರೈವೇಟ್ ಸೆಕ್ಯೂರಿಟಿ ಸರ್ವೀಸ್ ಮತ್ತು ಹೌಸ್ ಕೀಪಿಂಗ್ ಏಜೆನ್ಸಿಗಳಿಂದ ಎಂಪೆನೆಲ್ಮೆಂಟಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿಯ ನಮೂನೆಯನ್ನು ಮೇಲ್ಕಂಡ ಕಚೇರಿಯ ವಿಳಾಸದಿಂದ ರೂ.590/- ಡಿಮ್ಯಾಂಡ ಡ್ರಾಫ್ಟ್ ರೂಪದಲ್ಲಿ ಸಲ್ಲಿಸಿಪಡೆಯಬಹುದಾಗಿದೆ. ಅರ್ಜಿಗಳೊಂದಿಗೆ ವಿವರಗಳನ್ನು ಕೂಡಾ ಬ್ಯಾಂಕಿನ ವೆಬ್‌ಸೈಟ್ www.canarabank.com ಮತ್ತು ಸರಕಾರಿ ಇ-ಪ್ರಕ್ಯೂರಮೆಂಟ್ ವೆಬ್‌ಸೈಟ್ www.eprocure.gov.in ನಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಹಿಂತಹ ಪ್ರಕ್ರೀಯೆಯಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಅರ್ಜಿ ಶುಲ್ಕ ರೂ. 590/-ನ್ನು ಡಿಮ್ಯಾಂಡ ಡ್ರಾಫ್ಟ್ ರೂಪದಲ್ಲಿ ಸಲ್ಲಿಸಬೇಕಾಗಬಹುದು. ಭರ್ತಿ ಮಾಡಿದ ಅರ್ಜಿಯನ್ನು ಇತರ ಎಲ್ಲ ದಾಖಲೆಗಳೊಂದಿಗೆ ಮೇಲ್ಕಾಣಿಸಿದ ಬ್ಯಾಂಕಿನ ವಿಳಾಸಕ್ಕೆ ದಿನಾಂಕ: 29-07-2024ರಂದು ಮಧ್ಯಾಹ್ನ 3.00 ಗಂಟೆಯೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ತಲುಪುವಂತೆ ಸಲ್ಲಿಸಬೇಕು.

ಸ್ಥಳ: ಹುಬ್ಬಳ್ಳಿ
ದಿನಾಂಕ : 07-07-2024
ಸಹಿ/- ಸಹಾಯಕ ಮುಖ್ಯ ವ್ಯವಸ್ಥಾಪಕರು

ಅಡ್ವಾಣಿಗೆ ಶ್ರದ್ಧಾಂಜಲಿ ಸಲ್ಲಿಸಿದ ಸೋಮಣ್ಣ, ಡಾ.ಮಂಜುನಾಥ್

ಪ್ರಜಾವಾಣಿ ವಾರ್ತೆ

ಗುಬ್ಬಿ/ಕುಣಿಗಲ್ (ತುಮಕೂರು): ಕೇಂದ್ರ ಸಚಿವ ವಿ. ಸೋಮಣ್ಣ ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಸಂಸದ ಡಾ.ಸಿ.ಎನ್. ಮಂಜುನಾಥ್ ಶನಿವಾರ ಬಿಜೆಪಿ ಹಿರಿಯ ಮುಖಂಡ ಎಲ್.ಕೆ ಅಡ್ವಾಣಿ ನಿಧನರಾಗಿದ್ದಾರೆ ಎಂದು ಘೋಷಿಸಿ, ಶ್ರದ್ಧಾಂಜಲಿ ಸಲ್ಲಿಸಿದರು. ಸುದ್ದಿ ಸುಳ್ಳು ಎಂದು ಗೊತ್ತಾದ ನಂತರ ತಮ್ಮಿಂದ ಆದ ಈ ಅಚಾತುರ್ಯಕ್ಕೆ ಇಬ್ಬರೂ ಕ್ಷಮೆ ಕೋರಿದರು.

ಗುಬ್ಬಿಯಲ್ಲಿ ನಡೆದ ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ಅಭಿನಂದನಾ ಸಮಾರಂಭದಲ್ಲಿ ಭಾಷಣ ಮಾಡುತ್ತಿದ್ದ ಕೇಂದ್ರ ಸಚಿವ ವಿ.ಸೋಮಣ್ಣ ಅವರಿಗೆ ವೇದಿಕೆಯಲ್ಲಿದ್ದ ಕಾರ್ಯಕರ್ತರು ಮತ್ತು ಪಕ್ಷದ ಮುಖಂಡರು, 'ಎಲ್.ಕೆ ಅಡ್ವಾಣಿ ನಿಧನರಾದರು' ಎಂಬ ಸುದ್ದಿ ತಿಳಿಸಿದರು.

ಕೂಡಲೇ ಭಾಷಣ ನಿಲ್ಲಿಸಿದ ಸೋಮಣ್ಣ, 'ನಮ್ಮ ನಾಯಕ ಅಡ್ವಾಣಿ ಅವರು ಈಗ ತಾನೇ ನಿಧನರಾದರು' ಎಂದು ಕಾರ್ಯಕ್ರಮದಲ್ಲಿ ಘೋಷಿಸಿದರು. ಎಲ್ಲರೂ ಎರಡು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸೋಣ ಎಂದು ಮನವಿ ಮಾಡಿದರು.

ಸತ್ಯ ಸಂಗತಿ ತಿಳಿದ ಬಳಿಕ ಮುಜುಗರಕ್ಕೆ ಒಳಗಾದ ಅವರು, ತಮ್ಮಿಂದಾದ ಅಚಾತುರ್ಯಕ್ಕೆ ಕ್ಷಮೆ ಕೋರಿ ಅವಸರದಿಂದಲೇ ಸಭೆಯಿಂದ ನಿರ್ಗಮಿಸಿದರು.

ಮತ್ತೊಂದೆಡೆ, ಕುಣಿಗಲ್‌ನಲ್ಲಿ ನಡೆದ ಜೆಡಿಎಸ್, ಬಿಜೆಪಿ ಕಾರ್ಯಕರ್ತರ ಅಭಿನಂದನಾ ಸಮಾರಂಭದಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಕೂಡ ಇದೇ ಎಡವಟ್ಟು ಮಾಡಿದರು.

ಅಡ್ವಾಣಿ ನಿಧನರಾಗಿದ್ದಾರೆ ಎಂದು ಕಾರ್ಯಕರ್ತರ ಸುಳಿವಿನಲ್ಲಿ ಘೋಷಣೆ ಮಾಡಿದರು. ಮಾಜಿ ಸಚಿವ ಡಿ.ನಾಗರಾಜಯ್ಯ, ಸೇರಿದಂತೆ ನೂರಾರು ಬಿಜೆಪಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಸತ್ಯ ಸಂಗತಿ ಗೊತ್ತಾದ ಬಳಿಕ ಎಚ್ಚೆತ್ತ ಅವರು, 'ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾದ ಸುಳ್ಳು ಸುದ್ದಿಯಿಂದ ಈ ಅಚಾತುರ್ಯವಾಗಿದೆ' ಎಂದು ಕಾರ್ಯಕ್ರಮದ ಕೊನೆಯಲ್ಲಿ ವಿಷಾದ ವ್ಯಕ್ತಪಡಿಸಿದರು.

ಬದಲಿ ನಿವೇಶನ ಹಂಚಿಕೆಯಲ್ಲಿ ಅಧ್ಯಕ್ಷರ 'ದ್ವಂದ್ವ ನಿಲುವು': ಶಾಸಕರಿಂದಲೂ 'ಪತ್ರ ಸಮರ'

ಮುಡಾದಲ್ಲಿ ಶಿಫಾರಸುಗಳದ್ದೇ ಕಾರುಬಾರು

● ಆರ್. ಜಿತೇಂದ್ರ

ಮೈಸೂರು: '50:50 ಅನುಪಾತದಲ್ಲಿ ಇವರಿಗೆ ನಿವೇಶನ ಹಂಚಿಕೆ ಮಾಡಿ' ಎಂದು ಆಯುಕ್ತರಿಗೆ 'ಟಿಪ್ಪಣಿ' ಕಳುಹಿಸುವ ಅಧ್ಯಕ್ಷರು, ತಿಂಗಳಲ್ಲೇ ತಮ್ಮ ಅಭಿಪ್ರಾಯ ಬದಲಿಸಿ 'ನಿವೇಶನ ಕೊಡಬೇಡಿ' ಎಂದು ಆದೇಶಿಸುತ್ತಾರೆ. ಮತ್ತೆ ಕೆಲವು ಪ್ರಕರಣಗಳಲ್ಲಿ, 'ಇವರಿಗೆ ನಿವೇಶನ ಕೊಡಿ, ಅವರಿಗೆ ಕೊಡಬೇಡಿ' ಎಂದು ಶಾಸಕರು ಪತ್ರ ಬರೆಯುತ್ತಾರೆ!

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಕೇವಲ ಅಧಿಕಾರಿಗಳ ದರ್ಬಾರು ಮಾತ್ರವಲ್ಲ, ಅಧ್ಯಕ್ಷರು ಹಾಗೂ ಅನೇಕ ಜನಪ್ರತಿನಿಧಿಗಳ 'ಶಿಫಾರಸುಗಳು' ಕೆಲಸ ಮಾಡಿರುವ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ. ಮುಡಾದ ಹಾಲಿ ಅಧ್ಯಕ್ಷ ಕೆ. ಮರಿಗೌಡ ಅವರ 'ದ್ವಂದ್ವ ನಿಲುವು' ಸಹ ಪ್ರಶ್ನೆಗೆ ಒಳಗಾಗಿದೆ.

2023ರ ಅಕ್ಟೋಬರ್‌ನಲ್ಲಿ ಮುಡಾ ಆಯುಕ್ತರಿಗೆ ಪತ್ರ ಬರೆಯುವ ಸರ್ಕಾರ, ಹಳೆಯ ಪ್ರಕರಣಗಳಲ್ಲಿ 50:50 ಅನುಪಾತದ ಅಡಿ ಬದಲಿ ನಿವೇಶನ ಹಂಚಿಕೆ ಮಾಡದಂತೆ ಖಡಕ್ ಸೂಚನೆ ನೀಡುತ್ತದೆ. ಹೀಗಿದ್ದರೂ, 2024ರ ಮೇ 27ರಂದು ಮುಡಾ ಆಯುಕ್ತರಿಗೆ 'ಅಂತರಿಕ ಟಿಪ್ಪಣಿ' ಕಳುಹಿಸುವ ಅಧ್ಯಕ್ಷ ಮರಿಗೌಡ, 'ಮೈಸೂರು ಗ್ರಾಮದ ಸರ್ವೆ ಸಂಖ್ಯೆ 86ರಲ್ಲಿ 7 ಎಕರೆ ಮೂರು ಗುಂಟೆ ಜಮೀನಿನ ಭೂಮಾಲೀಕರಿಗೆ ಈಗಾಗಲೇ ಬದಲಿ ನಿವೇಶನಕ್ಕೆ ಆದೇಶವಾಗಿದ್ದು, ಅದರಂತೆ ಪರಿಹಾರ ಕೊಡಿ' ಎಂದು ಸೂಚಿಸುತ್ತಾರೆ.

ಜೂನ್ 24ರಂದು ಆಯುಕ್ತರಿಗೆ ಮತ್ತೊಂದು ಟಿಪ್ಪಣಿ ಕಳುಹಿಸುವ ಅವರು, 'ಮೈಸೂರು ಗ್ರಾಮದ ಸರ್ವೆ ಸಂಖ್ಯೆ 86ರ ಭೂಮಾಲೀಕರಿಗೆ ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ದೂರುಗಳು ಬಂದಿದ್ದು, ಅದಕ್ಕೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳನ್ನು ತಕ್ಷಣದಿಂದ ತಡೆ ಹಿಡಿಯಿರಿ' ಎಂದು ಸೂಚಿಸುತ್ತಾರೆ!

ಆಡಳಿತ ಪಕ್ಷದ ಪ್ರತಿನಿಧಿಯಾಗಿ, ಅಧ್ಯಕ್ಷರಾಗುವ ಅವಕಾಶ ಪಡೆದಿದ್ದ ಮರಿಗೌಡ, 'ಅಕ್ರಮ ನಡೆದಿದೆ' ಎಂದು ತಾವೇ ಆರೋಪಿಸಿ ಪತ್ರ ಬರೆದಿದ್ದು, ನಂತರ ಆ ಪ್ರಕರಣ ಸರ್ಕಾರಕ್ಕೆ ನುಂಗಲಾರದ ತುತ್ತಾಗುತ್ತಿರುವುದು ಕಾಂಗ್ರೆಸ್ ಪಾಳಯದಲ್ಲೇ ಅಸಮಾಧಾನಕ್ಕೆ ಕಾರಣವಾಗಿದೆ.

ಈ ಕುರಿತು ಪ್ರತಿಕ್ರಿಯೆಗೆ ಮುಡಾ ಅಧ್ಯಕ್ಷ ಕೆ. ಮರಿಗೌಡ ದೂರವಾಣಿ ಮೂಲಕ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಪ್ರಕರಣ ಬೆಳಕಿಗೆ ಬರುವ ಮುನ್ನ ಕೆಲವು ಶಾಸಕರು 'ಪತ್ರ ಸಮರ' ನಡೆಸಿದ್ದು, ಇಂತಹವರಿಗೆ ನಿವೇಶನ ಕೊಡಬೇಡಿ ಎಂದು ಉಲ್ಲೇಖಿಸಿದ್ದರು. ಪ್ರಕರಣ ಬೆಳಕಿಗೆ ಬರುತ್ತಲೇ ಬಹುತೇಕ ಶಾಸಕರು '50:50' ಹಂಚಿಕೆ ವಿರುದ್ಧವಾಗಿ ಮುಡಾಕ್ಕೆ ಹಾಗೂ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದಾರೆ.

ಅಧ್ಯಕ್ಷರ ಪಕ್ಷ ಬದಲು: ಬಿಜೆಪಿ ನಿಲುವೂ ಬದಲು

ಕಳೆದ ಬಾರಿ, ಬಿಜೆಪಿ ಸರ್ಕಾರದ ಕಡೆಯ ಅವಧಿಯಲ್ಲಿ ಯಶಸ್ವಿ ಸೋಮಶೇಖರ್‌ಗೂ ಮುನ್ನ ಎಚ್.ವಿ. ರಾಜೀವ್ ಮುಡಾ ಅಧ್ಯಕ್ಷರಾಗಿದ್ದರು. ವಿಧಾನಸಭೆ ಚುನಾವಣೆ ನಂತರ ಅವರು ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದಾರೆ. 'ಬಿಜೆಪಿ ಅವಧಿಯಲ್ಲಿನ ನಿವೇಶನಗಳ ಹಂಚಿಕೆಯನ್ನೂ ತನಿಖೆಗೆ ಒಳಪಡಿಸಿ' ಎಂದು ಬಿಜೆಪಿಯೇ ಒತ್ತಾಯಿಸುತ್ತಿರುವುದರ ಹಿಂದೆ ರಾಜೀವ್ ಅವರನ್ನು ಹಣಿಯುವ ತಂತ್ರಗಾರಿಕೆಯೂ ಇದೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ದೂರುತ್ತಾರೆ.

'₹4 ಸಾವಿರ ಕೋಟಿ ನಷ್ಟ'

'ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣವನ್ನು ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು' ಎಂದು ಕೋರಿ ರೈತ ಸಂಘಟನೆಗಳ ಒಕ್ಕೂಟವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದೆ.

'2015ರ ನಂತರ, ಮುಡಾದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಈವರೆಗೆ ಸುಮಾರು 6 ಸಾವಿರ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿರುವ ಸಾಧ್ಯತೆ ಇದೆ. ಅದರಿಂದ ಸರ್ಕಾರಕ್ಕೆ ₹4 ಸಾವಿರ ಕೋಟಿಯಷ್ಟು ನಷ್ಟವಾಗಿದೆ. ಪ್ರಭಾವಿಗಳ ಹೆಸರು ಕೇಳಿಬರುತ್ತಿದೆ. ರಾಜ್ಯ ಸರ್ಕಾರದ ಕಾರ್ಯದರ್ಶಿ ಹಾಗೂ ಮೈಸೂರು ಜಿಲ್ಲಾಧಿಕಾರಿ ಎಚ್ಚರಿಕೆ ಪತ್ರಗಳ ನಡುವೆಯೂ ಅಧಿಕಾರಿಗಳು ಅಕ್ರಮ ಮುಂದುವರಿಸಿದ್ದಾರೆ. ಈ ಎಲ್ಲದರ ಕುರಿತು ಸಮಗ್ರ ತನಿಖೆ ನಡೆಸಬೇಕು' ಎಂದು ಕುರಬೂರು ಶಾಂತಕುಮಾರ್ ನೇತೃತ್ವದ ಒಕ್ಕೂಟವು ರಾಜ್ಯಪಾಲರಿಗೆ ಮನವಿ ಮಾಡಿದೆ.

ಅಧ್ಯಕ್ಷ– ಆಯುಕ್ತ ಹುದ್ದೆಗೂ ಲಾಬಿ

2024–25ನೇ ಸಾಲಿಗೆ ಮುಡಾ ಮಂಡಿಸಿದ ಬಜೆಟ್‌ನ ಗಾತ್ರ ಬರೋಬ್ಬರಿ ₹ 831 ಕೋಟಿ. ಹೀಗಾಗಿ ಅದರ ಸದಸ್ಯ ಹಾಗೂ ಅಧ್ಯಕ್ಷ ಸ್ಥಾನದ ಮೇಲೆ ಜನಪ್ರತಿನಿಧಿಗಳ ಕಣ್ಣು ಇದ್ದೇ ಇದೆ.

ಸಿದ್ದರಾಮಯ್ಯ ಆದಿಯಾಗಿ ಮೈಸೂರು–ಮಂಡ್ಯ ಜಿಲ್ಲೆ ವ್ಯಾಪ್ತಿಯ 13 ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಪ್ರಾಧಿಕಾರದ ಸದಸ್ಯರಾಗಿದ್ದು, ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವ ಮುನ್ನ ಇವರೆಲ್ಲರ ಗಮನಕ್ಕೆ ತರಲಾಗುತ್ತದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಮುಡಾ ಅಧ್ಯಕ್ಷ ಹುದ್ದೆಗೆ ದೊಡ್ಡ ಮಟ್ಟದಲ್ಲೇ ಲಾಬಿ ನಡೆದಿತ್ತು. ಜಿಲ್ಲೆಯ ಅನೇಕ ಪ್ರಭಾವಿಗಳು ಹುದ್ದೆ ಗಿಟ್ಟಿಸಿಕೊಳ್ಳಲು ಪ್ರಯತ್ನಿಸಿದ್ದರು. ಎಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಹುದ್ದೆ ಬಹುತೇಕ ಖಚಿತ ಎನ್ನಲಾಗಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಮರಿಗೌಡ ಹುದ್ದೆ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

ವರ್ಷದ ಹಿಂದೆ, ಪ್ರಭಾವಿ ಸಚಿವರೊಬ್ಬರು ತಮ್ಮ ಸೊಸೆಯನ್ನು ಮುಡಾ ಆಯುಕ್ತ ಹುದ್ದೆಗೆ ತರಲು ಬಯಸಿದ್ದರು ಎನ್ನಲಾಗಿದ್ದು, ಸರ್ಕಾರ ಇನ್ನೊಬ್ಬರನ್ನು ನಿಯೋಜಿಸಲು ಬಯಸಿತ್ತು. ಅಂತಿಮವಾಗಿ ದಿನೇಶ್ ಅವರೇ ಹುದ್ದೆಯಲ್ಲಿ ಮುಂದುವರಿದರು.

'ಮುಡಾ' ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪ್ರಮಾದ ಎದ್ದು ಕಾಣುತ್ತಿದೆ. ಡಿನೋಟಿಫೈ ನಂತರವೂ ನಿವೇಶನ ಅಭಿವೃದ್ಧಿ ತಡೆಯಬಹುದಿತ್ತು. ತಪ್ಪಿಗಾಗಿ ರಾಜೀನಾಮೆ ಕೊಡಬೇಕು.

ಜಗದೀಶ ಶೆಟ್ಟರ್, ಸಂಸದ, ಬೆಳಗಾವಿ

ವಿಮಾನದಲ್ಲಿ ದಾಖಲೆ ಸಾಗಿಸಿದ್ದೇಕೆ: ಎಚ್‌ಡಿಕೆ

ಬೆಂಗಳೂರು: ಮೈಸೂರಿನ 'ಮುಡಾ' ಹಗರಣದ ದಾಖಲೆಗಳನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ವಿಶೇಷ ವಿಮಾನದಲ್ಲಿ ಸಾಗಿಸಿ, ಸುರಕ್ಷಿತ ಸ್ಥಳಗಳಲ್ಲಿ ಇಟ್ಟುಕೊಂಡಿದ್ದರೂ, 'ರೀ–ಡೂ'ನಂತೆ ಈ ಹಗರಣವನ್ನು ಸರ್ಕಾರ ಮುಚ್ಚಿಹಾಕಲು ಸಾಧ್ಯವಿಲ್ಲ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಹಗರಣ ಬೆಳಕಿಗೆ ಬರುತ್ತಿದ್ದಂತೆ ಮೈಸೂರಿಗೆ ದೌಡಾಯಿಸಿದ್ದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, 'ಮುಡಾ'ದಲ್ಲಿದ್ದ ದಾಖಲೆಗಳನ್ನು ವಿಶೇಷ ವಿಮಾನದಲ್ಲಿ ಸಾಗಿಸಿದ್ದಾರೆ. ಅಕ್ರಮ ನಡೆದೇ ಇಲ್ಲ ಎನ್ನುವುದಾದರೆ ದಾಖಲೆ ಸಾಗಿಸಿದ್ದೇಕೆ ಎಂದು ಅವರು ಪ್ರಶ್ನಿಸಿದರು.

'ಅವರು ಏನೆಲ್ಲ ಮುಚ್ಚಿಡಲು ಯತ್ನಿಸಿದರೂ ಎಲ್ಲ ದಾಖಲೆಗಳೂ ಈಗ ಸಾರ್ವಜನಿಕವಾಗಿ ಲಭ್ಯವಿವೆ. ಹಾಗಾಗಿ, ಹಗರಣ ಮುಚ್ಚಿಹಾಕಲು ಸಾಧ್ಯವಿಲ್ಲ' ಎಂದು ಹೇಳಿದರು.

'ಮುಡಾ'ದಲ್ಲಿ ನಡೆದಿರುವುದು ಹಗರಣವೇ ಅಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಹಾಗಾದರೆ ತನಿಖೆ ಏಕೆ ನಡೆಯುತ್ತಿದೆ? ಜಿಲ್ಲಾಧಿಕಾರಿ ವರದಿ ನೀಡಿದ ನಂತರವೂ ಅಧಿಕಾರಿಗಳ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ? ಬಿಜೆಪಿ ಅವಧಿಯಲ್ಲೇ ಜಮೀನು, ನಿವೇಶನ ಪಡೆದಿದ್ದರೆ ಆಸ್ತಿ ವಿವರವನ್ನು 2023ರ ವಿಧಾನಸಭಾ ಚುನಾವಣೆಗೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ಏಕೆ ನಮೂದಿಸಲಿಲ್ಲ ಎಂದು ಕೇಳಿದರು.

ರೇಣುಕಸ್ವಾಮಿ ಕೊಲೆ: 200ಕ್ಕೂ ಹೆಚ್ಚು ಸಾಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 200ಕ್ಕೂ ಹೆಚ್ಚು ಭೌತಿಕ, ತಾಂತ್ರಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಗಳನ್ನು ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ ಎಂದು ಗೊತ್ತಾಗಿದೆ.

'ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದವರ ವಿಚಾರಣೆ ಮುಂದುವರಿಸಲಾಗಿದೆ. ಶುಕ್ರವಾರ ಇಬ್ಬರ ವಿಚಾರಣೆ ನಡೆಸಲಾಗಿದ್ದು ಮತ್ತೆ ಇಬ್ಬರಿಗೆ ನೋಟಿಸ್ ನೀಡಲಾಗಿದೆ. ಆರೋಪಿಗಳಿಗೆ ಶಿಕ್ಷೆ ಆಗುವ ನಿಟ್ಟಿನಲ್ಲಿ ತನಿಖೆ ಬಿಗಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಂಗ್ರಹಿಸಿದ ಎಲ್ಲ ವಸ್ತುಗಳು ಹಾಗೂ ಮಾದರಿಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ವರದಿಯ ನಿರೀಕ್ಷೆಯಲ್ಲಿದ್ದೇವೆ' ಎಂದು ಪೊಲೀಸರು ಹೇಳಿದರು.

ವಿಚಾರಣೆ ಮುಂದೂಡಿಕೆ: ಕೊಲೆ ಪ್ರಕರಣದ ಎ–17 ನಿಖಿಲ್ ನಾಯಕ್ ಜಾಮೀನು ಕೋರಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ವಿಚಾರಣೆಯನ್ನು ನ್ಯಾಯಾಧೀಶರು ಸೋಮವಾರಕ್ಕೆ ಮುಂದೂಡಿದರು.

ನ್ಯಾಯಾಧೀಶ ಜಯಶಂಕರ್ ಅವರ ಪೀಠದಲ್ಲಿ ವಿಚಾರಣೆ ನಡೆಯಿತು. ಆರೋಪಿ ಪರ ರಂಗನಾಥ ರೆಡ್ಡಿ ಹಾಜರಿದ್ದರು. ಪ್ರಕರಣವು ತನಿಖಾ ಹಂತದಲ್ಲಿದೆ ಎಂಬುದು ತಿಳಿದಿದ್ದರೂ ತರಾತುರಿಯಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈಗ ವಾದ ಮಾಡಲು ಸಾಧ್ಯ ಆಗದಿದ್ದರೆ ಅರ್ಜಿಯನ್ನೇ ವಜಾ ಮಾಡಿ ಎಂದು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರು ನ್ಯಾಯಾಧೀಶರನ್ನು ಕೋರಿದರು.

'ರಾಜ್ಯದ ಅಧಿಕಾರಿಗಳ ಜತೆ ಕೇಂದ್ರ ಸಚಿವರ ಸಭೆಗೆ ಅವಕಾಶ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಸಚಿವರಿಗೆ ನಮ್ಮ ರಾಜ್ಯದ ಅಧಿಕಾರಿಗಳ ಜೊತೆ ಸಭೆ ನಡೆಸುವ ಅವಕಾಶ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ನಡೆಸಿದ ಜನತಾ ದರ್ಶನಕ್ಕೆ ಅಧಿಕಾರಿಗಳು ಗೈರಾದ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿ ಇದ್ದರೂ ಶಿಷ್ಟಾಚಾರ ಉಲ್ಲಂಘನೆ ಆಗದಂತೆ ನೋಡಿಕೊಳ್ಳಿ ಎಂದು ಹೇಳುತ್ತಾರೆ. ರಾಜ್ಯದ ಅಧಿಕಾರಿಗಳ ಜೊತೆ ಸಭೆ ನಡೆಸುವ ಅವಕಾಶ ಇಲ್ಲವೆಂಬ ವಿಚಾರ ಕುಮಾರಸ್ವಾಮಿ ಅವರಿಗೂ ಗೊತ್ತಿದೆ. ದಿಶಾ ಕಾರ್ಯಕ್ರಮದಡಿ ಸಭೆ ನಡೆಸಿ ಕೆಲವು ಸೂಚನೆಗಳನ್ನು ನೀಡಬಹುದಷ್ಟೇ' ಎಂದರು.

'ಸಂಸದ ಡಿ.ಕೆ. ಸುರೇಶ್ ಕರೆದಾಗ ಕೆಲವು ಅಧಿಕಾರಿಗಳು ಮಾತ್ರ ಹೋಗುತ್ತಿದ್ದರು' ಎಂದೂ ಅವರು ಸಮರ್ಥಿಸಿಕೊಂಡರು.

ಅಗತ್ಯ ಬಿದ್ದರೆ ವಿಚಾರಣೆ: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಆರೋಪ ಸಂಬಂಧ ಮಾಜಿ ಸಚಿವ ಬಿ. ನಾಗೇಂದ್ರ, ಶಾಸಕ ಬಸನಗೌಡ ದದ್ದಲ್ ಅವರನ್ನು ವಿಚಾರಣೆಗೆ ಬರುವಂತೆ ಎಸ್‌ಐಟಿ ನೋಟಿಸ್ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ತನಿಖೆಗೆ ಅವಶ್ಯ ಇರುವವರನ್ನು ಎಸ್‌ಐಟಿಯವರು ಕರೆಯುತ್ತಾರೆ. ಮಾಜಿ ಸಚಿವರ ಆಪ್ತ ಸಹಾಯಕರನ್ನು ಈಗಾಗಲೇ ವಿಚಾರಣೆ ನಡೆಸಿದ್ದಾರೆ' ಎಂದರು.

ಆಳ್ವಾಸ್ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಂಗ ಸಂಸ್ಥೆಯಾದ ಆಳ್ವಾಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜು (ಎಐಇಟಿ) ಸ್ವಾಯತ್ತ ಸ್ಥಾನಮಾನ ಪಡೆದಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆಳ್ವಾಸ್ ಎಂಜಿನಿಯರಿಂಗ್ ಕಾಲೇಜು ಈಗಾಗಲೇ ನ್ಯಾಕ್‌ನಲ್ಲಿ (NAAC) ಎ + ಶ್ರೇಣಿ, ಸಿಜಿಪಿಎ 3.32 (4 ಸ್ಕೇಲ್) ಗ್ರೇಡ್ ಪಡೆದುಕೊಂಡಿದೆ. ನಿರ್ಫ್ (NIRF) ಇನ್ನೊವೇಷನ್ ರ‍್ಯಾಂಕಿಂಗ್ ಅನ್ನು 150ರಿಂದ 300 ಬ್ಯಾಂಡ್‌ನಲ್ಲಿ ಪಡೆದಿದೆ. ಕಾಲೇಜಿನ ಹಲವು ಎಂಜಿನಿಯರಿಂಗ್ ವಿಭಾಗಗಳು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆದಿವೆ ಎಂದರು.

ಇಸ್ರೊ ಹಾಗೂ ಇಸ್ರೊದ ಸಹ ಸಂಸ್ಥೆಗಳಾದ ರಾಷ್ಟ್ರೀಯ ದೂರ ಸಂವೇದಿ ಕೇಂದ್ರ ಹೈದರಾಬಾದ್, ಪ್ರಾದೇಶಿಕ ದೂರ ಸಂವೇದಿ ಕೇಂದ್ರ ಬೆಂಗಳೂರು, ರಾಷ್ಟ್ರೀಯ ವಾಯುಮಂಡಲ ಸಂಶೋಧನಾ ಪ್ರಯೋಗಾಲಯಗಳು ಗಡಂಕಿ, ಎಸ್ಸಿಎಲ್, ಬಾಹ್ಯಾಕಾಶ ವಿಭಾಗ ಚಂಡೀಗಢ, ಡಿಫೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಟೆಕ್ನಾಲಜಿ ಪುಣೆ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ವಿಶ್ವವಿದ್ಯಾಲಯಗಳಾದ ಕುಮಾಮೊಟೊ ವಿಶ್ವವಿದ್ಯಾಲಯ ಜಪಾನ್, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಅಲಹಾಬಾದ್ ಹಾಗೂ ಏಳು ಐರೋಪ್ಯ ವಿಶ್ವವಿದ್ಯಾಲಯಗಳ ಜೊತೆ ಆಳ್ವಾಸ್ ಒಡಂಬಡಿಕೆ ಮಾಡಿಕೊಂಡಿದೆ ಎಂದು ಹೇಳಿದರು.

ಆಳ್ವಾಸ್ ಶಿಕ್ಷಣ ಸಂಸ್ಥೆಯು 2024ರಲ್ಲಿ 15 ಪೇಟೆಂಟ್‌ಗಳನ್ನು ಸಲ್ಲಿಸಿದ್ದು, ಜೊತೆಯಲ್ಲಿ 8 ಪೇಟೆಂಟ್‌ಗಳ ಮಾನ್ಯತೆ ಗಳಿಸಿದೆ. 2023-24ನೇ ಸಾಲಿನಲ್ಲಿ ಸರ್ಕಾರಿ ಸಂಶೋಧನಾ ಕೇಂದ್ರಗಳಿಂದ ₹1.25 ಕೋಟಿ ಅನುದಾನ ಪಡೆದಿರುವುದು ಸಂಸ್ಥೆಯು ಆವಿಷ್ಕಾರ ಹಾಗೂ ತಂತ್ರಜ್ಞಾನದ ಉನ್ನತೀಕರಣದಲ್ಲಿ ಹೊಂದಿರುವ ಬದ್ಧತೆಯನ್ನು ತೋರಿಸುತ್ತದೆ ಎಂದರು.

'ಸ್ವಾಯತ್ತತೆ'ಯಿಂದ ಪ್ರಮುಖವಾಗಿ 'ಪಠ್ಯಕ್ರಮ ರೂಪಿಸುವ ಸ್ವಾತಂತ್ರ್ಯ', ನವೀನ ಬೋಧನಾ ಕ್ರಮ ಅಳವಡಿಕೆ, ಪರೀಕ್ಷಾ ಪ್ರಕ್ರಿಯೆಯಲ್ಲಿ ಸುಧಾರಣೆ, ಉದ್ಯಮಶೀಲತಾ ಬೆಳವಣಿಗೆ, ಜಾಗತಿಕ ಮಾನ್ಯತೆಗೆ ನೆರವು ದೊರೆಯಲಿದೆ ಎಂದು ಹೇಳಿದರು.

ಅಪಘಾತದಲ್ಲಿ ಜಖಂಗೊಂಡ ಕಾರು

ರಸ್ತೆ ಅಪಘಾತ ನಾಲ್ವರು ಸಾವು

ಪ್ರಜಾವಾಣಿ ವಾರ್ತೆ

ಕುಂಸಿ (ಶಿವಮೊಗ್ಗ): ಸಮೀಪದ ಮುದ್ದಿನಕೊಪ್ಪ ಟ್ರೀ ಪಾರ್ಕ್ ಬಳಿಯ ಬಿ.ಎಚ್.ರಸ್ತೆಯಲ್ಲಿ ಇನೊವಾ ಹಾಗೂ ಸ್ವಿಫ್ಟ್ ಕಾರುಗಳ ನಡುವೆ ಶನಿವಾರ ಮಧ್ಯಾಹ್ನ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಸ್ವಿಫ್ಟ್‌ನಲ್ಲಿದ್ದ ನಾಲ್ವರು ಪ್ರಯಾಣಿಕರು ಮೃತಪಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ದೊಡ್ಡೇರಿಯ ಸಿದ್ದಯ್ಯ (56), ಬೆಳಲಗೆರೆಯ ಇಮಾಮ್ ಸಾಬ್ (56) ಹಾಗೂ ಚಾಲಕ, ಚಳ್ಳಕೆರೆ ನಗರದ ಚಿತ್ತಯ್ಯನಹಟ್ಟಿಯ ಚಂದ್ರಶೇಖರ್ (32) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅದೇ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಜೆ.ಜೆ. ಹಟ್ಟಿಯ ಓಬಮ್ಮ (50) ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಇನೊವಾ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಬೆಂಗಳೂರಿನ ಮಾರತ್ತಹಳ್ಳಿಯ ಐವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸ್ವಿಫ್ಟ್ ಕಾರಿನಲ್ಲಿದ್ದವರು ತೀರ್ಥಹಳ್ಳಿ ತಾಲ್ಲೂಕಿನ ಹಣಗೆರೆಕಟ್ಟೆಯ ದೇವಸ್ಥಾನದಲ್ಲಿ ಪೂಜೆ ಮುಗಿಸಿಕೊಂಡು ಊರಿಗೆ ತೆರಳಲು ಶಿವಮೊಗ್ಗದ ಕಡೆ ಹೋಗುತ್ತಿದ್ದರು. ಇನೊವಾ ಕಾರಿನಲ್ಲಿದ್ದವರು ಪ್ರವಾಸಕ್ಕೆ ಬಂದಿದ್ದು, ನಗರದ ರೆಸಾರ್ಟ್‌ನಲ್ಲಿ ಉಳಿದಿದ್ದರು. ಜೋಗ ಜಲಪಾತ ವೀಕ್ಷಣೆಗೆ ಹೊರಟಿದ್ದರು ಎಂದು ತಿಳಿದುಬಂದಿದೆ.

ಕುಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ–583105.
ದೂರವಾಣಿ: 08392–242703, ಫ್ಯಾಕ್ಸ್: 08392– 242806
ಸಂಖ್ಯೆ:ವಿಶ್ರೀಕೃವಿಬ/ಆಡಳಿತ/ಟೆಂಡರ್/ವಿವನಿ–ಮೆಸ್/2024–25/586
ದಿನಾಂಕ:04.07.2024

ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು **Providing Mess Facility At Girls Hostel Vijayanagara Sri Krishnadevaraya University, Ballari** : ರೂ.1,05,00,000/– ರ ಕೆಲಸಗಳನ್ನು ನಿರ್ವಹಿಸಲು ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ–ಪ್ರೋಕ್ಯೂರ್ ಮೆಂಟ್ ವೆಬ್‌ಸೈಟ್ **www.e-proc.karnataka.gov.in** ಮುಖಾಂತರ **ದಿನಾಂಕ:19.07.2024 ಸಂಜೆ: 05.00** ಘಂಟೆಯವರೆಗೆ ಪಡೆದು ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/206/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW– 4:ಟೆಂ:2024–25/856 ದಿನಾಂಕ: 06–07–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿನ 5054 (ಯೋಜನೆ) ರಾಜ್ಯ ಹೆದ್ದಾರಿ ರಸ್ತೆ ಸುಧಾರಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ KW-4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. **ವರ್ಕ ಇಂಡೆಂಟ್ ಸಂಖ್ಯೆ: 10814** ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 15–07–2024 ಸಮಯ 16.00 ಗಂಟೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16–07–2024 ಸಮಯ 16.30 ಗಂಟೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20–07–2024 ಸಮಯ 11.00 ಗಂಟೆ,** ಅಂದಾಜು **ಮೊತ್ತ ರೂ. 950.00 ಲಕ್ಷಗಳು** ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ **ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ವಾ.ಸಾ.ಇ/ಕೊಪ್ಪಳ/137/ದೇಶಪಾಂಡೆಪಬ್ಲಿಸಿಟಿ/2024–25

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಚಿಕ್ಕೋಡಿ.
ದೂರವಾಣಿ: 08338–275101, ಇ–ಮೇಲ್: ee.rdws.ckd@gmail.com
ಸಂಖ್ಯೆ : ಕಾ.ಇಂ./ಗ್ರಾ.ಕು.ನೀ.&ನೈ./ವಿ.ಚಿ./ತಾಂ.ಶಾ./ಕೆಡಬ್ಲ್ಯು4/ಟೆಂಡರ್/2024–25/545
ದಿನಾಂಕ : 05–07–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕೋಡಿ ವ್ಯಾಪ್ತಿಯ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿರುತ್ತದೆ.

1) ಕಾಮಗಾರಿಯ ವಿವರ : Augmentation of MVS to Kuthali Villages in Chikkodi Taluka of Belagavi District. (Indent No. 8126), ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 840.00, ಇ.ಎಂ.ಡಿ. (ರೂ. ಗಳಲ್ಲಿ) : 1049000.00, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ) : 9 ತಿಂಗಳು.

1) ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ ಪರಿಶೀಲನೆ : 10–07–2024 ರ ಬೆಳಿಗ್ಗೆ 11.30 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ. ಕು. ನೀ & ನೈ ವಿಭಾಗ, ಎನ್.ಎಂ. ರೋಡ ಚಿಕ್ಕೋಡಿ, 2) ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ : 18–07–2024 ರ ಸಂಜೆ 17.00 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19–07–2024 ರ ಸಂಜೆ 17.30 ಗಂಟೆಗೆ 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 22–07–2024 ರ ಬೆಳಿಗ್ಗೆ 11.00 ಗಂಟೆಗೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ, ಗ್ರಾ.ಕು.ನೀ. & ನೈ ವಿಭಾಗ, ಚಿಕ್ಕೋಡಿ.
ಡಿಐಪಿಆರ್/ಬೆಳಗಾವಿ/320/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕೃಷಿ ಇಲಾಖೆ (ಅರಣ್ಯ ಘಟಕ), ಹಾವೇರಿ.
ಟೆಂಡರ್ ಸಂಖ್ಯೆ: ಸಅಸಂ/ಕೃಇ/ಜಅಇ/ಹಾ/ಟೆಂಡರ್/2024–25
ದಿನಾಂಕ : 03–07–2024

ಅಲ್ಪಾವಧಿ ಟೆಂಡರ ಪ್ರಕಟಣೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಷಿ ಇಲಾಖೆ (ಅರಣ್ಯ ಘಟಕ). ಹಾವೇರಿ ಜಿಲ್ಲೆಯ, PMKSY WDC-2.0 ಯೋಜನೆಯಡಿಯಲ್ಲಿ ರಾಣೇಬೆನ್ನೂರು ತಾಲ್ಲೂಕು ಬ್ಲಾಕ್–1 ವ್ಯಾಪ್ತಿಯ ಆಸುಂಡಿ, ಬೆನಕನಕೊಂಡ, ಹಲಗೇರಿ ಗ್ರಾಮಗಳಲ್ಲಿ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುಮೋದಿತ ಕಾಮಗಾರಿಯ ಟೆಂಡರ್ ಒಟ್ಟು ಮೊತ್ತ ರೂ. **18,00,104.65** ಮತ್ತು ಇ.ಎಂ.ಡಿ. **46,000/–** ನಿಗಧಿಪಡಿಸಲಾಗಿದೆ ಹಾಗೂ ಬ್ಲಾಕ್–2 ವ್ಯಾಪ್ತಿಯ ಉಕ್ಕುಂದ, ಜೋಯಿಸರಹಳ್ಳಿ ಗ್ರಾಮಗಳಲ್ಲಿ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುಮೋದಿತ ಕಾಮಗಾರಿಯ ಟೆಂಡರ್ ಒಟ್ಟು ಮೊತ್ತ ರೂ. **16,87,949.72** ಮತ್ತು ಇ.ಎಂ.ಡಿ **43,000/–** ಹಾಗೂ ಹಿರೇಕೆರೂರು ತಾಲ್ಲೂಕು REWARD ಯೋಜನೆಯಡಿ ಕೋಡಿಹಳ್ಳಿ ಜಲಾನಯನ ಪ್ರದೇಶದಲ್ಲಿ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುಮೋದಿತ ಕಾಮಗಾರಿಯ ಟೆಂಡರ್ ಒಟ್ಟು ಮೊತ್ತ ರೂ. **15,12,956.59** ಮತ್ತು ಇ.ಎಂ.ಡಿ **38,000/–** ನಿಗಧಿಪಡಿಸಲಾಗಿದೆ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in/ಈ ವೆಬ್ ಸೈಟ್ ನಲ್ಲಿ ದಿ : **03/07/2024** ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿ : **11/07/2024** ಸಂಜೆ 17.00 ಗಂಟೆಯವರೆಗೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕೃಷಿ ಇಲಾಖೆ (ಅರಣ್ಯ ಘಟಕ), ಹಾವೇರಿ, ರವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/84/2024–25

ಪುರಸಭೆ ಕಾರ್ಯಾಲಯ ಅಥಣಿ
ಡಾ॥ ಬಿ.ಆರ್ ಅಂಬೇಡ್ಕರ್ ವೃತ್ತದ ಹತ್ತಿರ, ಅಥಣಿ–591304
ಜಿ:ಬೆಳಗಾವಿ. ದೂರವಾಣಿ:08289–251137 ವೆಬ್‌ಸೈಟ್:www.athanitown.mrc.gov.in
ಕ್ರಮ ಸಂಖ್ಯೆ:ಪುಸಅ:ಕಾಮಗಾರಿ:ಟೆಂಡರ:ಪುಅ2024–25 ದಿನಾಂಕ:04–07–2024

॥ ಟೆಂಡರ ಪ್ರಕಟಣೆ ॥
॥ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ॥
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಅಥಣಿ ಪುರಸಭೆಗೆ ಸನ್ 2018–19ನೇ ಸಾಲಿನ ಘನತ್ಯಾಜ್ಯ ವಸ್ತು ನಿರ್ವಹಣೆ ಅನುದಾನ (1.0) ಮತ್ತು ಸ್ವಚ್ಛ ಭಾರತ್ ಮಿಷನ್ (2.0) ಅಡಿಯಲ್ಲಿ (MRF) & (SLF) ಅನುದಾನದಡಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ/ಪಂಚಾಯತರಾಜ/ಕರ್ನಾಟಕ ಸರ್ಕಾರದ ಇಂಧನ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಕೆಡಬ್ಲ್ಯೂ–1,2,3 ಮತ್ತು ಕೆಜೆ–1,2ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಬಿಡ್ಡ್ ಸಲ್ಲಿಸಬಹುದು. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸ್ವಚ್ಛ ಭಾರತ್ ಮಿಷನ್ (2.0) ಅಡಿಯಲ್ಲಿ (MRF) ಅನುದಾನ

ಪ್ಯಾ ನಂ:1:ಕಾಮಗಾರಿ ಇಂಡೆಂಟ್ ನಂ:DMA/2024-25/BD/ WORK_INDENT20384, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):67.50, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):56.98,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):67500,ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು, ಪ್ಯಾನಂ:2:ಕಾಮಗಾರಿ ಇಂಡೆಂಟ್ ನಂ: DMA/2024-25/IND2201, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 6.50, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):5.50, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):8125, ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು,ಪ್ಯಾ ನಂ:3:ಕಾಮಗಾರಿ ಇಂಡೆಂಟ್ ನಂ: DMA/2024-25/IND2202, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 3.53, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):2.98,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):4413, ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು, ಪ್ಯಾ ನಂ:4:ಕಾಮಗಾರಿ ಇಂಡೆಂಟ್ ನಂ: DMA/2024-25/IND2200,ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.06, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):7.65,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):11325, ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು,ಪ್ಯಾ ನಂ:5:ಕಾಮಗಾರಿ ಇಂಡೆಂಟ್ ನಂ: DMA/2024-25/IND2198,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) :0.20, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):0.15, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):500, ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು, ಪ್ಯಾ ನಂ:6:ಕಾಮಗಾರಿ ಇಂಡೆಂಟ್ ನಂ: DMA/2024-25/IND2199,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 0.45, ಟೆಂಡರಗಿಟ್ಟ ಮೊತ್ತ (ರೂ. ಲಕ್ಷ ಗಳಲ್ಲಿ):0.37, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):1125,ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು,

ಸನ್ 2018–19ನೇ ಸಾಲಿನಲ್ಲಿ ಹಂಚಿಕೆಯಾದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನ

ಪ್ಯಾ ನಂ:7:ಕಾಮಗಾರಿ ಇಂಡೆಂಟ್ ನಂ:DMA/2024-25/OW/WORK_INDENT20391,ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 87.78, ಟೆಂಡರಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ):74.37, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):148740, ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು,

ಸ್ವಚ್ಛ ಭಾರತ್ ಮಿಷನ್ (2.0) ಅಡಿಯಲ್ಲಿ (SLF) ಅನುದಾನ

ಪ್ಯಾ ನಂ:8:ಕಾಮಗಾರಿ ಇಂಡೆಂಟ್ ನಂ:DMA/2024-25/OW/WORK_INDENT20390, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):10.00, ಟೆಂಡರಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):8.38, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):20950,ಕೆಲಸ ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):6 ತಿಂಗಳು.

ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ:18–07–2024 ಸಾಯಂಕಾಲ 5.30 ಘಂಟೆಯ ವರೆಗೆ. ಟೆಂಡರಗಳನ್ನು ತೆರೆಯುವ ದಿನಾಂಕ:19–07–2024 ಸಾಯಂಕಾಲ 5.30 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ Website:www.athanitown.mrc.gov.in & https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು

ಸಹಿ/–ಮುಖ್ಯಾಧಿಕಾರಿ ಪುರಸಭೆ ಅಥಣಿ
ಸಹಿ/–ಆಡಳಿತಾಧಿಕಾರಿಗಳು ಪುರಸಭೆ ಅಥಣಿ ಹಾಗೂ ಉಪವಿಭಾಗಾಧಿಕಾರಿಗಳು ಚಿಕ್ಕೋಡಿ
DIPR/BGM/RO-NO-302/KSMCA/2024-25

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಸುರಪುರ ಜಿ: ಯಾದಗಿರಿ
Email ID : itstaff_ulb_shorapur@yahoo.com Phone No : 08443-256300
ಸಂ: ನಸಸು/ತಾಂ,ಶಾ/ಎಸ್.ಬಿ.ಎಮ್–2.0/ಎಮ್.ಆರ್.ಎಫ್/2/2024–25 ದಿನಾಂಕ: 05/07/2024

–:: ಅಲ್ಪಾವಧಿ ಇ–ಪ್ರೊಕ್ಯೂರ್ಮೆಂಟ್ ಟೆಂಡರ್ ಪ್ರಕಟಣೆ ಕರೆ :: –

ಕರ್ನಾಟಕ ಸರಕಾರದ ಪಾರದರ್ಶಕತೆ ಕಾನೂನು 1999 ಹಾಗೂ ನಿಯಮಾವಳಿ 2000ರಂತೆ ಇ–ಪ್ರೊಕ್ಯೂರ್ಮೆಂಟ್‌ನಲ್ಲಿ ನೊಂದಾಯಿಸಿದ (ರೆಜಿಸ್ಟ್ರೇಷನ್) ಏಜನ್ಸಿದಾರರಿಂದ ಟೆಂಡರ್‌ಗಳನ್ನು ಇಪ್ರಕ್ಯೂರ್‌ಮೆಂಟ ಪೋರ್ಟಲ್ ಮೂಲಕ ಸ್ವಚ್ಛ ಭಾರತ ಮಿಷನ್ 2.0 ಯೋಜನೆ ಅನುದಾನದಡಿ ಕಾಮಗಾರಿಗಳ ಐಟಂವಾರು ಟೆಂಡರ್‌ಗಳನ್ನು KW-3 ರ ಪ್ರಕಾರ ದ್ವೀ ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಿಯಮಗಳು ಮತ್ತು ಟೆಂಡರ್ ಕರಾರುಗಳನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವದು. ಭರ್ತಿ ಮಾಡುವುದು ಹಾಗೂ ಸಲ್ಲಿಸುವುದು ವಿವರ ಕೆಳಗಿನಂತೆ ನಮೂದಿಸಿದೆ.

1. ಟೆಂಡರಗಳ ಅರ್ಜಿ ಅಂತರಜಾಲದಲ್ಲಿ ಡೌನ್ಲೋಡ ಮಾಡುವ ಪ್ರಾರಂಭ ದಿನಾಂಕ: 06–07–2024 ರಿಂದ. 2) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 22–07–2024 ರಂದು 16:30 ಗಂಟೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24–07–2024 ರಂದು ಸಯಂಕಾಲ 16.00 ಘಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26–07–2024 ರಂದು ಸಯಂಕಾಲ 16.00 ಘಂಟೆಗೆ.

ಟೆಂಡರ್‌ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ಇ–ಪ್ರೊಕ್ಯೂರಮೆಂಟ್ ಪ್ಲಾಟ್‌ಫಾರ್ಮ http://kppp.karnataka.gov.in ನಲ್ಲಿ ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬುಹುದು.

1) Indent No: DMA/2024-25/OW/WORK_INDNET 20919. **Details of work**: Construction of Proposed 8TPD MRF Centre (Material Recovery Facility) of PEB Structure (PRIMARY SHED) At Shorapur City (UNDER SWACHA BHARAT MISSION2.0) **Approx. Est.Cost (in lakhs):** 85.50. **E.M.D.(in Rs):** As per E Portal **Class of contractor & Time Period:** PWD Civil Class-I & above, 3 Month

ಸಹಿ/– ಪೌರಾಯುಕ್ತರು, ನಗರಸಭೆ ಸುರಪುರ
ವಾ.ಸಾ.ಸಂ.ಇ/ಯಾದಗಿರಿ/67/ಕೆ.ಎಸ್.ಎಂ.ಸಿ.ಎ/2024–25

ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023.
ದೂರವಾಣಿ ಸಂಖ್ಯೆ: 080–23113584 ಇ–ಮೇಲ್: pdrch-hfws@karnataka.gov.in
No: NHM/BMEM/01/2024-25 Date: 06-07-2024
Tender No: NHM/2024-25/SE0028

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
Outsourcing of Biomedical Equipment Maintenance

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ರವರು **ಬಯೋಮೆಡಿಕಲ್ ಎಕ್ವಿಪ್‌ಮೆಂಟ್ ಮೇಂಟೆನೆನ್ಸ್ ಸೇವೆಗೆ ಸಂಬಂಧಪಟ್ಟಂತೆ** ಸೇವಾದಾರರು ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: **06–07–2024 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **16–08–2024 ರ ಅಪರಾಹ್ನ 5.30 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು.**

ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ **ಪೂರ್ವಾಹ್ನ 11.00 ಗಂಟೆಯಿಂದ ಅಪರಾಹ್ನ 5.00 ಗಂಟೆಯೊಳಗೆ** ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
ವಾಸಾಸಂಇ/ವಾ.ಪ್ರ/805/ಅಡ್ವರ್ಟೋರ್/2024–25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗದಗ
ಜಿಲ್ಲಾ: ಗದಗ. ಪಿನ್ ಕೋಡ್ – 582101 ರಾಜ್ಯ : ಕರ್ನಾಟಕ
ಇ–ಮೇಲ್ apmcgadag4@gmail.com ದೂ: 238354, ಫ್ಯಾಕ್ಸ್:(08372) 237897
ಸಂಖ್ಯೆ:ಕೃಉಮಾಸ/ಗ/228/2024–25 ದಿನಾಂಕ:–4–07–2024

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ 2024–25 ನೇ ಸಾಲಿಗಾಗಿ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಬಹುದಾನ್ಯ ಶುದ್ಧಿಕರಣ ಘಟಕವನ್ನು ಲೀವ್ಹ್ & ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಮಾಡಲು ಇ–ಟೆಂಡರ್‌ನ್ನು ಕರ್ನಾಟಕ ಸರ್ಕಾರದ http://kppp.karnataka.gov.in ಪೋರ್ಟಲ್‌ನಲ್ಲಿ ಇಂಡೆಂಟ್ ನಂ. APMC/2024-25/SE0368 DATE: 04–07–2024 ರ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20–07–2024 ಸಾಯಂಕಾಲ: 4–00 ಘಂಟೆಯೊಳಗಾಗಿ, ಸಲ್ಲಿಸುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22–07–2024 ಸಾಯಂಕಾಲ: 4–00 ಘಂಟೆ. ಹಾಗೂ ಆರ್ಥಿಕ ಬಿಡ್ (ಸಾಧ್ಯವಾದಲ್ಲಿ) ತೆರೆಯುವ ದಿನಾಂಕ: 29–07–2024 ಸಾಯಂಕಾಲ: 4–00 ಘಂಟೆಗೆ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ http://kppp.karnataka.gov.in ಪೋರ್ಟಲ್‌ನಲ್ಲಿ ಮತ್ತು ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.ಗದಗ
ಸಹಿ/–ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಗದಗ ಜಿಲ್ಲೆ ಗದಗ.
ವಾ.ಸಾ.ಇ/ಗದಗ/69/2024–25/ದೇಶಪಾಂಡೆಪಬ್ಲಿಸಿಟಿ

ಮಲೇಷ್ಯಾದ ವಿಶಿಷ್ಟ ಬಟು ಗುಹೆಗಳು

ಮಲೇಷ್ಯಾದ ರಾಜಧಾನಿ ಕ್ವಾಲಾಲಂಪುರದ ಬಳಿ ಇರುವ ಬಟು ಗುಹೆಯ ಪ್ರವೇಶದ್ವಾರ ಹಾಗೂ ಒಳಾಂಗಣ

> ಮಲೇಷ್ಯಾದ ಬಟು ಹಳ್ಳಿಯ ಪಕ್ಕದಲ್ಲಿ 40 ಕೋಟಿ ವರ್ಷಗಳ ಹಿಂದೆಯೇ ನೈಸರ್ಗಿಕವಾಗಿ ಗುಹೆಗಳು ರಚನೆಯಾಗಿವೆ. ಇಲ್ಲಿ ತಮಿಳರ ಆರಾಧ್ಯ ದೈವ ಮುರುಗನ್ ಪ್ರತಿಮೆ ಇದೆ. ಅದು 146 ಅಡಿ ಎತ್ತರವಿದ್ದು ಪ್ರಮುಖ ಆಕರ್ಷಣೆಯಾಗಿದೆ.

ಎಂ.ವೆಂಕಟಸ್ವಾಮಿ

ಮಲೇಷ್ಯಾ ರಾಜಧಾನಿ ಕ್ವಾಲಾಲಂಪುರದ ಅಂಚಿನಲ್ಲಿರುವ ಬಟು ಗುಹೆಗಳ ಕಡೆಗೆ ವಾಹನ ಹೊರಟ್ಟಿತ್ತು. ದೂರದಿಂದಲೇ ರಸ್ತೆಯ ಎದುರಿಗೆ ಹಸಿರು ತುಂಬಿಕೊಂಡಿರುವ ದೊಡ್ಡ ಬೆಟ್ಟ, ಅದರ ಮುಂದೆ ಎತ್ತರವಾದ ಬಂಗಾರ ಬಣ್ಣದ ಮುರುಗನ್ ಪ್ರತಿಮೆ ಕಾಣಿಸಿತು. ಹತ್ತಿರಕ್ಕೆ ಹೋದಾಗ ದೇವಸ್ಥಾನದ ಮುಂದೆ ದೊಡ್ಡ ಜಾತ್ರೆ ನಡೆಯುತ್ತಿತ್ತು. ಅಲ್ಲಿ ಎಲ್ಲಿ ನೋಡಿದರೂ ತಮಿಳು ಮಾತನಾಡುವರು ಕಾಣಿಸುತ್ತಿದ್ದರು. ನಾವು ತಮಿಳುನಾಡಿನಲ್ಲಿ ಇದ್ದೇವೊ ಏನೋ ಎನ್ನುವ ಭಾವನೆ ಅರೆಗಳಿಗೆ ಮನದಲ್ಲಿ ಮೂಡಿತು. ನಾನು ಭೂಗರ್ಭಶಾಸ್ತ್ರಜ್ಞನಾಗಿರುವುದರಿಂದ ಮೊದಲು ಅಲ್ಲಿರುವ ಅದ್ಭುತ ಗುಹೆಗಳನ್ನು ನೋಡಿಕೊಂಡು ಬರಲು ಬಣ್ಣ ಬಣ್ಣದ ದೊಡ್ಡ ದೊಡ್ಡ ಮೆಟ್ಟಿಲುಗಳನ್ನು ಹತ್ತಿಕೊಂಡು ಹೊರಟೆ.

ಜಗತ್ತಿನ ಹೆಚ್ಚೆಚ್ಚು ಪ್ರದೇಶಗಳಲ್ಲಿ ಸುಣ್ಣದ ಶಿಲೆಗಳಲ್ಲಿ (ಲೈಮ್ ಸ್ಟೋನ್) ಅಪರೂಪವಾದ ಮತ್ತು ಬಣ್ಣಬಣ್ಣದ ಗುಹೆಗಳು ರೂಪುಗೊಂಡಿರುವುದನ್ನು ನೋಡಬಹುದು. ಅದೇ ರೀತಿ ಮಲೇಷ್ಯಾದ ಬಟು ಹಳ್ಳಿಯ ಪಕ್ಕದಲ್ಲಿ ಸುಣ್ಣದ ಶಿಲೆಗಳ ಬೆಟ್ಟದಲ್ಲಿ ಸುಮಾರು 40 ಕೋಟಿ ವರ್ಷಗಳ ಹಿಂದೆ ನೈಸರ್ಗಿಕವಾಗಿ ಗುಹೆಗಳು ರೂಪುಗೊಂಡಿವೆ. ಈ ಗುಹೆಗಳನ್ನು ಮೊದಲಿಗೆ ಆದಿಮಾನವನು, ಅನಂತರ ಗುಹೆಗಳ ಪ್ರವೇಶ ದ್ವಾರಗಳನ್ನು ಸ್ಥಳೀಯ ತೆಮುವಾನ್ ಜನರು (ಒರಾಂಗ್ ಅಸ್ಲಿಯ ಬುಡಕಟ್ಟು) ಆಶ್ರಯಕ್ಕಾಗಿ ಬಳಸಿಕೊಳ್ಳುತ್ತಿದ್ದರು. 1860ರಲ್ಲಿ ಇಲ್ಲಿದ್ದ ಚೀನಿಯರು ಗುಹೆಗಳ ಒಳಗೆ ಬಿದ್ದಿದ್ದ ಬಾವಲಿ, ಇತರೆ ಪ್ರಾಣಿಗಳ ಹಿಕ್ಕೆ ಗೊಬ್ಬರವನ್ನು ಸಂಗ್ರಹಿಸಿ ಭೂಮಿಗೆ ಚೆಲ್ಲಿ ತರಕಾರಿ ಬೆಳೆಯುತ್ತಿದ್ದರು. 1878ರಲ್ಲಿ ಅಮೆರಿಕದ ವಿಜ್ಞಾನಿಗಳು ಬಟು ಸುಣ್ಣದ ಶಿಲೆಗಳ ಗುಹೆಗಳನ್ನು ಗುರುತಿಸಿದ ಮೇಲೆ ಈ ಪ್ರದೇಶ ಪ್ರಸಿದ್ಧಿಗೆ ಬಂದಿತು. ಬೆಟ್ಟದ ಶಿಲೆಗಳಲ್ಲಿರುವ ಸುಣ್ಣದ ಖನಿಜಾಂಶ ಮಳೆ ನೀರಿನ ಜೊತೆಗೆ ಬೆರೆಯುತ್ತಾ ಮಿಶ್ರಣಗೊಂಡು ಲಕ್ಷಾಂತರ ವರ್ಷಗಳಲ್ಲಿ ಕರಗುತ್ತಾ ರೂಪುಗೊಂಡಿರುವ ಸ್ಟಾಲಗ್ಮೈಟ್ ಮತ್ತು ಸ್ಟಾಲ್ಕಟೈಟ್ ಕಲ್ಲು ಹೂವುಗಳನ್ನು ನೋಡಬಹುದು. ಆದರೆ ಇಲ್ಲಿ ಅವು ಅಷ್ಟೊಂದು ವೈವಿಧ್ಯಮಯ ಬಣ್ಣಗಳಿಂದ ಬೆಳೆದಿಲ್ಲ.

ಈ ಗುಹೆಗಳು ನೆಲಮಟ್ಟದಿಂದ 100 ಮೀಟರ್‌ಗಳ ಎತ್ತರದಲ್ಲಿವೆ. ಇವುಗಳ ಇನ್ನೊಂದು ವಿಶೇಷವೆಂದರೆ ಒಳಗೆ ನಿಂತು ಬೆಟ್ಟದಲ್ಲಿ ಬಿದ್ದಿರುವ ಎರಡು ತೂತುಗಳಿಂದ ಆಕಾಶವನ್ನು ನೋಡಬಹುದು. ಅವು ಭೂಮಿಯಿಂದ ಆಕಾಶದ ಕಡೆಗೆ ನೋಡಿದರೆ ಓಝೋನ್ ತೂತುಗಳಂತೆ ಕಾಣಿಸುತ್ತವೆ. ನಾವು ಗುಹೆಯಲ್ಲಿ ನಿಂತು ಆಕಾಶದ ಕಡೆಗೆ ನೋಡಿದಾಗ ಮಳೆ ಒಂದೇ ಸಮನೆ ಸುರಿಯುತ್ತಿತ್ತು. ಬಿದ್ದ ನೀರು 'ಜರೋ' ಎಂದು ಸದ್ದು ಮಾಡುತ್ತ ಹರಿದುಹೋಗುತ್ತಿದ್ದರೂ ನಮಗೆ ಕಾಣಿಸಲಿಲ್ಲ. ಸೂರ್ಯನ ಬೆಳಕು ನೇರವಾಗಿ ಗುಹೆಗಳ ಒಳಕ್ಕೆ ಬೀಳುವುದರ ಜೊತೆಗೆ ಮಳೆಗಾಲದಲ್ಲಿ ಅಪಾರವಾದ ಮಳೆ ಗುಹೆಗಳ ಒಳಕ್ಕೆ ಸುರಿಯುತ್ತದೆ. ಬಿದ್ದ ಮಳೆ ಬೆಟ್ಟದ ಯಾವುದೊ ಕಡೆಗೆ ಬಿರುಕುಗಳ ಮೂಲಕ ಹರಿದುಹೋಗುತ್ತದೆ. ಅಂದರೆ ಎಷ್ಟೇ ಮಳೆ ಬಿದ್ದರೂ ಗುಹೆಗಳ ಒಳಗಿರುವ ದೇವಾಲಯಗಳಿಗೆ ಯಾವುದೇ ಅಪಾಯವಿಲ್ಲ. ಜೊತೆಗೆ ಮೆಟ್ಟಿಲುಗಳ ಮೂಲಕ ನೀರು ಹೊರಕ್ಕೆ ಹರಿದು ಬರದಂತೆ ಮೆಟ್ಟಿಲುಗಳಿರುವ ಕಡೆ ನೆಲವನ್ನು ಎತ್ತರಿಸಲಾಗಿದೆ. ಹಾಗಾಗಿ ಗುಹೆಗಳ ಒಳಗಿರುವ ದೇವಸ್ಥಾನಗಳಿಗಾಗಲಿ, ಯಾತ್ರಿಕರಿಗಾಗಲಿ ನೀರಿನ ಪ್ರವಾಹದ ಅಪಾಯವಿಲ್ಲ. ಕ್ವಾಲಾಲಂಪುರ ನಗರ ಬಟು ಹಳ್ಳಿಯ ಗುಹೆಗಳವರೆಗೂ ಬೆಳೆದು ಬಂದಿದ್ದು ಮಲೇಷ್ಯಾಗೆ ಹೋಗಿಬರುವ ಯಾತ್ರಿಕರಿಗೆ ಬಟು ಗುಹೆಗಳು ಒಂದು ಪ್ರೇಕ್ಷಣೀಯ ಸ್ಥಳವಾಗಿದೆ.

ಬಟು ಗುಹೆಗಳ ಬಳಿ ತಮಿಳುನಾಡಿನ ವಾತಾವರಣ ಏಕೆ ಇದೆ ಎನ್ನುವ ಕುತೂಹಲ ತಣಿಸಿಕೊಳ್ಳಲು ಅಲ್ಲಿದ್ದವರನ್ನು ವಿಚಾರಿಸಿದೆ. ಆಗ ಗೊತ್ತಾಗಿದ್ದು ಇದಿಷ್ಟು.

ಬ್ರಿಟಿಷರು, ಭಾರತವನ್ನು ಆಳುತ್ತಿದ್ದಾಗ ಮಲೇಷ್ಯಾದಲ್ಲಿ ಕಲ್ಲಿದ್ದಲು ತಾಮ್ರ ಚಿನ್ನ (ತವರು) ಇತ್ಯಾದಿ ಗಣಿಗಳು, ರಬ್ಬರ್ ತೋಟಗಳು ಮತ್ತು ರಸ್ತೆಗಳನ್ನು ನಿರ್ಮಿಸಲು ಸಾಕಷ್ಟು ತಮಿಳರನ್ನು ಮದ್ರಾಸ್ ಪ್ರೆಸಿಡೆನ್ಸಿಯಿಂದ ಕರೆದುಕೊಂಡು ಹೋದರು. ಅದಕ್ಕೂ ಮುಂಚೆ ನೂರಾರು ವರ್ಷಗಳ ಹಿಂದೆಯೇ ದಕ್ಷಿಣ ಭಾರತದ ಹಲವು ರಾಜವಂಶಗಳು ಕಾಂಬೋಡಿಯಾ, ವಿಯಟ್ನಾಂ, ಮಲೇಷ್ಯಾ, ಥೈಲ್ಯಾಂಡ್ ಇನ್ನಿತರ ಆಗ್ನೇಯ ಏಷ್ಯಾ ದೇಶಗಳ ಭಾಗಗಳನ್ನು ಆಳಿದ್ದು ಅಲ್ಲೆಲ್ಲ ಅದ್ಭುತವಾದ ಹಿಂದೂ ದೇವಾಲಯಗಳನ್ನು ನಿರ್ಮಿಸಿವೆ. 1892ರಲ್ಲಿ ಮಲೇಷ್ಯಾದಲ್ಲಿದ್ದ ತಮಿಳುನಾಡು ಮೂಲದ ಕೆ.ತಂಬಿಸಾಮಿ ಎಂಬ ವ್ಯಾಪಾರಿಗೆ ಬಟು ಗುಹೆಯ ಪ್ರವೇಶದ್ವಾರ ಮುರುಗನ್ ಶೂಲ (ವೇಲ್) ಆಕಾರದಲ್ಲಿರುವುದನ್ನು ಗಮನಿಸಿ ಅದರಿಂದ ಉತ್ತೇಜಿತರಾಗಿ ಅಲ್ಲಿ ದೇವಸ್ಥಾನ ಕಟ್ಟಲು ಪ್ರಾರಂಭಿಸಿದರು. ಇದಕ್ಕೂ ಮೊದಲು ಇವರು 1890ರಲ್ಲಿ ತಮಿಳರೇ ಹೆಚ್ಚಾಗಿರುವ ಕ್ವಾಲಾಲಂಪುರ ನಗರದ ಮಧ್ಯಭಾಗದಲ್ಲಿ ಮಾರಿಯಮ್ಮನ್ ದೇವಸ್ಥಾನವನ್ನು ಕಟ್ಟಿಸಿದ್ದರು. ಇಂದಿಗೂ ಈ ಪ್ರದೇಶವನ್ನು 'ಮಿನಿ ತಮಿಳುನಾಡು' ಎಂದೇ ಕರೆಯುತ್ತಾರೆ.

ಸುಮಾರು 500 ಅಡಿಗಳ ಎತ್ತರದ ಬಟು ಬೆಟ್ಟ ಹಸಿರಿನಿಂದ ಆವರಿಸಿಕೊಂಡಿದ್ದು, ಅದರ ತಳದಿಂದ 100 ಮೀಟರುಗಳ ಎತ್ತರದಲ್ಲಿ ಗುಹೆಗಳು ರೂಪುಗೊಂಡಿವೆ. ಬೆಟ್ಟದ ಕೆಳಗೆ ದೊಡ್ಡದಾದ ದೇವಾಲಯವಿದ್ದು ಗುಹೆಗಳ ಒಳಗೆ ಸಣ್ಣ ದೇವಾಲಯಗಳನ್ನು ನಿರ್ಮಿಸಲಾಗಿದೆ. ಗುಹೆಯ ಎದುರಿಗೆ ಮೆಟ್ಟಿಲುಗಳ ಪಕ್ಕದಲ್ಲಿ 146 ಅಡಿಗಳ ಎತ್ತರದ ಭವ್ಯವಾದ ಮುರುಗನ್ ಬಂಗಾರ ಬಣ್ಣದ ಶಿಲ್ಪವನ್ನು ಸ್ಥಾಪಿಸಲಾಗಿದೆ. ಬಟು ಗುಹೆಯ ಕುಮಾರಸ್ವಾಮಿ ಮತ್ತು ಮಾರಿಯಮ್ಮನ್ ದೇವಾಲಯ ಇರುವ ಪ್ರದೇಶದಲ್ಲಿ ತಮಿಳರ ಥೈಮಾಸಂ ತಿಂಗಳಲ್ಲಿ (ಜನವರಿ-ಫೆಬ್ರುವರಿ) ವಿಶೇಷ ಜಾತ್ರೆ ನಡೆಯುತ್ತದೆ.

ಬೆಟ್ಟದ ಒಳಗಿನ ಗುಹೆಗಳಲ್ಲಿ ಮುರುಗನ್ ಮತ್ತು ಶ್ರೀರಾಮ-ಆಂಜನೇಯರ ದೇವಸ್ಥಾನಗಳನ್ನು ನಿರ್ಮಿಸಿ ಮೊದಲಿಗೆ ಮರದ ಮೆಟ್ಟಿಲುಗಳನ್ನು ನಿರ್ಮಿಸಲಾಗಿತ್ತು. 1920ರಲ್ಲಿ ಅವುಗಳನ್ನು ಬದಲಿಸಿ 272 ಕಾಂಕ್ರಿಟ್ ಮೆಟ್ಟಿಲುಗಳನ್ನು ನಿರ್ಮಿಸಲಾಯಿತು. ಇತ್ತೀಚೆಗೆ ಈ ಮೆಟ್ಟಿಲುಗಳಿಗೆ ಸುಂದರ ಮತ್ತು ಆಕರ್ಷಕ ಬಣ್ಣಗಳನ್ನು ಬಳಿಯಲಾಗಿದೆ. ಗುಹೆಯ ಮುಂದೆ ನೆಲಮಟ್ಟದಲ್ಲಿ ನಿರ್ಮಿಸಿರುವ ಮುರುಗನ್ ಪ್ರತಿಮೆ 146 ಅಡಿಗಳ ಎತ್ತರವಿದ್ದು, ಇದು ಜಗತ್ತಿನ ಎತ್ತರದ ಮುರುಗನ್ ಪ್ರತಿಮೆಯಾಗಿದೆ. ಈ ಪ್ರತಿಮೆ ನೋಡಲು ಬಹಳ ಆಕರ್ಷಕವಾಗಿದ್ದು ದೂರದಿಂದಲೇ ಎದ್ದು ಕಾಣಿಸುತ್ತದೆ. ಇದರ ಆಕರ್ಷಣೆಗೆ ಇನ್ನೊಂದು ಕಾರಣವೆಂದರೆ ಬಂಗಾರ ಬಣ್ಣ ಮತ್ತು ಅದರ ಹಿನ್ನೆಲೆಯಲ್ಲಿ ಹಸಿರು ಹೊದ್ದುಕೊಂಡು ನಿಂತಿರುವ ಬಟು ಬೆಟ್ಟ. ❖

? ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ಮುಂಬರುವ ಮಂಗಳವಾರದೊಳಗೆ ವೀಣಾ ವರ್ಲ್ಡ್ ವೆಬ್‌ಸೈಟ್‌ನಲ್ಲಿ ನಿಮ್ಮ ಉತ್ತರಗಳನ್ನು ಸಲ್ಲಿಸಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ. ವೀಣಾ ವರ್ಲ್ಡ್ **'ಶಿಮ್ಲಾ ಮನಾಲಿ'** (ಟೂರ್ ಕೋಡ್ - HPPS) ಪ್ರವಾಸವನ್ನು ಉಚಿತವಾಗಿ ಗೆಲ್ಲುವ ಅವಕಾಶವನ್ನು ನಿಮ್ಮದಾಗಿಸಿಕೊಳ್ಳಿ, ಅದೃಷ್ಟಶಾಲಿ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ, ಅವರ ಹೆಸರನ್ನು ಮುಂದಿನ ಆರ್ಟಿಕಲ್ ನಲ್ಲಿ 21 ಜುಲೈ 2024 ರಂದು ಪ್ರಕಟಿಸಲಾಗುವುದು.

ಪ್ರಶ್ನೆ 1: ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಫೆನ್ಸರ್ ಯಾರು?
ಪ್ರಶ್ನೆ 2: 'ಕೆಚಪ್' ಪದವು ಯಾವ ಭಾಷೆಯಿಂದ ಬಂದಿದೆ?
ಪ್ರಶ್ನೆ 3: ಮಾನವ ದೇಹದಲ್ಲಿ ಎಷ್ಟು ಪಕ್ಕೆಲುಬುಗಳಿವೆ?
ಪ್ರಶ್ನೆ 4: ಯಾವ ಸ್ಥಳವನ್ನು ಒಮ್ಮೆ ಸ್ಯಾಂಡ್‌ವಿಚ್ ದ್ವೀಪ ಎಂದು ಕರೆಯಲಾಗುತ್ತಿತ್ತು?
ಪ್ರಶ್ನೆ 5: ಅತಿ ಹೆಚ್ಚು ಹಣ ಗಳಿಸಿದ ಫಾಸ್ಟ್ ಅಂಡ್ ಫ್ಯೂರಿಯಸ್ ಚಿತ್ರ ಯಾವುದು?
ಪ್ರಶ್ನೆ 6: 1919 ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನೇತೃತ್ವ ವಹಿಸಿದವರು ಯಾರು?
ಪ್ರಶ್ನೆ 7: ವಿಶ್ವ ಸಮರ II ರ ಸಮಯದಲ್ಲಿ ಇಟಲಿಯನ್ನು ಯಾರು ಮುನ್ನಡೆಸಿದರು?

ಈ ವಾರ ಅದೃಷ್ಟದ ವಿಜೇತರು ಯಾರು ಎಂದು ನೋಡೋಣ ವೀಣಾ ವರ್ಲ್ಡ್‌ನ **'ಶಿಮ್ಲಾ ಮನಾಲಿ'** (ಟೂರ್ ಕೋಡ್-HPPS) ಗೆದ್ದಿದೆ **ಒಳ್ಳೆಯದಾಗಲಿ!**

veenaworld.com
Toll-Free: 1800 22 7979

ADVERTORIAL

ರೀಲ್ ಕನಸುಗಳನ್ನು ರಿಯಾಲಿಟಿ ಆಗಿ ಪರಿವರ್ತಿಸುವುದು!
ಸ್ವಿಟ್ಜರ್ಲೆಂಡ್

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ನಾನು ರೈಲು ಹತ್ತಲು ಬಾಗಿಲನ್ನು ತಲುಪಿದಾಗ, ಅದು ನನ್ನ ಮುಂದೆ ಇದ್ದಕ್ಕಿದ್ದಂತೆ ಮುಚ್ಚಿತು ಮತ್ತು ಹಠಾತ್ ಕಂಪನದೊಂದಿಗೆ ರೈಲು ಹೊರಟಿತು! ರಿತು ಮತ್ತು ನಾನು, ಅಲ್ಲೇ ರೈಲು ನಮ್ಮನ್ನು ಬೀಳ್ಕೊಡುತ್ತಿದ್ದಂತೆ ದೂರಕ್ಕೆ ಮಸುಕಾಗುವುದನ್ನು ನೋಡಿದೆವು. ಅದು ನಮ್ಮಿಂದ ತಪ್ಪಿಹೋಗಿತ್ತು! "ಪರವಾಗಿಲ್ಲ" ಎಂದು ಶಾಂತವಾಗಿ ಹೇಳಿದಳು, "ನಾವು ಮುಂದಿನ ಟ್ರೈನ್‌ನ ಒಂದು ಗಂಟೆಯಲ್ಲಿ ಹಿಡಿಯುತ್ತೇವೆ."

ನಾನು ಟ್ರಾವೆಲ್ ಕಾನ್ಫರೆನ್ಸ್‌ಗಾಗಿ ಸ್ವಿಟ್ಜರ್ಲೆಂಡ್‌ನಲ್ಲಿದ್ದೆ, ಮತ್ತು ಕಾರ್ಯಕ್ರಮದ ನಂತರ, ಸ್ವಿಟ್ಜರ್ಲೆಂಡ್ ಪ್ರವಾಸೋದ್ಯಮಕ್ಕಾಗಿ ಕೆಲಸ ಮಾಡಿರುವ ರಿತು ಮತ್ತು ನಾನು ನಮ್ಮ ವೀಣಾ ವರ್ಲ್ಡ್ ಅತಿಥಿಗಳಿಗೆ ನೀಡಬಹುದಾದ ಸ್ವಿಟ್ಜರ್ಲೆಂಡ್‌ನ ಹೊಸ ಸ್ಥಳಗಳನ್ನುಅನ್ವೇಷಿಸಲು ನಿರ್ಧರಿಸಿದ್ದೆವು. ಸ್ವಿಟ್ಜರ್ಲೆಂಡ್‌ಗೆ ಒಮ್ಮೆ ಭೇಟಿ ನೀಡಿದರೆ ಸಾಕು, ಆ ದೇಶವನ್ನು ಪ್ರೀತಿಸದೆ ಇರಲು ಸಾಧ್ಯವಿಲ್ಲ, ಅಲ್ಲದೆ ಮತ್ತೆ ಮತ್ತೆ ಬರಲು ಹಂಬಲಿಸುತ್ತೀರಿ.

ನಮ್ಮಲ್ಲಿ ಹೆಚ್ಚಿನವರಂತೆ, ಸ್ವಿಟ್ಜರ್ಲೆಂಡ್‌ನ ಹಿಮದಿಂದ ಆವೃತವಾದ ಪರ್ವತಗಳಿಗೆ ನನ್ನ ಮೊದಲ ಪರಿಚಯವು ಚಲನಚಿತ್ರಗಳ ಮೂಲಕ, ವಿಶೇಷವಾಗಿ ಯಶ್ ಚೋಪ್ರಾ ಅವರ ಮೋಡಿಮಾಡುವ ರಚನೆಗಳು. ಸ್ವಿಟ್ಜರ್ಲೆಂಡ್‌ಗೆ ಅವರ ಆರಾಧನೆಯು ಸ್ಪಷ್ಟವಾಗಿತ್ತು, ಏಕೆಂದರೆ ದೇಶವು ಅವರ ಚಲನಚಿತ್ರಗಳಲ್ಲಿ ಕೇಂದ್ರ ಪಾತ್ರವಾಗಿ ಕಾರ್ಯನಿರ್ವಹಿಸುತ್ತದೆ, ಪ್ರತಿ ಚಲನಚಿತ್ರವನ್ನು ದೃಶ್ಯ ಮೇರುಕೃತಿಯಾಗಿ ಪರಿವರ್ತಿಸುತ್ತದೆ. ಇದು ಹಿಮದಿಂದ ಆವೃತವಾದ ಇಳಿಜಾರುಗಳ ನಡುವೆ ರೊಮ್ಯಾಂಟಿಕ್ ಹಾಡುಗಳ ಸರಣಿಯಾಗಿರಲಿ ಅಥವಾ ಸ್ವಿಟ್ಜರ್ಲೆಂಡ್‌ನ ಹಿನ್ನೆಲೆಯಲ್ಲಿ ಸಂಪೂರ್ಣ ಚಲನಚಿತ್ರವಾಗಲಿ, ಯಶ್ ಚೋಪ್ರಾ ಅವರ ಚಲನಚಿತ್ರಗಳು ದೇಶದ ಸೌಂದರ್ಯವನ್ನು ಅದರ ಎಲ್ಲಾ ವೈಭವದಲ್ಲಿ ಪ್ರದರ್ಶಿಸಿದವು.

ವರ್ಷಗಳಿಂದ, ಸೇತುವೆಯ ಮೇಲೆ ಶಾರುಖ್ ಮತ್ತು ಕಾಜೋಲ್ ನೃತ್ಯ ಮಾಡುತ್ತಿರುವ ಚಿತ್ರವು ನಮ್ಮ ಸ್ಮರಣೆಯಲ್ಲಿ ಕೆತ್ತಲಾಗಿದೆ. ಈ ಸುಂದರವಾದ ಸ್ಥಳಗಳನ್ನು ಅನ್ವೇಷಿಸಲು ಅಸಂಖ್ಯಾತ ಪ್ರಯಾಣಿಕರನ್ನು ಪ್ರೇರೇಪಿಸುತ್ತದೆ. ನೀವು ಮೂವಿ ಬಫ್ ಅಲ್ಲದಿದ್ದರೂ ಸಹ, ಈ ಸಿನಿಮೀಯ ಭೂದೃಶ್ಯಗಳ ಆಕರ್ಷಣೆಯನ್ನು ವಿರೋಧಿಸುವುದು ಕಷ್ಟ. ವರ್ಷಗಳ ಹಿಂದೆ ನನ್ನ ಬಾಲ್ಯದ ಗೆಳೆಯರೊಂದಿಗೆ ಸಿನಿಮಾ ನೋಡಿದ್ದು ನನಗೆ ಸ್ಪಷ್ಟವಾಗಿ ನೆನಪಿದೆ. ಕಥಾಹಂದರದ ಕೊರತೆಯಿದ್ದರೂ, ಸ್ವಿಟ್ಜರ್ಲೆಂಡ್‌ನ ಉಸಿರು ಬಿಗಿಹಿಡಿಸುವ ದೃಶ್ಯಾವಳಿಗಳು ನಮ್ಮ ಯುವ ಮನಸ್ಸನ್ನು ಸೂರೆಗೊಂಡವು. ಒಬ್ಬ ಸ್ನೇಹಿತನ ಉದ್ರೇಕಗೊಂಡ ಕಾಮೆಂಟ್ ನನಗೆ ಇನ್ನು ನೆನಪಿದೆ, ಈ ನಟರು ಪಕ್ಕಕ್ಕೆ ಸರಿದರೆ, ಸ್ವಿಟ್ಜರ್ಲೆಂಡ್‌ನ ಸೌಂದರ್ಯವನ್ನು ಸಂಪೂರ್ಣವಾಗಿ ಪ್ರಶಂಶಿಸಬಹುದು!

ಆದ್ದರಿಂದ, ನಾನು ಕೊನೆಗೂ ಸ್ವಿಟ್ಜರ್ಲೆಂಡ್‌ನಲ್ಲಿ ಕಾಲಿಟ್ಟಾಗ, ಶೀತ ಹವಾಮಾನವನ್ನು ಸ್ವೀಕರಿಸಲು ಮತ್ತು ಕೈಯಲ್ಲಿ ಐಸ್‌ಕ್ರೀಮ್‌ನೊಂದಿಗೆ ಜ್ಯೂರಿಚ್‌ನ ಬೀದಿಗಳಲ್ಲಿ ಸುತ್ತಾಡಲು ನಾನು ನಿರ್ಧರಿಸಿದೆ! ಮತ್ತು ಪ್ರಸಿದ್ಧ ಸ್ವಿಸ್ ಚಾಕೊಲೇಟ್‌ಗಳನ್ನು ಸೇವಿಸಿದ ನಂತರ, ನನ್ನ ಪ್ರಯಾಣವು ಇನ್ನಷ್ಟು ಮಧುರವಾಯಿತು. ಐಸ್ ಕ್ರೀಮ್ ನಂತರ, ನಾನು ಪ್ರಸಿದ್ಧ ಸ್ವಿಸ್ ಚಾಕೊಲೇಟ್‌ಗಳಿಗಾಗಿ ಅಂಗಡಿಗಳಿಗೆ ಭೇಟಿ ನೀಡಬೇಕೆಂದು ಹೇಳಬೇಕಾಗಿಲ್ಲ, ವೀಣಾ ವರ್ಲ್ಡ್ ಪ್ರವಾಸದಲ್ಲಿರುವಾಗ ನೀವು ಚಾಕೊಲೇಟ್ ಫ್ಯಾಕ್ಟರಿಯನ್ನು ಭೇಟಿ ಮಾಡಬಹುದು ಮತ್ತು ಈ ಚಾಕೊಲೇಟ್‌ಗಳನ್ನು ಹೇಗೆ ತಯಾರಿಸಲಾಗುತ್ತದೆ ಎಂಬುದನ್ನು ವೀಕ್ಷಿಸಬಹುದು ಮತ್ತು ವೈವಿಧ್ಯಮಯ ಚಾಕೊಲೇಟ್‌ಗಳು ನಿಮ್ಮನ್ನು ಆಶ್ಚರ್ಯಗೊಳಿಸುತ್ತವೆ! ಚಾಕೊಲೇಟ್ ಫ್ಯಾಕ್ಟರಿಯಲ್ಲಿ ಪ್ರವಾಸದಲ್ಲಿರುವಾಗ, ನನ್ನ ಅರಿವಿಗೆ ಬಂದಿದ್ದು ಈ ಹಸುವಿನಿಂದಲೇ ಹಸುವಿನಿಂದಲೇ ಎಂದು! ಅದ್ಭುತವಾದ ಗಾಳಿ, ಹಸಿರು ಎಲ್ಲವೂ ಹಸುಗಳಿಗೆ ಮೇಯಲು ಪರಿಪೂರ್ಣ ವಾತಾವರಣವನ್ನು ಒದಗಿಸುತ್ತದೆ ಮತ್ತು ಇವೆಲ್ಲವೂ ರುಚಿಕರವಾದ ಹಾಲನ್ನು ನೀಡುತ್ತದೆ, ಇದು ವಿಶಿಷ್ಟವಾದ ಮತ್ತು ಅದ್ಭುತವಾದ ಚಾಕೊಲೇಟ್‌ಗಳಿಗೆ ಕಾರಣ ವಾಗುತ್ತದೆ! ಸ್ವಯಂ ಚಾಕೊಹಾಲಿಕ್ ಆಗಿ, ಮೈಸನ್ ಕೈಲರ್‌ಗೆ ಭೇಟಿ ನೀಡದೆ ಸ್ವಿಟ್ಜರ್ಲೆಂಡ್‌ನ ಪ್ರವಾಸವು ಪೂರ್ಣಗೊಳ್ಳುವುದಿಲ್ಲ. ಈ ಮಾರ್ಗದರ್ಶಿ ಪ್ರವಾಸವು ಬೀನ್‌ನಿಂದ ಬಾರ್‌ವರೆಗೆ ಚಾಕೊಲೇಟ್ ತಯಾರಿಕೆಯ ಕಲೆಯ ಬಗ್ಗೆ ಆಕರ್ಷಕನೋಟವನ್ನು ನೀಡಿತು. ಸ್ವಾರಸ್ಯಕರವಾದ ಸ್ವಿಸ್ ಚಾಕೊಲೇಟ್‌ಗಳು ಶ್ರೇಣಿಯಲ್ಲಿ ನಾನು ತೊಡಗಿಸಿಕೊಂಡೆ ಮತ್ತು ಹಿಂದಿರುಗಿದಾಗ ಸ್ನೇಹಿತರು ಮತ್ತು ಸಂಬಂಧಿಕರಿಗಾಗಿ ಕಾರ್ಖಾನೆಯಿಂದ ನೇರವಾಗಿ ಸಾಕಷ್ಟು ಖರೀದಿಸಿದ್ದು ಆಗಿತ್ತು. ನಾನು ಪ್ರಯಾಣಿಸುವಾಗ, ಸ್ಥಳೀಯವಾಗಿ ತಯಾರಿಸಿದ ಸ್ಮಾರಕಗಳು ಮತ್ತು ಉಡುಗೊರೆಗಳನ್ನು ಖರೀದಿಸಲು ಪ್ರಯತ್ನಿಸುತ್ತೇನೆ ಮತ್ತು ಚಾಕೊಲೇಟ್‌ಗಳು ಅತ್ಯುತ್ತಮ ಉಡುಗೊರೆಗಳಲ್ಲಿ ಒಂದಾಗಿದೆ, ಜೊತೆಗೆ ಇದು ಸ್ವಿಸ್ ನಿರ್ಮಿತವಾಗಿದೆ!

ವೀಣಾ ವರ್ಲ್ಡ್ ಯುರೋಪ್ ಟೂರ್ಸ್‌ಗಳಲ್ಲಿ ಸ್ವಿಟ್ಜರ್ಲೆಂಡ್ ವಿಶೇಷ ಸ್ಥಾನವನ್ನು ಹೊಂದಿದೆ ಮತ್ತು ನಮ್ಮ ಅತಿಥಿಗಳು ಆಗಾಗ್ಗೆ ಅದರ ಸೌಂದರ್ಯದಿ ಮೋಹಿತ ರಾಗುವುದು ಆಶ್ಚರ್ಯವೇನಿಲ್ಲ, ಅವರಲ್ಲಿ ಅನೇಕರು ಸ್ವಿಟ್ಜರ್ಲೆಂಡ್‌ನ ಮೀಸಲಾದ ಪ್ರವಾಸಕ್ಕಾಗಿ ಹಿಂದಿರುಗುತ್ತಾರೆ ಅಥವಾ ಆಸ್ಟ್ರಿಯಾ ಅಥವಾ ಫ್ರಾನ್ಸ್‌ನಂತಹ ನೆರೆಯ ರಾಷ್ಟ್ರಗಳೊಂದಿಗೆ ಅದನ್ನು ಅನ್ವೇಷಿಸಲು ಆಯ್ಕೆ ಮಾಡುತ್ತಾರೆ. ಇದು ಸ್ವಿಟ್ಜರ್ಲೆಂಡ್ ನೀಡುವ ವಿಶಿಷ್ಟ ಅನುಭವಗಳನ್ನು ಸವಿಯಲು ತಮ್ಮ ಸಮಯವನ್ನು ವ್ಯಯಿಸಿ ಪ್ರತಿಯೊಂದು ಗಮ್ಯಸ್ಥಾನದ ಅದ್ಭುತಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ಮುಳುಗಿಸಲು ಅನುವು ಮಾಡಿಕೊಡುತ್ತದೆ.

ಸ್ವಿಟ್ಜರ್ಲೆಂಡ್‌ನ ಪಾಕಶಾಲೆಯ ಮತ್ತು ಭಾಷಾ ವೈವಿಧ್ಯತೆಯು ತನ್ನ ನೆರೆಯ ರಾಷ್ಟ್ರಗಳಿಗೆ ಅದರ ಸಾಮೀಪ್ಯವನ್ನು ಪ್ರತಿಬಿಂಬಿಸುತ್ತದೆ. ಟಿಸಿನೊ ಪ್ರದೇಶದಲ್ಲಿ, ನೀವು ಇಟಾಲಿಯನ್ ಸುವಾಸನೆಯನ್ನು ಆನಂದಿಸುತ್ತೀರಿ, ಆದರೆ ನ್ಯೂಚಾಟೆಲ್ ಬಳಿಯ ಪಶ್ಚಿಮ ಪ್ರದೇಶವು ಫ್ರೆಂಚ್ ಪಾಕಪದ್ಧತಿಯ ರುಚಿಯನ್ನು ನೀಡುತ್ತದೆ. ಸ್ವಿಟ್ಜರ್ಲೆಂಡ್‌ನ ಉಳಿದ ಭಾಗವು ಪ್ರಧಾನವಾಗಿ ಸ್ವಿಸ್ ಜರ್ಮನ್ - ಮಾತನಾಡುವವರಾಗಿದ್ದು ದೇಶದಾದ್ಯಂತ ಕಂಡುಬರುವ ಸಂಸ್ಕೃತಿಗಳ ಶ್ರೀಮಂತಿಕೆಯನ್ನು ಸೇರಿಸುತ್ತದೆ.

ಮೊದಲ ಬಾರಿಗೆ ಭೇಟಿ ನೀಡುವವರಿಗೆ, ಲುಸರ್ನ್ ಮತ್ತು ಇಂಟರ್‌ಲೇಕನ್ ನಗರಗಳು ಭೇಟಿ ನೀಡಲೇಬೇಕಾದ ನಗರಗಳಾಗಿ ಎದ್ದು ಕಾಣುತ್ತವೆ, ಇವೆರಡೂ ಸ್ವಿಟ್ಜರ್ಲೆಂಡ್‌ನ ಕೆಲವು ಅತ್ಯಂತ ರೋಮಾಂಚಕಾರಿ ಪರ್ವತ ಶಿಖರಗಳಿಗೆ ಸುಲಭ ಪ್ರವೇಶವನ್ನು ನೀಡುತ್ತವೆ. ಲುಸನ್. ಕಪ್ಪೆಲ್‌ಬ್ರೂಕ್ ಸೇತುವೆಯಂತಹ ಮಧ್ಯಕಾಲೀನ ವಾಸ್ತುಶೈಲಿಯಿಂದ ಅಲಂಕರಿಸಲ್ಪಟ್ಟ ಅದರ ಕೋಬ್‌ಸ್ಟೋನ್ ಬೀದಿಗಳು ನನ್ನನ್ನು ಹಿಂದಿನ ಯುಗಕ್ಕೆ ಕರೆದೊಯ್ಯಿತು, ನಾಸ್ಟಾಲ್ಜಿಯಾ ಮತ್ತು ಆಶ್ಚರ್ಯದ ಭಾವವನ್ನು ಹುಟ್ಟುಹಾಕಿತು.

ಲುಸರ್ನ್‌ನಿಂದ, ನಾನು ಮೋಡಿಮಾಡುವ ಪರ್ವತ ರೆಸಾರ್ಟ್ ಪಟ್ಟಣವಾದ ಎಂಗೆಲ್‌ಬರ್ಗ್‌ಗೆ ಸಾಹಸ ಮಾಡಿದೆ, ಇದು ಪೋಸ್ಟ್‌ಕಾರ್ಡ್‌ನಲ್ಲಿರುವತಹದೇ ದೃಶ್ಯವಾಗಿದೆ. ಈ ಸುಂದರವಾದ ಹಿಮ್ಮೆಟ್ಟುವಿಕೆಯು ಸ್ವಿಟ್ಜರ್ಲೆಂಡ್‌ನ ಅತ್ಯಂತ ಪ್ರೀತಿಯ ಶಿಖರವಾದ ಮೌಂಟ್ ಟಿಟ್ಲಿಸ್‌ಗೆ ಗೇಟ್‌ವೇ ಆಗಿ ಕಾರ್ಯನಿರ್ವಹಿಸುತ್ತದೆ. ಕ್ರಾಂತಿಕಾರಿ 'ಟಿಟ್ಲಿಸ್ ರೋಟೇರ್' ತಿರುಗುವ ಕೇಬಲ್ ಕಾರ್ ಮೂಲಕ ಪ್ರವೇಶಿಸಬಹುದು, ಪ್ರಯಾಣವು ನಮ್ಮ ಕಣ್ಣುಗಳ ಮುಂದೆ ತೆರೆದುಕೊಳ್ಳುವ ಭವ್ಯವಾದ ಆಲ್ಪ್ಸ್‌ನ ವಿಹಂಗಮ ದೃಶ್ಯಗಳನ್ನು ಅನಾವರಣಗೊಳಿಸುತ್ತದೆ. 'ಟಿಟ್ಲಿಸ್ ರೋಟೇರ್' ಹತ್ತುತ್ತಿರುವಾಗ, ಕಣ್ಣಿಗೆ ಕಾಣುವಷ್ಟು ವಿಸ್ತಾರವಾದ ಹಿಮದಿಂದ ಆವೃತವಾದ, ಶಿಖರಗಳಿಂದ ಆವೃತವಾದ ಆರೋಹಣವನ್ನು ನೀಡುತ್ತದೆ.ಗೊಂಡೊಲಾದ ಪ್ರತಿ ಮೃದುವಾದ ತಿರುಗುವಿಕೆಯೊಂದಿಗೆ, ನಾನು ಪ್ರಕೃತಿಯ ಭವ್ಯತೆಯ 360-ಡಿಗ್ರಿ ಚಮತ್ಕಾರದಲ್ಲಿ ಮುಳುಗಿದ್ದೇನೆ.

ಲುಸರ್ನ್‌ನಿಂದ ಕೇವಲ 68 ಕಿಲೋಮೀಟರ್‌ಗಳ ಅಂತರದಲ್ಲಿ ಇಂಟರ್‌ಲೇಕೆನ್ ಇದೆ, ಇದು ಥುನ್ ಮತ್ತು ಬ್ರಿಯೆಂಜ್‌ನ ಅದ್ಭುತ ಸರೋವರಗಳ ನಡುವೆ ನೆಲೆಸಿದೆ. ಇಲ್ಲಿ, ಪ್ರಶಾಂತ ಸೌಂದರ್ಯದ ನಡುವೆ ಸಾಹಸವು ಕೈಬೀಸಿ ಕರೆಯುತ್ತದೆ. ಪ್ಯಾರಾಗ್ಲೈಡಿಂಗ್ ಮತ್ತು ರಿವರ್ ರಾಫ್ಟಿಂಗ್‌ನಂತಹ ಅಡ್ರಿನಾಲಿನ್ - ಪಂಪಿಂಗ್ ಚಟುವಟಿಕೆಗಳಿಂದ ಹಿಡಿದು ಥುನ್ ಸರೋವರದ ಐತಿಹಾಸಿಕ ಪ್ಯಾಡಲ್ ಸ್ಟೀಮರ್‌ಗಳಲ್ಲಿ ಪ್ರಶಾಂತವಾದ ಕ್ರೂಸ್‌ಗಳವರೆಗೆ, ಇಂಟರ್‌ಲೇಕನ್ ಪ್ರತಿಯೊಬ್ಬ ಪ್ರಯಾಣಿಕರ ಆಸೆಗಳನ್ನು ಪೂರೈಸುತ್ತದೆ.

ಇಂಟರ್‌ಲೇಕನ್‌ನಲ್ಲಿರುವಾಗ, ಅದರ ಸುಂದರವಾದ ಬೀದಿಗಳಲ್ಲಿ ಅಡ್ಡಾಡುವುದು ಅತ್ಯಗತ್ಯ. ಕ್ಯಾಸಿನೊದ ಬಳಿ, ಪ್ರಸಿದ್ಧ ಚಲನಚಿತ್ರ ನಿರ್ಮಾಪಕ ಯಶ್ ಚೋಪ್ರಾ ಅವರಿಗೆ ಗೌರವ ಸಲ್ಲಿಸುವ ಪರಿಚಿತ ಪ್ರತಿಮೆಯು ಎತ್ತರವಾಗಿ ನಿಂತಿದೆ. ಈ ಗೌರವವು ಅವರ ಸಾಂಪ್ರದಾಯಿಕ ಚಲನಚಿತ್ರಗಳ ಮೂಲಕ ಈ ಪ್ರದೇಶಕ್ಕೆ ಪ್ರವಾಸೋದ್ಯಮವನ್ನು ಉತ್ತೇಜಿಸುವಲ್ಲಿ ಅವರ ಆಳವಾದ ಪ್ರಭಾವವನ್ನು ನೆನಪಿಸುತ್ತದೆ.

ಇಂಟರ್‌ಲೇಕನ್‌ನ ಸಮೀಪದಲ್ಲಿ ಆಕರ್ಷಕ ಜಂಗ್‌ಫ್ರೂ ಪ್ರದೇಶವಿದೆ. ಸ್ವಿಟ್ಜರ್ಲೆಂಡ್‌ಗೆ ನಿಮ್ಮ ಕೊನೆಯ ಭೇಟಿಯಿಂದ ಸ್ವಲ್ಪ ಸಮಯ ಕಳೆದಿದ್ದರೆ, ಆಧುನಿಕ ಇಂಜಿನಿಯರಿಂಗ್ ಮತ್ತು ವಿಶ್ವದ ಅತ್ಯಾಧುನಿಕ ಟ್ರೈಬಲ್ ಗೊಂಡೊಲಾಗೆ ಸಾಕ್ಷಿಯಾಗಿರುವ ಗ್ರಿಂಡೆಲ್‌ವಾಲ್ಡ್‌ನಿಂದ ಈಗರ್ ಎಕ್ಸ್‌ಪ್ರೆಸ್ ಹಡಗಿನಲ್ಲಿ ಹಿಂತಿರುಗಲು ಮತ್ತು ಮರೆಯಲಾಗದ ಪ್ರಯಾಣವನ್ನು ಪ್ರಾರಂಭಿಸಲು ಇದು ಸೂಕ್ತ ಸಮಯವಾಗಿದೆ. ಕೇವಲ 15 ನಿಮಿಷಗಳಲ್ಲಿ, ನೀವು ಹಿಮದಿಂದ ಆವೃತವಾದ ಶಿಖರಗಳು ಮತ್ತು ಸ್ಪರ್ಶಿಸದ ಆಲ್ಪೈನ್ ಭೂದೃಶ್ಯಗಳಿಂದ ಆವೃತವಾಗಿರುವ ಈಗರ್ ಗ್ಲೇಸಿಯರ್ ನಿಲ್ದಾಣಕ್ಕೆ ಏರುತ್ತೀರಿ. ಕೇಬಲ್ ಕಾರ್‌ಗಳ ವಿನಮ್ರ ಆರಂಭಕ್ಕೆ ಇದು ವ್ಯತಿರಿಕ್ತವಾಗಿದೆ, ವಿನಮ್ರ ಆರಂಭದಲ್ಲಿ ಸ್ವಿಸ್ ರೈತರಿಗೆ ಸಾರಿಗೆಯ ಮೂಲ ಸಾಧನವಾಗಿ ಅಭಿವೃದ್ಧಿಪಡಿಸಲಾಯಿತು.

ಸಮುದ್ರ ಮಟ್ಟದಿಂದ 3,454 ಮೀಟರ್ (11,332 ಅಡಿ) ಎತ್ತರದಲ್ಲಿರುವ ಯುರೋಪ್‌ನ ಅತಿ ಎತ್ತರದ ರೈಲು ನಿಲ್ದಾಣದಲ್ಲಿ ಜಂಗ್‌ಫ್ರೌಜೋಚ್‌ನ ಮೇಲೆ ನಿಂತಾಗ, ನನ್ನನ್ನು ಸುತ್ತುವರೆದಿರುವ ಸೌಂದರ್ಯದಿಂದ ನಾನು ಮೈಮರೆತಿದ್ದೇನೆ. ಈ ಪರ್ವತದ ತುದಿಗೆ ಜಂಗ್‌ಫ್ರೌ ಎಂದು ಹೆಸರಿಸಿರುವುದು ಆಶ್ಚರ್ಯವೇನಿಲ್ಲ, ಇದರರ್ಥ ಜರ್ಮನ್ ಭಾಷೆಯಲ್ಲಿ ಯುವತಿ ಅಥವಾ ಕನ್ಯೆ. ಪರ್ವತವು ಅನುಗ್ರಹ ಮತ್ತು ಗಾಂಭೀರ್ಯದ ಸೆಳವು ಹೊರಹೊಮ್ಮುವಂತೆ ಸುಂದರ ಯುವತಿಯ ಹೋಲಿಕೆ ಸೂಕ್ತವಾಗಿದೆ.

ವರ್ಷಗಳಲ್ಲಿ, ನಾನು ಸ್ವಿಟ್ಜರ್ಲೆಂಡ್‌ನ ವಿವಿಧ ನಗರಗಳನ್ನು ಅನ್ವೇಷಿಸುವ ಆನಂದವನ್ನು ಪಡೆದಿದ್ದೇನೆ, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಆಕರ್ಷಣೆಯನ್ನು ನೀಡುತ್ತದೆ. UN ಪ್ರಧಾನ ಕಛೇರಿಯ ನೆಲೆಯಾಗಿ ತನ್ನ ಪ್ರತಿಷ್ಠಿತ ಸ್ಥಾನಮಾನವನ್ನು ಹೊಂದಿರುವ ಜಿನೀವಾ, ಜಾಗತಿಕ ವೇದಿಕೆಯಲ್ಲಿ ಶಾಂತಿ ಮತ್ತು ತಟಸ್ಥತೆಗೆ ಸ್ವಿಟ್ಜರ್ಲೆಂಡ್‌ನ ಬದ್ಧತೆಯ ಪ್ರಬಲ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಸಮೀಪದ ಲೌಸನ್ನೆ ತನ್ನ ಹೆಸರಾಂತ ದ್ರಾಕ್ಷಿತೋಟಗಳೊಂದಿಗೆ ಕೈಬೀಸಿ ಕರೆಯುತ್ತದೆ, ಸುಂದರವಾದ ಭೂದೃಶ್ಯಗಳ ನಡುವೆ ಪ್ರದೇಶದ ಅತ್ಯುತ್ತಮ ವೈನ್‌ಗಳಲ್ಲಿ ಪಾಲ್ಗೊಳ್ಳಲು ಪ್ರವಾಸಿಗರನ್ನು ಆಹ್ವಾನಿಸುತ್ತದೆ. ಏತನ್ಮಧ್ಯೆ, ವೆವಿ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಚಾರ್ಲಿ ಚಾಪ್ಲಿನ್ ಮ್ಯೂಸಿಯಂನೊಂದಿಗೆ ಅಳವಡಿಸಿಕೊಂಡಿದೆ, ಒಮ್ಮೆ ಈ ಪಟ್ಟಣವನ್ನು ಮನೆಗೆ ಕರೆದ ಅಪ್ರತಿಮ ಚಲನಚಿತ್ರ ನಿರ್ಮಾಪಕನಿಗೆ ಗೌರವ ಸಲ್ಲಿಸಿದೆ. ರಾಜಧಾನಿಯಾದ ಬರ್ನ್‌ನಲ್ಲಿ, ಅದರ ಸುಂದರವಾದ ಹಳೆಯ ಪಟ್ಟಣದಲ್ಲಿ ಇತಿಹಾಸವು ಜೀವಂತವಾಗಿದೆ, ಆದರೆ ಐನ್‌ಸ್ಟೈನ್‌ಹಾಸ್ ಪೌರಾಣಿಕ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ನ ಜೀವನದ ಒಳನೋಟವನ್ನು ಒದಗಿಸುತ್ತದೆ. ಸ್ವಿಟ್ಜರ್ಲೆಂಡ್‌ನ ಪ್ರತಿಯೊಂದು ನಗರವು ತನ್ನದೇ ಆದ ಕಥೆಯನ್ನು ಹೊಂದಿದೆ, ಇದು ದೇಶದ ಶ್ರೀಮಂತ ಸಂಸ್ಕೃತಿ, ಇತಿಹಾಸ ಮತ್ತು ನಾವೀನ್ಯತೆಯನ್ನು ಪ್ರತಿಬಿಂಬಿಸುತ್ತದೆ.

ನೀವು ಪ್ರಕೃತಿಯ ಶಾಂತಿ, ಸಾಹಸದ ರೋಮಾಂಚನ ಅಥವಾ ಸ್ವಿಸ್ ಆತಿಥ್ಯದ ರುಚಿಯನ್ನು ಬಯಸುತ್ತಿರಲಿ, ಸ್ವಿಟ್ಜರ್ಲೆಂಡ್ ನಿಜವಾಗಿಯೂ ಎಲ್ಲರಿಗೂ ಏನನ್ನಾದರೂ ಹೊಂದಿದೆ. ಆದ್ದರಿಂದ ಬನ್ನಿ, ಈ ಮೋಡಿಮಾಡುವ ದೇಶದ ಸೌಂದರ್ಯದಲ್ಲಿ ಮುಳುಗಿರಿ ಮತ್ತು ಸ್ವಿಟ್ಜರ್ಲೆಂಡ್‌ನ ಮ್ಯಾಜಿಕ್ ನಿಮ್ಮನ್ನು ಆಕಾಶದಲ್ಲಿ ತೇಲಾಡಿಸಲಿ. ನಿಮ್ಮ ಸ್ವಂತ ಚಲನಚಿತ್ರದಲ್ಲಿ ನಟಿಸಲು ಮತ್ತು ಸ್ವಿಟ್ಜರ್ಲೆಂಡ್‌ನ ಉಸಿರುಕಟ್ಟುವ ಭೂದೃಶ್ಯಗಳು ಮತ್ತು ಟೈಮ್‌ಲೆಸ್ ಆಕರ್ಷಣೆಯ ನಡುವೆ ನಿಮ್ಮ ಸ್ವಂತ ಕಥೆಯನ್ನು ಸ್ಕ್ರಿಪ್ಟ್ ಮಾಡಲು ಇದು ಸರಿಯಾದ ಸಮಯ.

Email: travel@veenaworld.com | ವೀಣಾ ವರ್ಲ್ಡ್ ವೆಬ್‌ಸೈಟ್ www.veenaworld.com ನಲ್ಲಿ ಪ್ರತಿ ವಾರ ವಿವಿಧ ಪ್ರಕಟಣೆಗಳಲ್ಲಿ ಪ್ರಕಟವಾಗುವ ಸುನೀಲ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ಈಗ ಓದಿ.

ಬಾಕುವನ್ನು ಅನ್ವೇಷಿಸಿ: ಪ್ರಾಚೀನ ಅದ್ಭುತಗಳನ್ನು ಅನಾವರಣಗೊಳಿಸಿ, ಆಧುನಿಕ ಅದ್ಭುತಗಳನ್ನು ಅಳವಡಿಸಿಕೊಳ್ಳಿ!

ವೀಣಾ ಪ್ರಪಂಚದೊಂದಿಗೆ ಬಾಕುವಿನ ಮೋಡಿಮಾಡುವ ಭೂದೃಶ್ಯಗಳ ಮೂಲಕ ಮರೆಯಲಾಗದ ಪ್ರಯಾಣವನ್ನು ಪ್ರಾರಂಭಿಸಿ! ಶಿರ್ವಾನ್‌ಶಾ ಅರಮನೆ ಮತ್ತು ಮೇಡನ್ ಟವರ್‌ನ ಪ್ರಾಚೀನ ಅದ್ಭುತಗಳನ್ನು ಅನ್ವೇಷಿಸಿ, ಬಾಕು ಶ್ರೀಮಂತ ಇತಿಹಾಸದ ಸಾಂಕೇತಿಕ ಚಿಹ್ನೆಗಳು. ಪುರಾತನ ಗುಹೆ ವರ್ಣಚಿತ್ರಗಳು ಮತ್ತು ಮಣ್ಣಿನ ಜ್ವಾಲಾಮುಖಿಗಳ ನೆಲೆಯಾಗಿರುವ ಅತೀಂದ್ರಿಯ ಗೊಬಸ್ತಾನ್ ರಾಷ್ಟ್ರೀಯ ಉದ್ಯಾನವನವನ್ನು ಅಧ್ಯಯನ ಮಾಡಿ. ಹೇದರ್ ಅಲಿಯೆವ್ ಸೆಂಟರ್ ಮತ್ತು ಫ್ಲೇಮ್ ಟವರ್ಸ್‌ನಂತಹ ಆಧುನಿಕ ವಾಸ್ತುಶಿಲ್ಪದ ಅದ್ಭುತಗಳನ್ನು ನೋಡಿ. ಕ್ಯುಬಾ ಮತ್ತು ಶೆಕಿಯ ಸಾಂಸ್ಕೃತಿಕ ವಸ್ತ್ರಗಳಲ್ಲಿ ತೊಡಗಿಸಿಕೊಳ್ಳಿ, ಶಾಕಿ ಖಾನ್‌ಗಳ ಅರಮನೆ ಮತ್ತು ಕಿಶ್‌ನ ಐತಿಹಾಸಿಕ ಚರ್ಚ್ ಅನ್ನು ಅನ್ವೇಷಿಸಿ. ತುಫಾಂಡಾಗ್ ಪರ್ವತದ ಮೇಲೆ ಅದ್ಭುತವಾದ ನೋಟಗಳೊಂದಿಗೆ ನಿಮ್ಮ ಸಾಹಸವನ್ನು ಮುಕ್ತಾಯಗೊಳಿಸಿ. ವೀಣಾ ವರ್ಲ್ಡ್‌ನೊಂದಿಗೆ ನಿಮ್ಮ ಬಕೆಟ್ ಲಿಸ್ಟ್ ನಿಂದ ಈ ಗುಪ್ತ ರತ್ನವನ್ನು ಟಿಕ್ ಮಾಡುವ ಮೂಲಕ ನಿಮ್ಮ ಟ್ರಾವೆಲ್ ಮಿಷನ್ನ ಸಾಧನೆಯತ್ತ ಸಾಗಿ!

ಚಲೋ, ಬಾಗ್ ಭರೋ, ನಿಕಲ್ ಪಡೋ! ವೀಣಾ ವರ್ಲ್ಡ್ ಜೊತೆ

ವೀಣಾ ವರ್ಲ್ಡ್
ಬಾಕು ಅಜೆರ್ಬೈಜಾನ್
ಬಾಕು (3N) ಕುಬಾ (1N) ಗಬಾಲಾ (2N)

Email: travel@veenaworld.com | veenaworld.com
Veena World Bengaluru: 887 997 2217 | Toll-Free: 1800 22 7979
VEENA WORLD
Travel. Explore. Celebrate Life.

ಶಿರಸಿಯ ರಾಜೀವ ನಗರದಲ್ಲಿರುವ ಅಂಗನವಾಡಿ ಕೇಂದ್ರ

ಅಂಕಿ ಅಂಶ

21.54 ಲಕ್ಷ 6 ತಿಂಗಳಿಂದ 3 ವರ್ಷದ ಮಕ್ಕಳು | 16.98 ಲಕ್ಷ 3 ವರ್ಷದಿಂದ 6 ವರ್ಷದ ಮಕ್ಕಳು | 4.29 ಲಕ್ಷ ಗರ್ಭಿಣಿಯರ ಸಂಖ್ಯೆ | 4.18 ಲಕ್ಷ ಬಾಣಂತಿಯರು | 2,081 ಬಾಲಕಿಯರು

(2023–24ರ ಅಂಕಿ–ಅಂಶ)

ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ಬಾಡಿಗೆ ಟಿನ್ ಶೆಡ್‌ನಲ್ಲಿ ನಡೆಯುತ್ತಿರುವ 3ನೇ ಅಂಗನವಾಡಿ ಕೇಂದ್ರ

ಅಂಗನವಾಡಿ: ಸಮಸ್ಯೆ ನೂರು!

ಒಂದನೇ ಪುಟದಿಂದ...

ಅಲ್ಲೇ ಅಡುಗೆ ಮಾಡಬೇಕಾದ ಸ್ಥಿತಿ. ಇಕ್ಕಟ್ಟಾದ ಸ್ಥಳ. ಗಾಳಿ, ಬೆಳಕಿನ ಕೊರತೆ ಒಂದೆಡೆಯಾದರೆ, ಶೌಚಾಲಯದ ಕೊರತೆ ಮತ್ತೊಂದೆಡೆ. ಇಂಥ ಬಾಡಿಗೆ ಅಂಗನವಾಡಿಗಳಿಗೆ ಕಾಂಪೌಂಡ್, ಆಟದ ಮೈದಾನ, ಶುದ್ಧ ಕುಡಿಯುವ ನೀರು, ಫ್ಯಾನ್ ಗಗನ ಕುಸುಮ. ಆರು ವರ್ಷದೊಳಗಿನ ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯ ಭದ್ರ ಅಡಿಪಾಯಕ್ಕಾಗಿ 1975ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ (ಐಸಿಡಿಎಸ್) ಅಂಗನವಾಡಿ ಕೇಂದ್ರಗಳದ್ದೇ ಮುಖ್ಯ ಪಾತ್ರ.

ರೂಢಿಗತವಲ್ಲದ ಶಾಲಾ ಪೂರ್ವ ಶಿಕ್ಷಣ, ಬಾಲ್ಯಾವಸ್ಥೆಯ ಪಾಲನೆ, ಅಪೌಷ್ಟಿಕತೆ ನಿವಾರಣೆ, ತಾಯಿ ಮತ್ತು ಮಕ್ಕಳ ಆರೋಗ್ಯ, ಗರ್ಭಿಣಿ, ಬಾಣಂತಿಯರ ಕಾಳಜಿ, ಶಾಲೆ ತೊರೆಯುವಿಕೆ ಹಾಗೂ ಮರಣದ ಪ್ರಮಾಣ ಕಡಿಮೆ ಮಾಡುವ ಉದ್ದೇಶ, ತಾಯಂದಿರಲ್ಲಿ ತಮ್ಮ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ಅಗತ್ಯಗಳನ್ನು ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು, ಹೀಗೆ ಒಟ್ಟಾರೆ ತಾಯಿ, ಮಕ್ಕಳ ಸಮಗ್ರ ಆರೋಗ್ಯ ಕಾಪಾಡುವಲ್ಲಿ ಅಂಗನವಾಡಿಗಳ ಜವಾಬ್ದಾರಿ ದೊಡ್ಡದು.

2022ರಲ್ಲಿ ಐಸಿಡಿಎಸ್‌ನ ಹೆಸರನ್ನು ಕೇಂದ್ರ ಸರ್ಕಾರವು 'ಸಕ್ಷಮ್ ಅಂಗನವಾಡಿ: ಪೋಷಣ್ 2.0' ಎಂದು ಬದಲಾಯಿಸಿ ಸುಮ್ಮನಾಯಿತೇ ಹೊರತು, ಅವುಗಳ ಸ್ವರೂಪ ಬದಲಾಯಿಸಲಿಲ್ಲ. ಯೋಜನೆಗೆ ಬಲ ತುಂಬಬೇಕಿದ್ದ ಸರ್ಕಾರ, ಅನುದಾನದ ಮೊತ್ತವನ್ನು ವರ್ಷದಿಂದ ವರ್ಷಕ್ಕೆ ಕಡಿತಗೊಳಿಸಿ ಅಂಗನವಾಡಿ ವ್ಯವಸ್ಥೆಯ ಕತ್ತುಹಿಸುಕುತ್ತಿದೆ. ಅಂಗನವಾಡಿ ಕೇಂದ್ರಗಳು ಬಾಡಿಗೆ ಮನೆ, ಸಮುದಾಯ ಭವನ, ಸರ್ಕಾರಿ ಶಾಲೆ ಕಟ್ಟಡ, ಯುವಕ –ಯುವತಿ ಮಂಡಳಿಗಳ ಕಚೇರಿ, ದೇವಾಲಯದ ಅಂಗಳ, ಗ್ರಾಮ ಪಂಚಾಯಿತಿಯ ಕಟ್ಟಡ, ಇಲ್ಲವೇ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ.

ಇಕ್ಕಟ್ಟಿನಲ್ಲೇ ಮಕ್ಕಳ ಆಟ–ಪಾಠ: ಸುಮಾರು 20ರಿಂದ 25 ಮಕ್ಕಳಿರುವ ಒಂದು ಗುಂಪಿಗೆ ವಿಸ್ತಾರವಾದ ಕೊಠಡಿ ಬೇಕು. ಹಾಗೆಯೇ ಹೊರಾಂಗಣವೂ ಇರಬೇಕು. ಅಂಗನವಾಡಿ ಕೇಂದ್ರಗಳು ವೈಜ್ಞಾನಿಕವಾಗಿ ಮಕ್ಕಳನ್ನು ಆಕರ್ಷಿಸುವ ಕೇಂದ್ರವಾಗಿರಬೇಕು. ವಿಶಾಲವಾದ ಹಾಲ್ (ನಡುಮನೆ), ಅಡುಗೆ ಮನೆ, ಶುದ್ಧ ಕುಡಿಯುವ ನೀರು, ವಿದ್ಯುತ್, ಪ್ರತ್ಯೇಕ ಶೌಚಾಲಯ, ಅಂಗವಿಕಲ ಮಕ್ಕಳಿದ್ದರೆ ಅವರಿಗೆ ಉಪಯೋಗಿಸಲು ಅನುಕೂಲವಾಗುವಂಥ ಶೌಚಾಲಯ, ಅಡುಗೆ ಮತ್ತು ಮಕ್ಕಳ ಆಟೋಟ ಸಾಮಗ್ರಿಗಳ ದಾಸ್ತಾನಿಗೆ ಪ್ರತ್ಯೇಕ ಕೊಠಡಿ ಇರಬೇಕೆಂಬುದು ನ್ಯಾಯಮೂರ್ತಿ ಎನ್.ಕೆ.ಪಾಟೀಲ್ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ.

ಆದರೆ, ಕೆಲವು ಜಿಲ್ಲೆಗಳಲ್ಲಿ ಕೋಳಿ ಗೂಡುಗಳಂತಿರುವ ಇಕ್ಕಟ್ಟಾದ ಅಂಗನವಾಡಿಗಳಲ್ಲಿ ಮಕ್ಕಳನ್ನು ಕೂರಿಸಿ ಪಾಠ ಹೇಳಿಕೊಡಲಾಗುತ್ತಿದೆ. ಶೌಚಾಲಯ, ಅಡುಗೆ ಕೋಣೆಯಂತಹ ಯಾವುದೇ ಮೂಲಸೌಲಭ್ಯಗಳಿಲ್ಲದ ಬಾಡಿಗೆ ಕೊಠಡಿಗಳಲ್ಲಿ ಮಕ್ಕಳಿಗೆ ಕೈಕಾಲು ಆಡಿಸಲು ಜಾಗವೇ ಸಾಕಾಗದು. ಇನ್ನು ಆಟ ದೂರದ ಮಾತು. ಇತ್ತೀಚೆಗಷ್ಟೇ ಬೆಂಗಳೂರಿನ ನಾಲ್ಕು ಅಂಗನವಾಡಿ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ಸಮಿತಿಯು, ಅಲ್ಲಿನ ದುಃಸ್ಥಿತಿ ಕಂಡು ಹೌಹಾರಿತ್ತು. ಬಳಿಕ ಪತ್ರಿಕಾಗೋಷ್ಠಿ ನಡೆಸಿದ್ದ ಅವರು, ರಾಜ್ಯದಲ್ಲಿರುವ ಬಹುತೇಕ ಅಂಗನವಾಡಿಗಳ ಸ್ಥಿತಿ ಶೋಚನೀಯವಾಗಿದೆ. ಸರ್ಕಾರ ಇದನ್ನು ಸರಿಪಡಿಸಬೇಕು ಎಂದು ಸೂಚಿಸಿದ್ದರು. ಅಷ್ಟೇ ಅಲ್ಲ, ರಾಜ್ಯದೆಲ್ಲೆಡೆ ಅಂಗನವಾಡಿಗಳ ಸ್ಥಿತಿ ಪರಿಶೀಲನೆಗೆ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಅಪೌಷ್ಟಿಕ ನಿವಾರಣಾ ರಾಜ್ಯ ಸಲಹಾ ಸಮಿತಿಗೆ ಸೂಚನೆಯನ್ನೂ ನೀಡಿದ್ದಾರೆ.

ಬಾಡಿಗೆ ಕಟ್ಟಡಗಳಿಗೆ ಮುಂಗಡ ಹಣದ್ದೇ ಸಮಸ್ಯೆ: ಅಂಗನವಾಡಿಗಾಗಿ ಕಟ್ಟಡ ಇಲ್ಲವೇ ಮನೆಯನ್ನು ಬಾಡಿಗೆ ಪಡೆಯಬೇಕಾದರೆ, ಆ ಕಟ್ಟಡದ ಮಾಲೀಕ ಮುಂಗಡ ಹಣ (ಅಡ್ವಾನ್ಸ್) ಕೇಳುತ್ತಾನೆ. ಆದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡದ ಬಾಡಿಗೆಗಷ್ಟೇ ಅನುದಾನ ನೀಡುತ್ತದೆ ಹೊರತು ಮುಂಗಡ ಹಣವಲ್ಲ. ಹಾಗಾಗಿ, ಬಾಡಿಗೆ ಅಂಗನವಾಡಿ ಕಟ್ಟಡಗಳಿಗೆ ಅಂಗನವಾಡಿ ಕಾರ್ಯಕರ್ತೆಯರೇ ಮುಂಗಡ ಹಣ ಹೊಂದಿಸಬೇಕಾದ ಅನಿವಾರ್ಯತೆ ಇದೆ.

ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿಗಳಿಗೆ ರಾಜ್ಯ ಸರ್ಕಾರ ಸಕಾಲಕ್ಕೆ ಹಣ ಬಿಡುಗಡೆ ಮಾಡುತ್ತಿಲ್ಲ. ಮೂರ್ನಾಲ್ಕು ತಿಂಗಳ ಬಾಡಿಗೆ ಬಾಕಿ ಉಳಿಸಿಕೊಂಡ ಕಾರಣ ಕಟ್ಟಡ ಮಾಲೀಕರು ಅನಿವಾರ್ಯವಾಗಿ ಅಂಗನವಾಡಿಗಳನ್ನು ಖಾಲಿ ಮಾಡುವಂತೆ ಒತ್ತಡ ಹೇರುತ್ತಾರೆ.

'ಕಟ್ಟಡದ ಬಾಡಿಗೆಗೆ ಹಣ ಪ್ರತಿ ತಿಂಗಳು ಬರುವುದಿಲ್ಲ. ಮೂರ್ನಾಲ್ಕು ತಿಂಗಳಿಗೊಮ್ಮೆ ಬಾಡಿಗೆ ನೀಡಿದರೆ ಅದರ ಮಾಲೀಕರು ಕೇಳುತ್ತಾರೆಯೇ' ಎಂಬ ಪ್ರಶ್ನೆ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್‌ನ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷೆ ಮಮತಾಜ್ ಬೇಗಂ ಕಂದಗಲ್ ಅವರದ್ದು.

ಇದರಿಂದ ಬಾಡಿಗೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸುವುದೇ ದುಸ್ತರವಾಗುತ್ತಿದೆ. ಬಳ್ಳಾರಿಯಲ್ಲಿ ಕಾರ್ಯಕರ್ತೆಯೊಬ್ಬರು ತಮ್ಮ ಕರಿಮಣಿ ಸರವನ್ನೇ ಅಡವಿಟ್ಟು ಬಾಡಿಗೆ ಕಟ್ಟಿದ್ದ ನಿದರ್ಶನವೂ ಇದೆ. '2023ರಲ್ಲಿ ಹತ್ತು ತಿಂಗಳು ಬಾಡಿಗೆ ಹಣ ಬಿಡುಗಡೆಯಾಗಿರಲಿಲ್ಲ. ಆಗ ನಮ್ಮ ಒಡವೆಗಳನ್ನು ಅಡವಿಟ್ಟು ಬಾಡಿಗೆ ನೀಡಿದ್ದೇವೆ. ನಗರ ಪ್ರದೇಶಗಳಲ್ಲಿ ಬಾಡಿಗೆ ಕನಿಷ್ಠ ₹ 5000ಕ್ಕಿಂತ ಕಡಿಮೆ ಬಾಡಿಗೆಗೆ ಕೊಠಡಿ ನೀಡುವುದಿಲ್ಲ. ಬರುವ ಅಲ್ಪ ಗೌರವಧನದಲ್ಲಿ ಕಟ್ಟಡದ ಬಾಡಿಗೆ ಕಟ್ಟಿದರೆ, ನಾವು ಜೀವನ ನಡೆಸುವುದು ಹೇಗೆ' ಎಂಬ ಪ್ರಶ್ನೆ ದಾವಣಗೆರೆಯ ಅಂಗನವಾಡಿ ಕಾರ್ಯಕರ್ತೆಯರದ್ದು.

ಕಲಬುರಗಿ ಜಿಲ್ಲೆಯ ಕೆರೆಭೋಸಗಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿನ ಅಂಗನವಾಡಿ ಕೇಂದ್ರ–02ರಲ್ಲಿ ಅಡುಗೆ ಕೋಣೆ ಬಿರುಕು ಬಿಟ್ಟಿರುವುದರಿಂದ ಒಂದೇ ಕೋಣೆಯಲ್ಲಿ ಅಡುಗೆ ತಯಾರಿ ನಡೆಯುತ್ತಿದ್ದು, ಅದರ ಪಕ್ಕದಲ್ಲೇ ಮಕ್ಕಳು ಕಲಿಕೆಯಲ್ಲಿ ತೊಡಗಿರುವುದು

–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಅಂಗನವಾಡಿ ಕೇಂದ್ರಗಳಿಗೆ ನಿಗದಿಯಾಗಿರುವ ಬಾಡಿಗೆ



10 ಸಾವಿರ ಅಂಗನವಾಡಿ ಮೇಲ್ದರ್ಜೆಗೆ

ರಾಜ್ಯದಲ್ಲಿ ಮೊದಲ ಹಂತದಲ್ಲಿ 10 ಸಾವಿರ ಅಂಗನವಾಡಿಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. ವಿವಿಧೆಡೆ ತಲಾ ₹ 20 ಲಕ್ಷ ವೆಚ್ಚದಲ್ಲಿ ಒಂದು ಸಾವಿರ ಅಂಗನವಾಡಿ ಕೇಂದ್ರದ ಕಟ್ಟಡ ನಿರ್ಮಿಸಲಾಗುವುದು.

ಅಂಗನವಾಡಿಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರದಿಂದ ಅನುದಾನದ ನೆರವು ಅಗತ್ಯವಿದೆ. ಹಾಗಾಗಿ, ಜರೂರಾಗಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ.

ಲಕ್ಷ್ಮಿ ಹೆಬ್ಬಾಳಕರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

'ಒಂದು ಅಂಗನವಾಡಿ ಕೇಂದ್ರದಲ್ಲಿ ಕನಿಷ್ಠ 25 ಮಕ್ಕಳು ಇರುತ್ತಾರೆ. ಅವರಿಗೆ ಪೌಷ್ಟಿಕ ಆಹಾರ ತಯಾರಿಸಿ, ಶಾಲಾ ಪೂರ್ವ ಶಿಕ್ಷಣ ನೀಡಬೇಕು. ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ನೀಡಬೇಕು. ಸ್ತ್ರೀ ಶಕ್ತಿ ಯೋಜನೆ, ಭಾಗ್ಯಲಕ್ಷ್ಮಿ, ಮಾತೃ ವಂದನಾ, ಮಾತೃಪೂರ್ಣ, ಮಾತೃಶ್ರೀ ಯೋಜನೆಗಳ ಫಲಾನುಭವಿಗಳ ಹೆಸರು ನೋಂದಣಿ, ವರದಿ ತಯಾರಿಸಬೇಕು– ಇಷ್ಟೆಲ್ಲಾ ಕಾರ್ಯ ನಿರ್ವಹಣೆಗೆ ಸೂಕ್ತ ಕಟ್ಟಡ ಹಾಗೂ ಸಿಬ್ಬಂದಿ ಸೌಲಭ್ಯವೂ ಬೇಕು' ಎನ್ನುತ್ತಾರೆ ಕಾರ್ಯಕರ್ತೆಯರು.

'ಗ್ರಾಮೀಣ ಭಾಗದಲ್ಲಿ, ನಗರಗಳಲ್ಲಿ ಕಾಣುವಂತೆ ಕಿಂಡರ್ ಗಾರ್ಡನ್, 'ಕ್ರಶ್'ಗಳಿರುವುದಿಲ್ಲ. ಇದ್ದರೂ ದುಬಾರಿ ಫೀಜು ತೆತ್ತು ಪುಟ್ಟ ಮಕ್ಕಳನ್ನು ಕಳಿಸಲಾಗದ ಎಷ್ಟೋ ಪೋಷಕರಿರುತ್ತಾರೆ. ರೈತರು, ಕೃಷಿ ಕಾರ್ಮಿಕರು, ಬಡವರು, ಅಸಂಘಟಿತ ಕಾರ್ಮಿಕರ ಮಕ್ಕಳ ಬಾಲ್ಯ ಅರಳುವುದೇ ಅಂಗನವಾಡಿಗಳಲ್ಲಿ. ಗರ್ಭಿಣಿ, ಬಾಣಂತಿಯರೂ ಇಲ್ಲೇ ಪೌಷ್ಟಿಕ ಆಹಾರ ಪಡೆಯುವರು. ಇಂಥ ಸ್ಥಳ ಸ್ವಚ್ಛ ಹಾಗೂ ವಿಶಾಲವಾಗಿರಬೇಕು. ಆದರೆ ಅಂತಹ ಸ್ಥಿತಿ ನಮ್ಮ ಬಾಡಿಗೆ ಅಂಗನವಾಡಿಗಳಲ್ಲಿ ಇಲ್ಲ. ಎಲ್ಲಾ ಅಂಗನವಾಡಿಗಳಿಗೆ ಸ್ವಂತ ಕಟ್ಟಡದ ಅಗತ್ಯವಿದೆ. ಕನಿಷ್ಠ 30X40 ಅಳತೆಯಲ್ಲಿ ಅಂಗನವಾಡಿ ಕಟ್ಟಡಗಳಿದ್ದರೆ ಅನುಕೂಲ. ಸರ್ಕಾರ ಈ ಬಗ್ಗೆ ಖಚಿತ ನಿರ್ಧಾರ ತೆಗೆದುಕೊಳ್ಳಬೇಕು' ಎನ್ನುವುದು ಸಿಐಟಿಯು ಅಧ್ಯಕ್ಷೆ ಎಸ್. ವರಲಕ್ಷ್ಮಿ ಅವರ ಅಭಿಪ್ರಾಯ.

ಅಂಗನವಾಡಿ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳು

46,669 ಸ್ವಂತ ಕಟ್ಟಡ	20,298 ಬಾಡಿಗೆ ಕಟ್ಟಡ	45,496 ಶೌಚಾಲಯ ವ್ಯವಸ್ಥೆ
18,033 ವಿದ್ಯುತ್ ಸೌಕರ್ಯ	45,282 ಫ್ಯಾನ್ ಇರುವ ಕೇಂದ್ರ	39,355 ನೀರಿನ ಸೌಕರ್ಯ ಹೊಂದಿರುವ ಕೇಂದ್ರ

ಸ್ವಂತ ಕಟ್ಟಡ ನಿರ್ಮಾಣಕ್ಕೆ ಜಾಗವಿಲ್ಲ: ಈಚೆಗಷ್ಟೇ ಸ್ವಂತ ಅಂಗನವಾಡಿ ಕಟ್ಟಲು ಸರ್ಕಾರ ₹20 ಲಕ್ಷ (ಇಲಾಖೆ ಪಾಲು ₹ 15 ಲಕ್ಷ, ನರೇಗಾ ಪಾಲು ₹ 5 ಲಕ್ಷ) ಅನುದಾನ ನಿಗದಿಪಡಿಸಿದೆ. ಆದರೆ, ಸ್ವಂತ ಕಟ್ಟಡ ನಿರ್ಮಾಣಕ್ಕೆ ಕೆಲ ಗ್ರಾಮೀಣ ಪ್ರದೇಶ ಹಾಗೂ ನಗರಗಳಲ್ಲಿ ಜಾಗದ್ದೇ ದೊಡ್ಡ ಸಮಸ್ಯೆ. ಸ್ಥಳೀಯ ಸಂಸ್ಥೆಗಳು ಮನಸು ಮಾಡಿದರೆ ಜಾಗದ ಸಮಸ್ಯೆ ಸಮಸ್ಯೆಯೇ ಅಲ್ಲ. 'ಎಷ್ಟೋ ಕಡೆಗಳಲ್ಲಿ ಊರ ಹೊರಗೆ ಜಾಗ ಕೊಡ್ತೀವಿ ಅಂತಾರೆ. ಅಷ್ಟು ದೂರ ಅಂಗನವಾಡಿ ತೆರೆದರೆ ಮಕ್ಕಳು ಬರುವುದಿಲ್ಲ. ನಗರಗಳಲ್ಲಿ ಕೇಂದ್ರ ಸ್ಥಳಗಳಲ್ಲಿ ಜಾಗವಿದ್ದರೂ ಅವುಗಳನ್ನು ಸ್ಥಳೀಯ ಸಂಸ್ಥೆಗಳು ಅಂಗನಾಡಿ ಕಟ್ಟಡಕ್ಕೆ ಕೊಡಲು ಹಿಂದೇಟು ಹಾಕುವುದೇ ಹೆಚ್ಚು. ಏಕೆಂದರೆ ಆ ಸ್ಥಳಗಳಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಿದರೆ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಆದಾಯ ಬರುತ್ತದೆ ಎನ್ನುವ ಲೆಕ್ಕಾಚಾರ. ಹೀಗಾಗಿ ಸ್ವಂತ ಕಟ್ಟಡ ನಿರ್ಮಾಣಕ್ಕೆ ಸ್ಥಳದ್ದೇ ದೊಡ್ಡ ಸಮಸ್ಯೆಯಾಗಿದೆ' ಎನ್ನುತ್ತಾರೆ ಅಂಗನವಾಡಿ ಪರ ಹೋರಾಟಗಾರರು.

'ಸ್ವಂತ ಕಟ್ಟಡಗಳ ನಿರ್ಮಾಣಕ್ಕೆ ಬಿಡುಗಡೆಯಾಗುವ ₹ 20 ಲಕ್ಷದಲ್ಲಿ ಶೇ 18 ಜಿಎಸ್‌ಟಿಗೆ ಹೋಗುತ್ತದೆ. ಸರ್ವೀಸ್‌ಗೆ ಶೇ 3, ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್‌ಗೆ ಶೇ 1 ವೆಚ್ಚವಾಗುತ್ತದೆ. ಕೊನೆಗೆ ಉಳಿಯುವುದೇ ಸುಮಾರು ₹15 ಲಕ್ಷದಷ್ಟು ಮಾತ್ರ. ಅಷ್ಟು ಮೊತ್ತದಲ್ಲಿ ಗುಣಮಟ್ಟದ, ಸಕಲ ಸೌಲಭ್ಯವುಳ್ಳ ಕಟ್ಟಡ ನಿರ್ಮಾಣ ಹೇಗೆ ಸಾಧ್ಯ. ಇಂಥ ಕಟ್ಟಡಗಳ ಕನಿಷ್ಠ 5 ವರ್ಷವೂ ಬಾಳಿಕೆ ಬರುವುದಿಲ್ಲ' ಎನ್ನುತ್ತಾರೆ ಕಟ್ಟಡ ನಿರ್ಮಾಣಗಾರರು.

ಕಾರ್ಯಕರ್ತೆಯರ ವಿರುದ್ಧ ಕ್ರಮದ ತೂಗುಕತ್ತಿ: 'ಅಂಗನವಾಡಿಗಳಲ್ಲಿ ಇರುವ ಸಮಸ್ಯೆಗಳನ್ನು ಕಾರ್ಯಕರ್ತೆಯರು ಮಾಧ್ಯಮಗಳ ಮುಂದೆ ಹೇಳಿಕೊಂಡರೆ, ಅಂಥವರ ವಿರುದ್ಧ ಇಲಾಖೆಯ ಅಧಿಕಾರಿಗಳು ನಿಂದನೆ, ಇಲ್ಲವೇ ನೋಟಿಸ್ ನೀಡಿ ಕ್ರಮ ಕೈಗೊಳ್ಳುತ್ತಿದ್ದಾರೆ' ಎನ್ನುತ್ತಾರೆ ಅಂಗನವಾಡಿ ಪರ ಹೋರಾಟಗಾರ್ತಿಯರಾದ ವರಲಕ್ಷ್ಮಿ ಮತ್ತು ಜಯಮ್ಮ.

'ಬಡವರು, ವಿಧವೆಯರು, ಮಾಜಿ ದೇವದಾಸಿಯರು ಇಲ್ಲವೇ ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವ ಹೆಣ್ಣುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದಾರೆ. ಜೀವನ ನಿರ್ವಹಣೆಗೆ ಇರುವ ಕೆಲಸ ಕಳೆದುಕೊಂಡರೆ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ. ಹಾಗಾಗಿ, ಬಹುತೇಕ ಕಾರ್ಯಕರ್ತೆಯರು ತಮ್ಮ ಅಂಗನವಾಡಿಗಳಲ್ಲಿ ಸಮಸ್ಯೆಗಳಿದ್ದರೂ ಯಾವುದನ್ನೂ ಹೇಳಿಕೊಳ್ಳದೇ ಸುಮ್ಮನಿದ್ದಾರೆ. ಕಟ್ಟಡಕ್ಕೆ ಬಾಡಿಗೆ ಬಂದಿಲ್ಲ, ಮೂಲಸೌಕರ್ಯ ಇಲ್ಲ, ತಮ್ಮ ಪಾಲಿನ ಸಂಬಳ ಬಂದಿಲ್ಲ ಎಂದು ಕೇಳುವುದು ತಪ್ಪೇ' ಎಂಬುದು ಹೋರಾಟಗಾರ್ತಿಯರ ಪ್ರಶ್ನೆ.

'ಹೊಸಪೇಟೆಯಲ್ಲಿ ಈ ಹಿಂದೆ ಅಂಗನವಾಡಿ ಕಟ್ಟಡದ ಬಾಡಿಗೆ ಕಟ್ಟಿಲ್ಲ. ಸಂಬಳ ಬಂದಿಲ್ಲ ಎಂದು ಅಂಗನವಾಡಿ ಕಾರ್ಯಕರ್ತೆಯರು ಪತ್ರಿಕಾಗೋಷ್ಠಿಯಲ್ಲಿ ದೂರಿದ್ದರು. ಇದಕ್ಕೆ ಪ್ರತೀಕಾರವಾಗಿ ಅಲ್ಲಿಯ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಜಿಲ್ಲಾಧಿಕಾರಿ ಆ ಕಾರ್ಯಕರ್ತೆಯರಿಗೆ ನೋಟಿಸ್ ನೀಡಿದ್ದರು. ಬಾಡಿಗೆ ನೀಡದ ಕಾರಣಕ್ಕೆ ಮಾಲೀಕರು ಗಲಾಟೆ ಮಾಡಿ ಸಾಮಗ್ರಿಗಳನ್ನು ಹೊರಗೆ ಹಾಕಿದ ನಿದರ್ಶನಗಳೂ ಇವೆ' ಎನ್ನುತ್ತಾರೆ ವರಲಕ್ಷ್ಮಿ.

'ಬೆಂಗಳೂರಿನಲ್ಲಿ ಸರ್ಕಾರ ನಿಗದಿ ಮಾಡಿರುವ ಕಡಿಮೆ ಮೊತ್ತಕ್ಕೆ ಯಾರೂ ಕಟ್ಟಡ ಬಾಡಿಗೆ ಕೊಡುವುದಿಲ್ಲ. ಬೆಂಗಳೂರಿನ ಕೊಳೆಗೇರಿಗಳಲ್ಲಿ ಇರುವ ಅಂಗನವಾಡಿಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಸರ್ಕಾರ ಈ ಬಗ್ಗೆ ಗಮನಹರಿಸಬೇಕಿದೆ' ಎನ್ನುತ್ತಾರೆ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿಯ ಅಧ್ಯಕ್ಷ ಶಿವಶಂಕರ್.

ವಿದ್ಯುತ್ ಬಿಲ್ ಹೊರೆ ತಗ್ಗಿಸಲಿ: ರಾಜ್ಯ ಸರ್ಕಾರ ಗೃಹಜ್ಯೋತಿ ಯೋಜನೆ ಜಾರಿಗೆ ತಂದಿದೆ. ಅಂತೆಯೇ ಶಾಲಾ, ಕಾಲೇಜುಗಳಿಗೂ ಉಚಿತ ವಿದ್ಯುತ್ ಪೂರೈಸುತ್ತಿದೆ. ಆದರೆ, ಅಂಗನವಾಡಿಗಳಿಗೆ ಏಕೆ ಉಚಿತ ವಿದ್ಯುತ್ ಕಲ್ಪಿಸಿಲ್ಲ. ಅಂಗನವಾಡಿ ಕಾರ್ಯಕರ್ತೆಯರೇ ಎಷ್ಟೋ ಬಾರಿ ವಿದ್ಯುತ್ ಬಿಲ್ ಕಟ್ಟಿದ ಉದಾಹರಣೆಗಳಿವೆ. ಕಾರ್ಯಕರ್ತೆಯರ ಬದ್ಧತೆಯಿಂದಾಗಿಯೇ ಐಸಿಡಿಎಸ್ ಯೋಜನೆ ಇನ್ನೂ ಉಸಿರಾಡುತ್ತಿದೆ. ಹೀಗಿರುವಾಗ ಸ್ಥಳೀಯ ಸಂಸ್ಥೆಗಳು ವಿದ್ಯುತ್ ಬಿಲ್ ಕಟ್ಟುವಂತಾಗಬೇಕು. ಇಲ್ಲವೇ ಸರ್ಕಾರ ಅಂಗನವಾಡಿ ಕೇಂದ್ರಗಳಿಗೂ 'ಗೃಹ ಜ್ಯೋತಿ' ಯೋಜನೆ ವಿಸ್ತರಿಸಬೇಕು. ಸಂಬಂಧಿಸಿದ ಅಧಿಕಾರಿಗಳು ಮನಸ್ಸು ಮಾಡಿದರೆ ಪ್ರತಿ ತಿಂಗಳೂ ಸಕಾಲಕ್ಕೆ ಬಾಡಿಗೆ ಹಣ, ಕಾರ್ಯಕರ್ತೆಯರ ಸಂಬಳ ನೀಡಬಹುದು. ಆದರೆ, ಇದಕ್ಕೆ ಇಚ್ಛಾಶಕ್ತಿಯ ಕೊರತೆ ಇದೆ ಎನ್ನುತ್ತಾರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಹಾಗಾಗಿ, ಉತ್ತಮ ಪ್ರಜೆಗಳನ್ನು ರೂಪಿಸುವುದಕ್ಕಾಗಿ ಮಕ್ಕಳಿಗೆ ಬಾಲ್ಯದಲ್ಲೇ ಉತ್ತಮ ಅಡಿಪಾಯ ಹಾಕಬೇಕು. ಅಂಥ ಅಡಿಪಾಯ ಹಾಕುವ ಅಂಗನವಾಡಿಗಳು ಸಬಲೀಕರಣಗೊಳ್ಳಬೇಕಾದ ತುರ್ತು ಅಗತ್ಯವಿದೆ.

(ಪೂರಕ ಮಾಹಿತಿ: ಸಂಧ್ಯಾ ಹೆಗಡೆ, ಮಂಜುನಾಥ ಎಲ್., ಬಾಲಚಂದ್ರ ಎಚ್., ಅನಿತಾ ಎಚ್., ಮಲ್ಲಿಕಾರ್ಜುನ ನಾಲವಾರ)

ಸಿಎಸ್‌ಆರ್ ಅಡಿಯಲ್ಲಿ ಸ್ಮಾರ್ಟ್ ಅಂಗನವಾಡಿ

ರಾಜ್ಯದ ಆನೇಕಲ್, ದೊಡ್ಡಬಳ್ಳಾಪುರ, ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಅನೇಕ ಕಡೆ ಖಾಸಗಿ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿ ಅಡಿಯಲ್ಲಿ ಸ್ಮಾರ್ಟ್ ಅಂಗನವಾಡಿಗಳನ್ನು ರೂಪಿಸಿವೆ.

ಇಲಾಖೆಯ ಅಧಿಕಾರಿಗಳ ಆಸಕ್ತಿ, ಸ್ಥಳೀಯರ ನೆರವಿನಿಂದ ಸ್ಮಾರ್ಟ್ ಅಂಗನವಾಡಿಗಳು ರೂಪುಗೊಂಡಿವೆ. ಆದರೆ, ಇದೇ ವಾತಾವರಣ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಇಲ್ಲ. ಸ್ಥಳದ ಸೌಲಭ್ಯ ಕಲ್ಪಿಸಿದರೆ ಸಿಎಸ್‌ಆರ್ ನಿಧಿ ಅಡಿ ಅನೇಕ ಕಂಪನಿಗಳು ಅಂಗನವಾಡಿ ಕಟ್ಟಡ ಕಟ್ಟಿಸಿಕೊಡಲು ಸಿದ್ಧವಾಗಿವೆ. ಆದರೆ, ಜಾಗದ್ದೇ ಕೊರತೆಯಾಗಿದೆ ಎನ್ನುತ್ತಾರೆ ಇಲಾಖೆಯ ಅಧಿಕಾರಿಯೊಬ್ಬರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೆಲ್ಕೊ ಸೋಲಾರ್ ಫೌಂಡೇಷನ್ ನೆರವಿನಲ್ಲಿ ಕೇವಲ ₹1.10 ಲಕ್ಷ ವೆಚ್ಚದಲ್ಲಿ 10 ಅಂಗನವಾಡಿಗಳನ್ನು ಸ್ಮಾರ್ಟ್ ಕೇಂದ್ರಗಳಾಗಿ ರೂಪಿಸಲಾಗಿದೆ. ಇದರಲ್ಲಿ ಶೇ 50ರಷ್ಟು ಪಾಲನ್ನು ಸ್ಥಳೀಯರು ಭರಿಸಿದ್ದಾರೆ ಎನ್ನುತ್ತಾರೆ ಸ್ಮಾರ್ಟ್ ಅಂಗನವಾಡಿ ಕೇಂದ್ರಕ್ಕೆ ಶ್ರಮಿಸಿದ ಜನಶಿಕ್ಷಣ ಟ್ರಸ್ಟ್ ನಿರ್ದೇಶಕ ಶೀನ ಶೆಟ್ಟಿ.

ಮಾದರಿ ಅಂಗನವಾಡಿ

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಣಿ ಹಾಗೂ ಕಾರ್ಕಳ ತಾಲ್ಲೂಕಿನ ಶ್ರೀದುರ್ಗದಲ್ಲಿರುವ ಮಾದರಿ ಅಂಗನವಾಡಿ ಕೇಂದ್ರಗಳು ರಾಜ್ಯಕ್ಕೆ ಮಾದರಿಯಾಗಿ ಗುರುತಿಸಿಕೊಂಡಿವೆ. ಎರಡೂ ಅಂಗನವಾಡಿ ಕೇಂದ್ರಗಳಲ್ಲಿ ಹೊರಾಂಗಣ ಆಟದ ಮೈದಾನ, ಗೋಡೆಗಳ ಮೇಲೆ ಮಕ್ಕಳ ಸ್ನೇಹಿ ಚಿತ್ರಕಲೆ, ಆಹಾರ ಪದಾರ್ಥಗಳ ದಾಸ್ತಾನಿಗೆ ಪ್ರತ್ಯೇಕ ಕೋಣೆ, ಆಟಿಕೆ, ಕಾಂಪೌಂಡ್ ಹಾಗೂ ಇಂಟರ್‌ನೆಟ್ ಸೌಲಭ್ಯ ಆಧಾರಿತ ಸ್ಮಾರ್ಟ್ ಟಿ.ವಿ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ಮಕ್ಕಳು ಆಟವಾಡುತ್ತ ಕಲಿಯಲು ಪೂರಕ ವಾತಾವರಣ ನಿರ್ಮಾಣ ಮಾಡಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ಎಜಾಕ್ಸ್ ಎಂಜಿನಿಯರಿಂಗ್ ಪ್ರೈವೆಟ್ ಲಿಮಿಟೆಡ್ ಸಿಎಸ್‌ಆರ್ ನಿಧಿಯಡಿ ₹ 23 ಲಕ್ಷ ವೆಚ್ಚದಲ್ಲಿ ಇಗ್ಲೂ ಮಾದರಿಯ (ಹಿಮಾಚ್ಛಾದಿತ ಧ್ರುವ ಪ್ರದೇಶದಲ್ಲಿ ಅರ್ಧ ವೃತ್ತಾಕಾರವಾಗಿರುವ ಮನೆ) ನೂತನ ವಿನ್ಯಾಸದಲ್ಲಿ ನಿರ್ಮಿಸಿರುವ ಆಕರ್ಷಕ ವಿನ್ಯಾಸದ ಅಂಗನವಾಡಿ ಕಟ್ಟಡ ಗಮನ ಸೆಳೆಯುತ್ತಿದೆ.

ಒಂದೇ ಸೂರಿನಡಿ ಪುಟ್ಟ ಮಕ್ಕಳ ಕಲಿಕೆ, ಆಟ, ಶೌಚಾಲಯ, ಅಡುಗೆ ಮನೆ, ಊಟದ ಮನೆ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ತಿಮ್ಮಸಂದ್ರದಲ್ಲಿ ಖಾಸಗಿ ಕಂಪನಿಯೊಂದು ಇಗ್ಲೂ ಮಾದರಿಯಲ್ಲಿ ನಿರ್ಮಿಸಿರುವ ಅಂಗನವಾಡಿ ಕೇಂದ್ರ

ಎಷ್ಟೋ ಅಂಗನವಾಡಿಗಳಿಗೆ ಕಾಂಪೌಂಡ್ ಇಲ್ಲ. ಮಕ್ಕಳಿಗೆ ಆಡಲು ಮೈದಾನವಿಲ್ಲ. ಫ್ಯಾನ್, ಶೌಚಾಲಯ, ಶುದ್ಧ ಕುಡಿಯುವ ನೀರಿನ ಸೌಲಭ್ಯವೂ ಮರೀಚಿಕೆ. ಅಡುಗೆ ಕೋಣೆ, ಊಟದ ಕೋಣೆ, ಮಕ್ಕಳ ಆಟ, ಪಾಠ ಎಲ್ಲವೂ ಒಂದೇ ಕೊಠಡಿಯಲ್ಲೇ ಮಾಡಬೇಕಾದ ಅನಿವಾರ್ಯತೆ. ಇಂಥ ಸ್ಥಳಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರದ್ದು ಮೈಯೆಲ್ಲ ಕಣ್ಣಾಗಿ ಮಕ್ಕಳನ್ನು ಕಾಯುವ ಹೊಣೆಗಾರಿಕೆ ಹೊರಿಸಲಾಗಿದೆ

ವರಲಕ್ಷ್ಮಿ ಎಸ್., ಸಿಐಟಿಯು ಅಧ್ಯಕ್ಷೆ

'ಬಾಡಿಗೆ ಇರಲಿ, ಸ್ವಂತ ಇರಲಿ ಅಂಗನವಾಡಿಗಳಲ್ಲಿ ಮೂಲಸೌಕರ್ಯದ ಕೊರತೆ ಬಗ್ಗೆ ಹೇಳಲು ಕಾರ್ಯಕರ್ತೆಯರು ಹೆದರುತ್ತಾರೆ. ಇಲಾಖೆಯವರು ಕ್ರಮ ಕೈಗೊಳ್ಳುತ್ತಾರೆಂಬ ಭಯ ಅವರದ್ದು. ಕೆಲಸ ಹೋಗುವ ಆತಂಕ. ರಾಜ್ಯದಲ್ಲಿ ಹೊಸದಾಗಿ ಬಾಡಿಗೆ ಕಟ್ಟಡದಲ್ಲಿ ಆರಂಭಿಸಲಾಗಿರುವ ಅಂಗನವಾಡಿಗಳಿಗೆ ಆರು ತಿಂಗಳಿಂದ ಬಾಡಿಗೆ ಹಣ ಬಿಡುಗಡೆಯಾಗಿಲ್ಲ

ಎಂ. ಜಯಮ್ಮ, ರಾಜ್ಯ ಪ್ರಧಾನ ಕಾರ್ಯದರ್ಶಿ, ಎಐಟಿಯುಸಿ

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 07-07-1999

- **ಸೇನೆ ವಶಕ್ಕೆ ಬಟಾಲಿಕ್, ಡ್ರಾಸ್‌ನ 4 ಶಿಖರ**
  ಪ್ರಜಾವಾಣಿ ವಾರ್ತೆ, ನವದೆಹಲಿ, ಜುಲೈ 6– ಕಾರ್ಗಿಲ್‌ನಲ್ಲಿ ಮುಂದುವರೆದಿರುವ ಭೀಕರ ಕಾಳಗದಲ್ಲಿ ಭಾರತೀಯ ಸೇನೆ ಬಟಾಲಿಕ್ ಹಾಗೂ ಡ್ರಾಸ್ ವಲಯದ ನಾಲ್ಕು ಪ್ರಮುಖ ಶಿಖರಗಳನ್ನು ವಶಪಡಿಸಿ ಕೊಂಡಿತು. ಈ ಹೋರಾಟದಲ್ಲಿ ಪಾಕಿಸ್ತಾನದ 55 ಸೈನಿಕರು ಹಾಗೂ 30 ಅತಿಕ್ರಮಣಕಾರರು ಸತ್ತಿದ್ದಾರೆ. ಬಟಾಲಿಕ್ ವಲಯದ ಪಾಯಿಂಟ್ 4812 ಶಿಖರ ಮತ್ತು ಪಾಯಿಂಟ್ 5000 ಪೂರ್ವ ಭಾಗದ ಶಿಖರಗಳನ್ನು ಭಾರತೀಯ ಸೇನೆಯು ನಿನ್ನೆ ರಾತ್ರಿ ವಶಕ್ಕೆ ಪಡೆಯಿತು.

50 ವರ್ಷಗಳ ಹಿಂದೆ

ಭಾನುವಾರ, 07-07-1974

- **ಲಿಂಗನಮಕ್ಕಿ ಅಣೆಗೆ ಇನ್ನಷ್ಟು ನೀರು | ಇನ್ನೊಂದು ವಾರ ಮಳೆ ನೋಡಿ ವಿದ್ಯುತ್ ಖೋತಾ ಪುನರ್‌ವಿಮರ್ಶೆ**
  ಬೆಂಗಳೂರು, ಜುಲೈ 6– ಲಿಂಗನಮಕ್ಕಿಯಲ್ಲಿ ಈಗ ಇರುವ ಜಲಾಶಯ ಮಟ್ಟದ ಬಲದಿಂದ, ಈಗಿಂದೀಗಲೇ ವಿದ್ಯುತ್ ಖೋತಾವನ್ನು ತುಸುಮಟ್ಟಿಗೆ ಕಡಿಮೆ ಮಾಡಲು ಸಾಧ್ಯವಿದೆಯಾದರೂ, ಮಳೆಯ ಅನಿಶ್ಚತೆಯ ದೃಷ್ಟಿಯಿಂದ, ಕನಿಷ್ಠ ಪಕ್ಷ ಇನ್ನೊಂದು ವಾರ ಕಾದು ನೋಡಲು ಸರ್ಕಾರ ನಿರ್ಧರಿಸಿದೆ ಎಂದು ಲೋಕೋಪಯೋಗಿ ಇಲಾಖೆ ಮಂತ್ರಿ ಎಚ್.ಎಂ. ಚನ್ನಬಸಪ್ಪ ವರದಿಗಾರರಿಗೆ ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜುಲೈ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದ್ವಿತೀಯ ಗಂ. 29-00 ನಕ್ಷತ್ರ: ಪುಷ್ಯ ಅಹೋರಾತ್ರ ಯೋಗ: ಹರ್ಷಣ ಗಂ. 26-13 ಕರಣ: ಬಾಲವ ಗಂ. 16-39, ಮಿಥುನ ಮಾಸದ 22 ನೇ ದಿನ, ಮಳೆನಕ್ಷತ್ರ: ಪುನರ್ವಸು 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 30 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 1

ಮೇಷ: ಮನೆಯಿಂದ ಹೊರಗೆ ಕೃತಕ ಸಂತೋಷ ಹುಡುಕುವ ಬದಲು ಮನೆಯವರೊಂದಿಗೇ ಖುಷಿಯಾಗಿ ಇರಲು ಪ್ರಯತ್ನಿಸಿ. ಈ ದಿನ ಆರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳಲಿವೆ.

ವೃಷಭ: ನೂತನ ಮನೆ ನಿರ್ಮಾಣ ಅಥವಾ ನಿವೇಶನ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ನಿಮ್ಮ ಪ್ರವಾಸದ ಕನಸು ನನಸಾಗುವಂತಹ ಲಕ್ಷಣಗಳು ಇವೆ.

ಮಿಥುನ: ವ್ಯವಹಾರದಲ್ಲಿ ಎದುರಾಗಿರುವ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಉತ್ತಮ. ನಿಜವೆಂದು ತೋರುವ ಕೆಲವು ವಿಷಯಗಳು ಪರಾಮರ್ಶೆಯ ನಂತರ ಹುಸಿ ಎಂದು ಅರಿವಾಗುವುದು.

ಕರ್ಕಾಟಕ: ಉತ್ತಮ ಕಾರ್ಯಕ್ಷೇತ್ರಕ್ಕೆ ಪ್ರವೇಶಿಸಿದ ನಿಮ್ಮನ್ನು ಹಿತೈಷಿಗಳು ಶ್ಲಾಘಿಸುತ್ತಾರೆ. ವೃತ್ತಿ ಜೀವನದಲ್ಲಿ ನಿಮಗೆ ಅನುಭವವೇ ಇರದ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಪರಿಹರಿಸುವಿರಿ.

ಸಿಂಹ: ಸಮಸ್ಯೆಗಳಿಗೆ ಹಂತಹಂತವಾಗಿ ಪರಿಹಾರ ದೊರಕಲಿದೆ. ಸ್ನೇಹಿತನಿಂದಾಗಿ ನಡೆದ ಒಂದು ಘಟನೆಯು ನಿಮ್ಮ ಮನಸ್ಸಿನಲ್ಲಿ ಮಹತ್ತರವಾದ ಬದಲಾವಣೆಯನ್ನು ಉಂಟುಮಾಡುತ್ತದೆ.

ಕನ್ಯಾ: ವ್ಯವಹಾರದ ವೇಳೆ ಪ್ರದರ್ಶಿಸಿದ ಬುದ್ಧಿವಂತಿಕೆಯು ಮುಂದೆ ಹೆಚ್ಚಿನ ಲಾಭ ತರಲಿದೆ. ಮಾನಸಿಕವಾಗಿ ನಿಮ್ಮನ್ನು ಕಾಡುತ್ತಿರುವ ಚಿಂತೆಗೆ ಮಗನಿಂದ ಉತ್ತಮ ಪರಿಹಾರ ದೊರಕಲಿದೆ.

ತುಲಾ: ಮಕ್ಕಳ ವಿಚಾರದಲ್ಲಿನ ಸಮಸ್ಯೆಗಳು ಶೀಘ್ರ ಪರಿಹಾರವಾಗುವ ಲಕ್ಷಣಗಳು ತೋರಿಬರುತ್ತವೆ. ತಾತ್ಕಾಲಿಕ ಕೆಲಸಗಾರರಿಗೆ ಹುದ್ದೆ ಕಾಯಂ ಆಗುವ ಸಾಧ್ಯತೆ ಇದೆ. ಹಂತ ಹಂತವಾಗಿ ಪ್ರಗತಿ ಪ್ರಾಪ್ತಿಯಾಗಲಿದೆ.

ವೃಶ್ಚಿಕ: ವಿದ್ಯಾರ್ಥಿಗಳು ಈವರೆಗೆ ನಿತ್ಯದ ಕೆಲಸದಲ್ಲಿ ತೋರಿದ ನಿರ್ಲಕ್ಷ್ಯದಿಂದಾಗಿ ಮನರಂಜನೆಗಳನ್ನೆಲ್ಲವನ್ನು ಬದಿಗಿಟ್ಟು ಅಧ್ಯಯನದಲ್ಲಿ ತೊಡಗಬೇಕಾಗುತ್ತದೆ. ಯಾರ ಮೇಲೂ ಅಗತ್ಯಕ್ಕಿಂತ ಹೆಚ್ಚಿನ ಕೋಪ ಬೇಡ.

ಧನು: ಕ್ರೀಡಾಪಟುಗಳು ಕ್ರೀಡೆಯಲ್ಲಿ ಉತ್ತಮ ಸಾಧನೆಯಿಂದ ಬಹುಮಾನದ ಜೊತೆಗೆ ಗೌರವ ಸಂಪಾದಿಸುವಿರಿ. ವ್ಯಾವಹಾರಿಕವಾಗಿ ಇರುವ ಹಳೆಯ ಬಾಕಿ ಹಣ ನಿಮ್ಮ ಕೈ ಸೇರಲಿದೆ. ಹೆಚ್ಚಿನ ತಾಳ್ಮೆ ಅಗತ್ಯ.

ಮಕರ: ಸಮಯೋಚಿತ ಕಾರ್ಯ ನೆಡೆಸುವಾಗ ಆಲಸ್ಯ ಕಾಡಲಿದೆ ಹಾಗೂ ಭಿನ್ನಾಭಿಪ್ರಾಯಗಳಿಂದ ಇತರರೊಂದಿಗೆ ವಾದ-ವಿವಾದಗಳು ಉಂಟಾಗುವ ಸಾಧ್ಯತೆ ಇದೆ. ವ್ಯವಹಾರವು ಲಾಭದ ಪಥದಲ್ಲಿರಲಿದೆ.

ಕುಂಭ: ಬಂಧು ಮಿತ್ರರ ಸಲಹೆಗಳಿಗೆ ಗಮನ ನೀಡಿದ್ದರಿಂದಾಗಿ ಹೆಚ್ಚಿನ ಲಾಭವಾಗಲಿದೆ. ಸಾಂಸಾರಿಕ ವಿಷಯಗಳತ್ತ ಹೆಚ್ಚು ಗಮನಹರಿಸಿ. ಸಂತಸದ ವಿಚಾರವನ್ನು ಎಲ್ಲರಿಗೂ ತಿಳಿಸುವಿರಿ.

ಮೀನ: ಮುತುವರ್ಜಿ ವಹಿಸಿ ಮಾಡಿದ ಕೆಲಸವು ಸಣ್ಣ ಮಕ್ಕಳಿಂದಾಗಿ ಹಾಳಾಗುವುದು. ನಿಮ್ಮ ಮುಕ್ತ ಮನೋಭಾವದಿಂದಾಗಿ ಹಲವಾರು ಗುಪ್ತ ವಿಷಯಗಳು ಇತರರ ಮುಂದೆ ಬಹಿರಂಗಗೊಳ್ಳಲಿದೆ.

ಪದಬಂಧ 5734

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಗಡೆಯ ಆಟದ ದಾಳ (2)
3.ಕೆಡುಕಾಗಲೆಂದು ಬಯಸಿ ಹೇಳಿದ ಮಾತು (2)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಸಸ್ಯಗಳ ಅವಶೇಷ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ರಾಜಿಗೊಂದು ಪರ್ಯಾಯ ಪದ (3)
10.ಕಡಿದಾದ ಕೊರಕಲು (3)
13.ಉದಾಹರಣೆಯಿಂದ ಕೂಡಿದುದು (5)
14.ಶ್ರದ್ಧೆಗೊಂದು ಪರ್ಯಾಯ ಪದ (2)
15.ಮೊಣಕಾಲಿನಿಂದ ಪಾದದವರೆಗಿನ ಭಾಗ (2)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
2.ತನ್ನ ರಕ್ಷಣೆ ಅಥವಾ ಇತರರನ್ನು ಹೊಡೆಯಲು ಬಳಸುವ ಸಾಧನ (3)
4.ಸೋಲು ಹೀಗೆ ಬಂದಿದೆ (4)
5.ಅಂತ್ಯ ಅಥವಾ ಕೊನೆ (5)
7.ಈತ ಅಡುಗೆಯಲ್ಲಿ ನುರಿತವನು (5)
9.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
11.ತಡವಾಗಿ ಕಾಣಿಸಿದ ಜಲಪಾತ (4)
12.ಈತ ಅಪಹಾಸ್ಯ ಮಾಡುವವನು (3)



5733ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿರಂಕುಶ 3.ಆಲಸಿಗ
5.ಬರಲು 6.ಹಳವಂಡ
7.ವರಮಾನತೆರಿಗೆ 10.ಅವಧಾನಿ
11.ಸಂಗಾತಿ 14.ಗರ್ಭಕೋಶ
15.ಅಂಗರಾಗ

ಮೇಲಿಂದ ಕೆಳಕ್ಕೆ:
1.ನಿಧಿ 2.ಕುವರ
4.ಗರುಡ 5.ಬಡವ
6.ಹಣತೆ 8.ಮಾನಿನಿ
9.ಗೆಳತಿ 10.ಅಪಾಂಗ
12.ಗಾಣಿಗ 13.ಲಂಗ

ಸುಡೊಕು 6119

4						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6118 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡ್ರಗ್ಸ್, ಬೆಟ್ಟಿಂಗ್, ಇಸ್ಪೀಟ್ ದಂಧೆ ತಡೆಯಲು ಏಕೆ ಆಗುತ್ತಿಲ್ಲ? ಅಧಿಕಾರಿಗಳ ಸಮಾವೇಶದಲ್ಲಿ ಸಿ.ಎಂ ಸಿದ್ದರಾಮಯ್ಯ ಪ್ರಶ್ನೆ

‘ಪೊಲೀಸರೇ ನಿಮಗೆ ಬಂದೂಕು ಕೊಟ್ಟಿರುವುದೇಕೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿಗಳಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ. ಡ್ರಗ್ಸ್, ಬೆಟ್ಟಿಂಗ್, ಇಸ್ಪೀಟ್ ದಂಧೆ ತಡೆಯಲು ಏಕೆ ಆಗುತ್ತಿಲ್ಲ? ನಿಮಗೆ ಬಂದೂಕು ಕೊಟ್ಟಿರುವುದೇಕೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಅಧಿಕಾರಿಗಳನ್ನು ನಿಷ್ಠುರವಾಗಿಯೇ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ನಡೆದ ಪೊಲೀಸ್ ಅಧಿಕಾರಿಗಳ ಸಮಾವೇಶ ಉದ್ಘಾಟಿಸಿ, ನೂತನ ತಂತ್ರಾಂಶಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು. ‘ರಿಯಲ್ ಎಸ್ಟೇಟ್ ನಡೆಸುವವರ ಜತೆಗೆ ಪೊಲೀಸರು ಶಾಮೀಲಾಗಿರುವುದು ಗೊತ್ತಾದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಐಜಿ, ನಗರ ಪೊಲೀಸ್ ಕಮಿಷನರ್‌ಗಳು, ಎಸ್‌ಪಿಗಳು ಪ್ರತಿದಿನ ಒಂದು ಪೊಲೀಸ್ ಠಾಣೆಗೆ ಭೇಟಿ ನೀಡಬೇಕು. ಸ್ಥಳೀಯರನ್ನು ಭೇಟಿ ಮಾಡಿ ಅವರ ಸಮಸ್ಯೆ ಆಲಿಸಿ, ಪರಿಹಾರ ಕಲ್ಪಿಸಬೇಕು’ ಎಂದು ನಿರ್ದೇಶಿಸಿದರು.

‘ಮಾದಕ ವಸ್ತು, ಕಳ್ಳತನ, ದರೋಡೆ, ಜೂಜು, ಮಟ್ಕಾ ದಂಧೆಗಳ ಮಾಹಿತಿ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಇರುತ್ತದೆ. ಕೆಲವೆಡೆ ದಂಧೆಕೋರರ ಜತೆಗೆ ಪೊಲೀಸರು ಶಾಮೀಲಾಗಿರುತ್ತಾರೆ. ಪೊಲೀಸರು ಮನಸ್ಸು ಮಾಡಿದರೆ ಬಹುತೇಕ ಅಪರಾಧಗಳನ್ನು ನಿಯಂತ್ರಿಸಬಹುದು. ಆದ್ದರಿಂದ, ಹಿರಿಯ ಪೊಲೀಸ್ ಅಧಿಕಾರಿಗಳು ತಿಂಗಳಲ್ಲಿ ಮೂರು ಠಾಣೆಗಳಿಗೆ ಭೇಟಿ ನೀಡಿ ಜನಸಂಪರ್ಕ ಸಭೆ ನಡೆಸಬೇಕು’ ಎಂದು ಸೂಚಿಸಿದರು.

ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಡ್ರಗ್ಸ್ ದಂಧೆ ಹೆಚ್ಚುತ್ತಿದೆ. ಮಕ್ಕಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಈ ವ್ಯವಹಾರದಲ್ಲಿ ಭಾಗಿಯಾಗಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದರು.

‘ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ಬಳಸಿಕೊಂಡು ಸ್ವಯಂ ಪ್ರೇರಿತ ದೂರು ಹೆಚ್ಚು ದಾಖಲಿಸಿಕೊಳ್ಳಬೇಕು. ಕೆಲವು ಪೊಲೀಸರಿಗೆ ಇ-ಬೀಟ್ ವ್ಯವಸ್ಥೆ ಜಾರಿಯಲ್ಲಿರುವುದೇ ಗೊತ್ತಿಲ್ಲ? ಜನಸಂದಣಿ ಪ್ರದೇಶಗಳಲ್ಲಿ ಇ-ಬೀಟ್ ಹೆಚ್ಚಿಸಬೇಕು. ಪೊಲೀಸರ ಹಾಜರಿ ಸಮವಸ್ತ್ರದಲ್ಲಿಯೇ ಇರಬೇಕು. ಆಗ ಅಪರಾಧ ಕೃತ್ಯ ನಿಯಂತ್ರಿಸಲು ಸಾಧ್ಯವಾಗಲಿದೆ’ ಎಂದು ಸೂಚಿಸಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಭಾಗವಹಿಸಿದ್ದರು.

ಪೊಲೀಸ್ ಅಧಿಕಾರಿಗಳ ಸಮಾವೇಶದಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಹಿತಿ ನೀಡಿದರು. ಸಭೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಗೃಹ ಸಚಿವ ಜಿ. ಪರಮೇಶ್ವರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ತಂತ್ರಾಂಶ, ಕೈಪಿಡಿಗಳ ಬಿಡುಗಡೆ
- ಸಂಚಯ– ಹೊಸ ಕ್ರಿಮಿನಲ್ ಕಾನೂನುಗಳ ಡಿಜಿಟಲ್ ತಂತ್ರಾಂಶ, ಆ್ಯಪ್ ಬಿಡುಗಡೆ

ಒಂದು ವರ್ಷದಲ್ಲಿ ರಾಜ್ಯದಲ್ಲಿ ಕೋಮುಗಲಭೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ ಗೃಹ ಸಚಿವರಿಗೆ ಹಾಗೂ ಕರ್ನಾಟಕ ಪೊಲೀಸರಿಗೆ ಅಭಿನಂದನೆಗಳು.

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ನಮ್ಮ ಪೊಲೀಸರು ಸಮರ್ಥರಿದ್ದಾರೆ’

‘ವಿರೋಧ ಪಕ್ಷದವರು ಎಲ್ಲ ಪ್ರಕರಣಗಳನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸುತ್ತಾರೆ. ಆದರೆ, ಅವರು ಅಧಿಕಾರದಲ್ಲಿದ್ದಾಗ ಸಿಬಿಐಗೆ ಚೋರ್ ಬಚಾವೋ ಸಂಸ್ಥೆ ಎನ್ನುತ್ತಿದ್ದರು. ಸಿಬಿಐ ಮತ್ತು ಸಿಐಡಿ ಎರಡು ತನಿಖಾ ಸಂಸ್ಥೆಗಳಲ್ಲಿ ನಮ್ಮ ಪೊಲೀಸರೇ ಇದ್ದಾರೆ. ರಾಜ್ಯ ಪೊಲೀಸರು ಕೂಡ ತನಿಖೆ ಮಾಡಲು ಸಮರ್ಥರಿದ್ದಾರೆ’ ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

‘ಸಮನ್ವಯದ ಕೊರತೆ’

‘ಗುಪ್ತಚರ ವಿಭಾಗ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪೊಲೀಸರ ನಡುವೆ ಸಮನ್ವಯದ ಕೊರತೆಯಿದೆ. ಗುಪ್ತಚರ ವಿಭಾಗದ ನಿರ್ಲಕ್ಷ್ಯದಿಂದ ಹುಬ್ಬಳ್ಳಿಯಲ್ಲಿ ಕೊಲೆ ಕೃತ್ಯಗಳು ನಡೆದಿವೆ. ಮುಂಜಾಗ್ರತೆ ವಹಿಸಿದ್ದರೆ ಈ ಪ್ರಕರಣಗಳನ್ನು ತಪ್ಪಿಸಬಹುದಿತ್ತು’ ಎಂದು ಸಿದ್ದರಾಮಯ್ಯ ಹೇಳಿದರು.

‘ನ್ಯಾಯ ನೀಡಿಕೆಯಲ್ಲಿ ರಾಜ್ಯದ ಪೊಲೀಸರು ಪ್ರಥಮ’

ದೇಶದ ಪ್ರತಿಷ್ಠಿತ ಇಂಡಿಯಾ ಜಸ್ಟೀಸ್ ರಿಪೋರ್ಟ್ ನಡೆಸಿದ ಸಮೀಕ್ಷೆ ಮತ್ತು ವರದಿಯಲ್ಲಿ ಕರ್ನಾಟಕ ಪೊಲೀಸ್ ದೇಶದಲ್ಲಿ ನ್ಯಾಯ ನೀಡುವುದರಲ್ಲಿ ಪ್ರಥಮ ಸ್ಥಾನ ಪಡೆದಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಒಟ್ಟು 10 ಅಂಕಗಳನ್ನು ಇಟ್ಟುಕೊಂಡು ನಡೆಸಿದ ಸಮೀಕ್ಷೆಯಲ್ಲಿ ಕರ್ನಾಟಕ ಪೊಲೀಸರಿಗೆ 6.38 ಅಂಕಗಳು ದೊರೆತಿವೆ. ಇದೇ ಗುಣಮಟ್ಟವನ್ನು ಮುಂದುವರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಿಖಿಲ್ ಕುಮಾರಸ್ವಾಮಿಗೆ ಜೆಡಿಎಸ್ ರಾಜ್ಯ ಅಧ್ಯಕ್ಷ ಪಟ್ಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಹಿರಿಯ–ಕಿರಿಯ ಮುಖಂಡರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಶನಿವಾರ ನಡೆದ ಜೆಡಿಎಸ್ ಪ್ರಮುಖ ನಾಯಕರ ಸಭೆಯು ನಿಖಿಲ್ ಕುಮಾರಸ್ವಾಮಿಗೆ ಸೂಚಿಸುವ ಮೂಲಕ ಅಧ್ಯಕ್ಷ ಸ್ಥಾನದ ಹೊಣೆ ನೀಡುವ ಸುಳಿವು ನೀಡಿದೆ.

ಸಭೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಕೇಂದ್ರದ ಭಾರಿ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಸಾಮೂಹಿಕ ಜವಾಬ್ದಾರಿ ಮೂಲಕ ಸಂಘಟನೆಗೆ ಹೆಚ್ಚು ಶಕ್ತಿ ತುಂಬಲು ನಿರ್ಧಾರಿಸಲಾಗಿದೆ. ನಿಖಿಲ್ ಕುಮಾರಸ್ವಾಮಿ ಅವರು ಸಂಘಟನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಕೊಳ್ಳಬೇಕು ಎಂದು ಪ್ರಮುಖರ ಸಮಿತಿ ಹಾಗೂ ಶಾಸಕರು ಸಲಹೆ ನೀಡಿದ್ದಾರೆ. ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ನಿಖಿಲ್ ಅವರೆಲ್ಲರ ಜೊತೆ ವಿಶ್ವಾಸದಿಂದ ಇರುತ್ತಾರೆ. ಸಂಘಟನೆಯಲ್ಲಿ ಹೆಚ್ಚು ತೊಡಗಿಕೊಳ್ಳುತ್ತಾರೆ ಎಂದು ಹೇಳಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಅಧಿಕಾರವನ್ನು ಪಕ್ಷದ ಶಾಸಕರು ತಮಗೆ ನೀಡಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಎಚ್‌.ಡಿ. ದೇವೇಗೌಡರ ಜತೆ ಚರ್ಚಿಸಿ, ಅಧಿವೇಶನದ ಒಳಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಪಕ್ಷವನ್ನು ತಳಮಟ್ಟದಿಂದ ಮರು ಸಂಘಟನೆ ಮಾಡುವುದು, ದೊಡ್ಡ ಪ್ರಮಾಣದಲ್ಲಿ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳುವುದು. ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸಲು ನಿರ್ಧರಿಸಲಾಗಿದೆ. ಸದಸ್ಯತ್ವ ಅಭಿಯಾನಕ್ಕೆ 31 ಜಿಲ್ಲೆಗಳಲ್ಲೂ ವಿಧಾನಸಭಾವಾರು ಉಸ್ತುವಾರಿ ನೇಮಿಸಲಾಗುವುದು. ಪಕ್ಷವನ್ನು ತಳಮಟ್ಟದಿಂದ ಪುನರ್ ಸಂಘಟಿಸಲಾಗುವುದು. ಅಧಿವೇಶನದಲ್ಲಿ ಮಿತ್ರಪಕ್ಷ ಬಿಜೆಪಿ ಜತೆ ಸೇರಿ ಜನಪರ ಹೋರಾಟ ರೂಪಿಸುವುದು ಸೇರಿದಂತೆ ಹಲವಾರು ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು ಎಂದು ಹೇಳಿದರು.

ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ಸಾ.ರಾ. ಮಹೇಶ್, ವೆಂಕಟರಾವ್ ನಾಡಗೌಡ, ಯುವ ಜನತಾದಳ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಂಸದ ಮಲ್ಲೇಶ್ ಬಾಬು, ವಿಧಾನ ಪರಿಷತ್ ಸದಸ್ಯರಾದ ಕೆ.ಎ. ತಿಪ್ಪೇಸ್ವಾಮಿ, ಶಾಸಕಾಂಗ ಪಕ್ಷದ ಉಪ ನಾಯಕಿ ಶಾರದಾ ಪೂರ್‍ಯಾನಾಯ್ಕ ಮತ್ತಿತರರು ಭಾಗವಹಿಸಿದ್ದರು.

ಎಂಟು ಐಎಎಸ್ ಅಧಿಕಾರಿಗಳ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಇಲಾಖೆ ಆದೇಶ ಹೊರಡಿಸಿದೆ.

ವರ್ಗವಾದವರು: ಯಶವಂತ್ ವಿ ಗುರುಕರ್–ಜಿಲ್ಲಾಧಿಕಾರಿ, ರಾಮನಗರ, ಹರೀಶ್‌ಕುಮಾರ್ ಕೆ–ವಿಶೇಷ ಆಯುಕ್ತ (ಘನ ತ್ಯಾಜ್ಯ ನಿರ್ವಹಣೆ), ಬಿಬಿಎಂಪಿ. ಅರ್ಚನಾ ಎಂ.ಎಸ್.–ನಿರ್ದೇಶಕಿ(ಭದ್ರತೆ ಮತ್ತು ಜಾಗೃತ ದಳ), ಬಿಎಂಟಿಸಿ. ಅವಿನಾಶ್ ಮೆನನ್ ರಾಜೇಂದ್ರನ್–ವಿಶೇಷ ಆಯುಕ್ತ, ಬಿಬಿಎಂಪಿ. ಮೊಹಮದ್ ಇಕ್ರಮುಲ್ಲಾ ಷರೀಫ್–ಉಪ ಕಾರ್ಯದರ್ಶಿ (ಬಜೆಟ್ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ.

ವರ್ಣಿತ್ ನೇಗಿ–ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ. ಮೋನಾ ರೋತ್–ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಚಾಮರಾಜನಗರ ಜಿಲ್ಲಾ ಪಂಚಾಯಿತಿ. ಆನಂದ ಪ್ರಕಾಶ್ ಮೀನಾ– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೊಡಗು ಜಿಲ್ಲಾ ಪಂಚಾಯಿತಿ.

ಜಲಾಶಯ ದುರಸ್ತಿಗಾಗಿ ಕೆಎನ್‌ಎನ್‌ಗೆ ಕೇಂದ್ರದ ತಜ್ಞರಿಂದಲೂ ತಾಂತ್ರಿಕ ನೆರವು: ಇಂದು ದುರಸ್ತಿ ಪೂರ್ಣಗೊಳ್ಳುವ ವಿಶ್ವಾಸ

ಭದ್ರಾ: ಸೋರಿಕೆ ತಡೆಗೆ ನೀರಿನಡಿ ಕಾರ್ಯಾಚರಣೆ

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ಲಕ್ಕವಳ್ಳಿಯ ಭದ್ರಾ ಜಲಾಶಯದಲ್ಲಿನ ನದಿಮಟ್ಟದ ಸ್ಲುಸ್ ಗೇಟ್‌ನಲ್ಲಿ ಆಗುತ್ತಿರುವ ನೀರಿನ ಸೋರಿಕೆ ತಡೆಯಲು ಕರ್ನಾಟಕ ನೀರಾವರಿ ನಿಗಮವು ನೀರಿನ ಆಳದಲ್ಲಿ ಕಾರ್ಯಾಚರಣೆ ಆರಂಭಿಸಿದೆ.

ಈ ಕಾರ್ಯಕ್ಕೆ ಕೇಂದ್ರದ ಜಲಸಂಪನ್ಮೂಲ ಇಲಾಖೆ ಅಧೀನದ ಡ್ಯಾಂ ಸೇಫ್ಟಿ ರಿವ್ಯೂ ಪ್ಯಾನಲ್ (ಡಿಎಸ್‌ಆರ್‌ಪಿ) ಹಾಗೂ ಡ್ಯಾಂ ಸೇಫ್ಟಿ ಆರ್ಗನೈಸೇಷನ್‌ನ (ಡಿಎಸ್‌ಒ) ತಜ್ಞರು ಕೈಜೋಡಿಸಿದ್ದಾರೆ.

3 ತಿಂಗಳ ಹಿಂದೆಯೇ ತೊಂದರೆ: ಜಲಾಶಯದಲ್ಲಿರುವ ನದಿ ಮಟ್ಟದ ಸ್ಲುಸ್ ಗೇಟ್ ಜಾಮ್ ಆಗಿರುವುದೇ ನೀರು ಸೋರಿಕೆಗೆ ಕಾರಣ ಎಂದು ತಿಳಿದುಬಂದಿದೆ.

ಬರಗಾಲದ ಕಾರಣ ಭದ್ರಾ ಜಲಾಶಯದ ಇತಿಹಾಸದಲ್ಲಿಯೇ ಈ ಬಾರಿ ಅತ್ಯಂತ ಕಡಿಮೆ ನೀರು ಸಂಗ್ರಹವಾಗಿತ್ತು. ದಾವಣಗೆರೆ, ಹಾವೇರಿ, ಗದಗ, ವಿಜಯನಗರ, ಕೊಪ್ಪಳ ಜಿಲ್ಲೆಗಳ ನದಿ ಪಾತ್ರದ ಜನರಿಗೆ ಕುಡಿಯುವ ನೀರು ಪೂರೈಸಲು ಸರ್ಕಾರದ ಆದೇಶದಂತೆ ಏಪ್ರಿಲ್ 5ರಂದು ಜಲಾಶಯದಿಂದ ತುಂಗಭದ್ರಾ ನದಿಗೆ 2 ಟಿಎಂಸಿ ಅಡಿ ನೀರು ಹರಿಸಲಾಗಿತ್ತು.

ಆಗ ನೀರು ಜಲಾಶಯದ ಕ್ರಸ್ಟ್‌ಗೇಟ್‌ಗಿಂತ ಕೆಳಗೆ ಇದ್ದುದರಿಂದ ನದಿ ಮಟ್ಟದಲ್ಲಿನ ಸ್ಲುಸ್ ಗೇಟ್ ತೆರೆಯಲಾಗಿತ್ತು. 15 ವರ್ಷಗಳ ನಂತರ ಗೇಟ್ ತೆರೆದ ಕಾರಣ ಗೇಟ್ ತೆರೆಯುವಾಗ ಹಾನಿಗೀಡಾಗಿದೆ. ಅದನ್ನು ದುರಸ್ತಿಪಡಿಸಿ ಮುಚ್ಚಲು ಮುಂದಾಗುವ ಹೊತ್ತಿಗೆ ಜಲಾಶಯದಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ನೀರಿನ ಒತ್ತಡದಿಂದ ಗೇಟ್ ಸ್ಲಗ್‌ಗೆ ಕೂರದೇ ಜಾಮ್ ಆಗಿ ಸೋರಿಕೆ ಶುರುವಾಗಿದೆ ಎಂದು ಮೂಲಗಳು ತಿಳಿಸಿವೆ.

ಸಮರೋಪಾದಿಯಲ್ಲಿ ಕಾರ್ಯ: ‘ಗೇಟ್ ಜಾಮ್ ಆಗಿದೆ ಅಷ್ಟೇ. ಕಿತ್ತು ಹೋಗಿದ್ದರೆ ಜಲಾಶಯ ಸಂಪೂರ್ಣ ಖಾಲಿ ಆಗಿರುತ್ತಿತ್ತು. ನೀರು ಸೋರಿಕೆ ಆಗಿ ನದಿಗೆ ಹರಿದಿರುವುದು 0.34 ಟಿಎಂಸಿ ಅಡಿ (1,000 ಕ್ಯುಸೆಕ್‌ನಷ್ಟು) ಮಾತ್ರ. ಗೇಟ್ ಬಹಳ ವರ್ಷ ತೆರೆಯದೇ ಇದ್ದ ಕಾರಣ ಕ್ಯಾಲ್ಸಿನೇಶನ್ ಆಗಿ ಈ ಸಮಸ್ಯೆ ತಲೆದೋರಿದೆ. ದುರಸ್ತಿ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಂಡಿದ್ದೇವೆ’ ಎಂದು ಭದ್ರಾ ಜಲಾಶಯ ನಿರ್ವಹಣಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎನ್.ರವಿಕುಮಾರ್ ಹೇಳಿದರು.

‘ಮೂರು ದಿನಗಳ ಸತತ ಪ್ರಯತ್ನದ ಫಲವಾಗಿ ನೀರಿನ ಸೋರಿಕೆ ಪ್ರಮಾಣ ಶನಿವಾರದ ಹೊತ್ತಿಗೆ ಶೇ 60ರಷ್ಟು ಕಡಿಮೆ ಆಗಿದೆ. ಭಾನುವಾರದ ವೇಳೆಗೆ ಸಂಪೂರ್ಣ ನಿಲುಗಡೆ ಆಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಲಕ್ಕವಳ್ಳಿಯ ಭದ್ರಾ ಜಲಾಶಯದ ಸ್ಲುಸ್ ಗೇಟ್‌ನ ದುರಸ್ತಿ ಕಾರ್ಯ ಶನಿವಾರ ಭರದಿಂದ ನಡೆದಿತ್ತು

ಜಲಾಶಯ ಅಪಾಯದಿಂದ ಪಾರಾಗಿದೆ. ಗೇಟ್‌ನ ಶಾಶ್ವತ ದುರಸ್ತಿ ಕಾರ್ಯ ಆಗುತ್ತಿದೆ. ಅಪಪ್ರಚಾರ, ಊಹಾಪೋಹಗಳಿಗೆ ಕಿವಿಗೊಡಬೇಡಿ

ಎನ್.ರವಿಕುಮಾರ್, ಕಾರ್ಯನಿರ್ವಾಹಕ ಎಂಜಿನಿಯರ್, ಭದ್ರಾ ಜಲಾಶಯ ವಿಭಾಗ, ಲಕ್ಕವಳ್ಳಿ

ಆಕ್ಸಿಜನ್ ಮಾಸ್ಕ್ ಧರಿಸಿ ದುರಸ್ತಿ ಕಾರ್ಯ

ಜಲಾಶಯದಲ್ಲಿ ಸದ್ಯ 130 ಅಡಿ ನೀರಿನ ಸಂಗ್ರಹ ಇದೆ. ಗೇಟ್ 45 ಅಡಿ ಎತ್ತರದಲ್ಲಿದೆ. ಹೀಗಾಗಿ 85 ಅಡಿ ಆಳದ ನೀರಿನಲ್ಲಿ ಆಕ್ಸಿಜನ್ ಮಾಸ್ಕ್ ಧರಿಸಿ ತಜ್ಞರು ಗೇಟ್‌ನ ದುರಸ್ತಿ ಕಾರ್ಯ ಕೈಗೊಂಡಿದ್ದಾರೆ. ಆರು ಮಂದಿ ಮುಳುಗು ತಜ್ಞರು ಸೇರಿದಂತೆ ಕೊಡಗಿನಿಂದ ಬಂದಿರುವ 20 ಮಂದಿ ತಂತ್ರಜ್ಞರು ಈ ಕಾರ್ಯದಲ್ಲಿ ತೊಡಗಿದ್ದಾರೆ.

‘ಹೈದರಾಬಾದ್‌ನಲ್ಲಿರುವ ಡಿಎಸ್‌ಆರ್‌ಪಿಯ ಗೇಟ್ ತಂತ್ರಜ್ಞರೊಬ್ಬರು ಆನ್‌ಲೈನ್ ಮೂಲಕವೇ ದುರಸ್ತಿ ಕಾರ್ಯಕ್ಕೆ ಕೆಎನ್‌ಎನ್‌ಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಡಿಎಸ್‌ಒ ಅಧಿಕಾರಿಗಳು ಬೆಂಗಳೂರಿನಿಂದ ಸಲಹೆ ಸೂಚನೆ ನೀಡುತ್ತಿದ್ದಾರೆ. ಕೆಎನ್‌ಎನ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ ಅಮ್ಮಿನಬಾವಿ ಕಾರ್ಯಾಚರಣೆಯ ಸಮನ್ವಯ ನಡೆಸುತ್ತಿದ್ದಾರೆ’ ಎಂದು ಎನ್.ರವಿಕುಮಾರ್ ತಿಳಿಸಿದರು.

ಮುಕ್ಕಾಲು ಅಡಿ ಬಾಕಿ:

‘ಸ್ಲುಸ್ ಗೇಟ್ ಒಳಗೆ 1.5 ಅಡಿ ಮಾತ್ರ ಜಾಗ ಇದೆ. ಇಬ್ಬರು ಮಾತ್ರ ನಿಂತು ಕೆಲಸ ಮಾಡಬಹುದಾಗಿದೆ. ಹೊರ ಭಾಗದಲ್ಲೂ ಗೇಟನ್ನು ವೆಲ್ಡಿಂಗ್ ಮಾಡಿ ಸೀಲ್ ಮಾಡಬೇಕಿದೆ. ಗೇಟ್ ಒಳಗೆ ನೀರಿನ ಒತ್ತಡ, ಹೊರಗೆ ನಿರಂತರ ಮಳೆ ಸುರಿಯುತ್ತಿರುವುದು ದುರಸ್ತಿ ಕಾರ್ಯಕ್ಕೆ ಸವಾಲಾಗಿದೆ. ಸ್ಲಗ್‌ನಿಂದ ಗೇಟ್ 10 ಅಡಿ ಹೊರಗೆ ಬಂದಿತ್ತು. ಕಳೆದ ಮೂರು ದಿನಗಳ ಸತತ ಪ್ರಯತ್ನದಿಂದ 9.25 ಅಡಿಯಷ್ಟು ಒಳಗೆ ಕೂರಿಸಿ ಮುಚ್ಚಲಾಗಿದೆ. ಇನ್ನು ಮುಕ್ಕಾಲು ಅಡಿ ಮಾತ್ರ ಬಾಕಿ ಉಳಿದಿದೆ’ ಎಂದು ಮಾಹಿತಿ ನೀಡಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹222-437
ದ್ವಿತಳಿ (ಬಿ.ವಿ) ₹318-580

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹203
ಆರ್‌ಎಸ್‌ಎಸ್-5 ₹195.50
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹182.50

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ತೆರಿಗೆ ರಿಟರ್ನ್ಸ್: ಜುಲೈ 31 ಕೊನೆ ದಿನ

• ಪ್ರಮೋದ ಶ್ರೀಕಾಂತ ದೈತೋಟ

ಪ್ರತಿ ವರ್ಷವೂ ಜುಲೈ ತಿಂಗಳು ಬಂದ ತಕ್ಷಣವೇ ವೈಯಕ್ತಿಕ ತೆರಿಗೆದಾರರಿಗೆ ತಮ್ಮ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಯ ಗಡುವು ಬಂದಿದೆ ಎಂದರ್ಥ. ಈ ಬಾರಿಯೂ ಜುಲೈ 31ಕ್ಕೆ ಅಂತಹ ಗಡುವು ಸಮೀಪಿಸುತ್ತಿದೆ.

ವರ್ಷದಿಂದ ವರ್ಷಕ್ಕೆ ತೆರಿಗೆ ನಿಯಮಾವಳಿಗಳು ಬದಲಾಗುತ್ತಿವೆ. ಇದರಿಂದ ತೆರಿಗೆದಾರರಿಗೆ ಸಕಾಲದಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಸವಾಲಾಗುತ್ತಿದೆ.

ಮತ್ತೊಂದೆಡೆ ಯಾವ ಫಾರಂ ಆಯ್ಕೆ ಮಾಡಬೇಕು, ಯಾವಾಗ ರಿಟರ್ನ್ಸ್ ಸಲ್ಲಿಸಬೇಕು, ಒಂದು ವೇಳೆ ತೆರಿಗೆ ರಿಟರ್ನ್ಸ್ ಸಲ್ಲಿಸದಿದ್ದರೆ ಯಾವ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಆತಂಕವೂ ಕಾಡುವುದು ಸಹಜ.

ಯಾರ್‍ಯಾರು ಸಲ್ಲಿಸಬೇಕು?

ತೆರಿಗೆದಾರರ ವಯಸ್ಸು, ವೈಯಕ್ತಿಕ ಆದಾಯ ಹಾಗೂ ಅವರು ಆಯ್ಕೆ ಮಾಡುವ ತೆರಿಗೆ ಪದ್ಧತಿಗೆ ಅನುಗುಣವಾಗಿ ತೆರಿಗೆ ರಿಟರ್ನ್ಸ್ ಸಲ್ಲಿಸಬೇಕೇ ಅಥವಾ ಬೇಡವೇ ಎಂಬುದು ನಿರ್ಣಯವಾಗುತ್ತದೆ. ಈ ಕೆಳಗೆ ನೀಡಿರುವ ಮಿತಿ ದಾಟಿ ತೆರಿಗೆ ಆದಾಯ ಹೊಂದಿರುವವರು ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯವಾಗಿದೆ.

ತೆರಿಗೆ ಆದಾಯ ಮಿತಿ/ ವಯಸ್ಸು	ಸಾಮಾನ್ಯ ನಾಗರಿಕರು (60 ವರ್ಷಕ್ಕಿಂತ ಕಡಿಮೆ)	ಹಿರಿಯ ನಾಗರಿಕರು (60-80 ವರ್ಷ)	ಅತಿ ಹಿರಿಯ ನಾಗರಿಕರು (80 ವರ್ಷ ಮೇಲ್ಪಟ್ಟವರು)	ತೆರಿಗೆ ನಿರ್ಣಯಿಸುವಾಗ ಸಿಗುವ ಕಡಿತಗಳು
ಹಳೆಯ ತೆರಿಗೆ ಪದ್ಧತಿಯಡಿ ಸಂಪೂರ್ಣ ತೆರಿಗೆ ವಿನಾಯಿತಿಯ ಗರಿಷ್ಠ ಆದಾಯ ಮಿತಿ (ಸೆಕ್ಷನ್ 87ಎ ಇದರಡಿ ಹೇಳಲಾಗುವ ₹5 ಲಕ್ಷದ ಒಳಗಿನ ಆದಾಯ ಹೊಂದಿದವರು ₹12,500ವರೆಗೆ ರಿಟರ್ನ್ಸ್ ಸಲ್ಲಿಸಿ ತೆರಿಗೆ ವಿನಾಯಿತಿ ಪಡೆದುಕೊಳ್ಳಬೇಕು)	₹2.50 ಲಕ್ಷ	₹3 ಲಕ್ಷ	₹5 ಲಕ್ಷ	ಅಧ್ಯಾಯ 6ಎ ಅಡಿ ಹೇಳಲಾದ ಎಲ್ಲಾ ವಿನಾಯಿತಿಗಳು, ಸ್ಟ್ಯಾಂಡರ್ಡ್ ಡಿಡಕ್ಷನ್, ವೃತ್ತಿ ತೆರಿಗೆ ಇತ್ಯಾದಿ
ಹೊಸ ತೆರಿಗೆ ಪದ್ಧತಿಯಡಿ ಸಂಪೂರ್ಣ ತೆರಿಗೆ ವಿನಾಯಿತಿಯ ಗರಿಷ್ಠ ಆದಾಯ ಮಿತಿ (ಸೆಕ್ಷನ್ 87ಎ ಇದರಡಿ ಹೇಳಲಾಗುವ ₹7 ಲಕ್ಷದೊಳಗಿನ ಆದಾಯ ಹೊಂದಿದವರು ₹25,000ವರೆಗೆ ರಿಟರ್ನ್ಸ್ ಸಲ್ಲಿಸಿ ತೆರಿಗೆ ವಿನಾಯಿತಿ ಪಡೆದುಕೊಳ್ಳಬೇಕು)	ವಯೋಮಿತಿ ಪರಿಗಣಿಸದೆ ₹3 ಲಕ್ಷಕ್ಕಿಂತ ಕಡಿಮೆ ಆದಾಯ			₹50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ಇತರೆ ಸೀಮಿತ ವಿನಾಯಿತಿಗಳು

ಈ ವಹಿವಾಟಿಗೂ ಸಲ್ಲಿಕೆ ಕಡ್ಡಾಯ

ವೈಯಕ್ತಿಕ ತೆರಿಗೆದಾರರು ಆದಾಯ ಮಿತಿಯ ಪರಿಗಣನೆ ಇಲ್ಲದೆ ಯಾವುದೇ ಆರ್ಥಿಕ ವರ್ಷದಲ್ಲಿ ಈ ಕೆಳಗಿನ ಹಣಕಾಸು ವ್ಯವಹಾರ ಹೊಂದಿದ್ದ ಸಂದರ್ಭದಲ್ಲಿ ಕಡ್ಡಾಯವಾಗಿ ರಿಟರ್ನ್ಸ್ ಸಲ್ಲಿಸಬೇಕಿದೆ.

- ಚಾಲ್ತಿ ಖಾತೆಯಲ್ಲಿ ಒಟ್ಟಾರೆ ₹1 ಕೋಟಿಗೂ ಹೆಚ್ಚು ಮೊತ್ತ ಜಮೆ
- ವಾರ್ಷಿಕವಾಗಿ ₹1 ಲಕ್ಷಕ್ಕೂ ಹೆಚ್ಚು ವಿದ್ಯುತ್ ಬಿಲ್ ಪಾವತಿ
- ವಿದೇಶ ಪ್ರಯಾಣಕ್ಕೆ ಸಂಬಂಧಿಸಿ ಸ್ವಂತ ಪ್ರಯಾಣಕ್ಕೆ ಅಥವಾ ಇತರರ ಪ್ರಯಾಣಕ್ಕೆ ₹2 ಲಕ್ಷಕ್ಕಿಂತ ಹೆಚ್ಚು ವ್ಯಯಿಸಿರುವುದು
- ₹60 ಲಕ್ಷಕ್ಕೂ ಹೆಚ್ಚು ವ್ಯಾಪಾರ ವಹಿವಾಟು
- ನಿರ್ದಿಷ್ಟ ಸ್ವಉದ್ಯೋಗ ಹೊಂದಿದ್ದು 10ಕ್ಕೂ ಅಧಿಕ ವಹಿವಾಟು- ಗಳಿಕೆ ಪಡೆದವರು
- ಉಳಿತಾಯ ಖಾತೆಯಲ್ಲಿ ₹50 ಲಕ್ಷಕ್ಕೂ ಹೆಚ್ಚು ಜಮೆ
- ಆರ್ಥಿಕ ವರ್ಷದಲ್ಲಿ ₹25,000ಕ್ಕೂ (ಹಿರಿಯ ನಾಗರಿಕರಿಗೆ ₹50,000) ಹೆಚ್ಚಿನ ಮೊತ್ತದ ತೆರಿಗೆ ಕಡಿತವಾದವರು ರಿಟರ್ನ್ಸ್ ಸಲ್ಲಿಸಬೇಕು

ಸಲ್ಲಿಕೆ ಹೇಗೆ?

ತೆರಿಗೆದಾರರೇ ಇಲಾಖೆಯ ವೆಬ್‌ಸೈಟ್‌ಗೆ ಲಾಗಿನ್ ಆಗಿ ತೆರಿಗೆ ರಿಟರ್ನ್ಸ್ ಸಲ್ಲಿಸಬಹುದು.

ಇತರೆ ಮೂಲಗಳಿಂದ ಆದಾಯ ಇದ್ದಾಗ ಹಾಗೂ ಅದಕ್ಕೆ ಸಂಬಂಧಿಸಿ ಇರುವ ವಿನಾಯಿತಿ, ಅನ್ವಯವಾಗುವ ಕಾನೂನಿನ ಕೆಲವು ಕ್ಲಿಷ್ಟಕರ ಅಂಶಗಳು ಎದುರಾಗುತ್ತವೆ. ಅವುಗಳನ್ನು ಸರಿಯಾಗಿ ಅರ್ಥೈಸಿಕೊಂಡು ರಿಟರ್ನ್ಸ್ ಸಲ್ಲಿಸುವಾಗ ಕೆಲವು ಲೋಪಗಳಾಗುವ ಸಾಧ್ಯತೆ ಇರುತ್ತದೆ. ಅಂತಹ ವೇಳೆ ಪರಿಣತ ತೆರಿಗೆ ಸಲಹೆಗಾರರು ಅಥವಾ ಲೆಕ್ಕ ಪರಿಶೋಧಕರನ್ನು ಸಂಪರ್ಕಿಸಬಹುದು.

ಆದಾಯ ಮೂಲ ಮತ್ತು ಫಾರಂ ಆಯ್ಕೆ

ಐಟಿಆರ್ 1 (ಸಹಜ್)
ವಾರ್ಷಿಕ ತೆರಿಗೆ ಆದಾಯ ₹50 ಲಕ್ಷದ ಒಳಗಿರಬೇಕು. ವೇತನ, ಕುಟುಂಬದ ಪಿಂಚಣಿ ಆದಾಯ, ಆಸ್ತಿ ಆದಾಯ (ಒಂದು ಮನೆ ಹೊಂದಿದ್ದು ಹಳೆಯ ನಷ್ಟ ಬಾಕಿ ಇರಬಾರದು) ಹಾಗೂ ಇತರೆ ಆದಾಯ ಹೊಂದಿದವರಿಗೆ ಈ ಫಾರಂ ಅನ್ವಯಿಸಲಿದೆ

ಐಟಿಆರ್ 2
ವ್ಯಾಪಾರ ಹಾಗೂ ವೃತ್ತಿ ಆದಾಯ ಹೊಂದಿರದೆ ಫಾರಂ ಸಹಜ್ ಯಾರಿಗೆಲ್ಲ ಅನ್ವಯಿಸುವುದಿಲ್ಲವೋ ಅಂತಹ ತೆರಿಗೆದಾರರಿಗೆ ಈ ಫಾರಂ ಅನ್ವಯವಾಗಲಿದೆ

ಐಟಿಆರ್ 3
ಐಟಿಆರ್ 1 ಹಾಗೂ ಐಟಿಆರ್ 2 ಅನ್ವಯಿಸದೆ ವ್ಯಾಪಾರ– ವೃತ್ತಿ ಆದಾಯ ಇರುವ ತೆರಿಗೆದಾರರು ಈ ಫಾರಂ ಅಳವಡಿಸಿಕೊಳ್ಳಬಹುದು

ಐಟಿಆರ್ 4 (ಸುಗಮ್)
ವ್ಯಾಪಾರ- ವೃತ್ತಿ ಆದಾಯ ಹೊಂದಿದ್ದು ಮೇಲಿನ ವರ್ಗದಲ್ಲಿ ಒಳಪಡದ ತೆರಿಗೆದಾರರು ಆದಾಯ ತೆರಿಗೆಯ ಸೆಕ್ಷನ್ 44ಎಡಿ, 44ಎಡಿಎ ಹಾಗೂ 44ಇ ಅಡಿ ಆದಾಯ ಘೋಷಿಸುವುದಿದ್ದರೆ ಈ ಫಾರಂ ಅನ್ವಯವಾಗಲಿದೆ

ರಿಟರ್ನ್ಸ್ ಸಲ್ಲಿಸದಿದ್ದರೆ ದಂಡ ಎಷ್ಟು?

ಆಯಾ ವರ್ಷಕ್ಕೆ ಸಂಬಂಧಿಸಿದ ರಿಟರ್ನ್ಸ್‌ಗಳನ್ನು ಆದಾಯ ತೆರಿಗೆಯ ಸೆಕ್ಷನ್ 139(1)ರ ಅನ್ವಯ ಜುಲೈ 31ರೊಳಗೆ ತೆರಿಗೆ ಇಲಾಖೆಗೆ ಸಲ್ಲಿಸಬೇಕು. ಈ ಗಡುವು ಮೀರಿ ರಿಟರ್ನ್ಸ್ ಸಲ್ಲಿಸುವುದಿದ್ದರೆ ಸೆಕ್ಷನ್ 234ಎಫ್ ಅಡಿ ಉಲ್ಲೇಖಿಸಿದಂತೆ ₹5,000 ದಂಡ ಪಾವತಿಸಬೇಕಾಗುತ್ತದೆ.

ಆದರೆ, ₹5 ಲಕ್ಷಕ್ಕೂ ಕಡಿಮೆ ತೆರಿಗೆ ಆದಾಯ ಇರುವ ವ್ಯಕ್ತಿಗಳಿಗೆ ದಂಡದ ಮೊತ್ತವನ್ನು ₹1,000ಕ್ಕೆ ಸೀಮಿತಗೊಳಿಸಲಾಗಿದೆ. ಆದರೆ, ಈ ದಂಡ ಪಾವತಿಸಿ ತಮಗೆ ಬೇಕಾದ ಸಮಯಕ್ಕೆ ರಿಟರ್ನ್ಸ್ ಸಲ್ಲಿಸಲು ಅವಕಾಶ ಇರುವುದಿಲ್ಲ. ಆರ್ಥಿಕ ವರ್ಷ ಕೊನೆಗೊಂಡ ನಂತರ 9 ತಿಂಗಳೊಳಗೆ ಅಂದರೆ 2023-24ನೇ ಸಾಲಿನ ಆದಾಯಕ್ಕೆ ಸಂಬಂಧಿಸಿದ ರಿಟರ್ನ್ಸ್‌ಗಳನ್ನು ಪ್ರಸಕ್ತ ವರ್ಷದ ಡಿಸೆಂಬರ್ 31ರೊಳಗೆ ಸಲ್ಲಿಸಲು ಅವಕಾಶ ಇರುತ್ತದೆ. ಅಲ್ಲದೆ, ಸೆಕ್ಷನ್ 139(8ಎ) ಅಡಿ ಹಿಂದಿನ ವರ್ಷಕ್ಕೆ ಸಂಬಂಧಿಸಿದ ರಿಟರ್ನ್ಸ್ ಸಲ್ಲಿಸದೆ ಇದ್ದರೆ ಅಥವಾ ಸರಿಯಾಗಿ ಆದಾಯ ಘೋಷಿಸದ ಪರಿಣಾಮ ತೆರಿಗೆಯು ಕಡಿಮೆ ಪಾವತಿ ಆಗಿದ್ದರೆ ನವೀಕೃತ ರಿಟರ್ನ್ಸ್ ಸಲ್ಲಿಸಲು ಆರ್ಥಿಕ ವರ್ಷದಿಂದ ಮೂರು ವರ್ಷದ ಕಾಲ ಮಿತಿ ಇರುತ್ತದೆ. ಆದರೆ, ಇದಕ್ಕೆ ಅನ್ವಯವಾಗುವ ತೆರಿಗೆ, ಬಡ್ಡಿ ಸೇರಿ ಶೇ 25ರಿಂದ 50ರಷ್ಟು ಹೆಚ್ಚುವರಿ ದಂಡ ತೆರಬೇಕಾಗುತ್ತದೆ.

ಸಲ್ಲಿಸದಿದ್ದರೆ ಏನಾಗುತ್ತದೆ?

ಸಕಾಲದಲ್ಲಿ ರಿಟರ್ನ್ಸ್ ಸಲ್ಲಿಸದಿದ್ದರೆ ದಂಡವಲ್ಲದೆ ಇತರೆ ಕೆಲವು ತೊಡಕುಗಳು ಎದುರಾಗುತ್ತವೆ.

ಬ್ಯಾಂಕ್‌ಗಳಿಗೆ ಸಾಲ ಪಡೆಯಲು ಅರ್ಜಿ ಸಲ್ಲಿಸಿದಾಗ ಇತ್ತೀಚಿನ ಮೂರು ವರ್ಷಗಳ ಐಟಿಆರ್ ನೀಡುವಂತೆ ಕೇಳಲಾಗುತ್ತದೆ. ರಿಫಂಡ್ ಪಡೆಯುವುದಿದ್ದರೆ ರಿಟರ್ನ್ಸ್ ಸಲ್ಲಿಸದೆ ಹಿಂಪಡೆಯುವ ಅವಕಾಶ ಇರುವುದಿಲ್ಲ. ಸಮಯದ ಮಿತಿಯು ಕಳೆದ ಮೇಲೆ ರಿಟರ್ನ್ಸ್ ಸಲ್ಲಿಕೆಗೆ ಅವಕಾಶ ಇರುವುದಿಲ್ಲ. ವೈಯಕ್ತಿಕ ವ್ಯಾಪಾರ ವಹಿವಾಟಿನಲ್ಲಿ ನಷ್ಟವಾದ ಸಂದರ್ಭದಲ್ಲಿ ರಿಟರ್ನ್ಸ್ ಸಲ್ಲಿಸದೆ ನಷ್ಟವನ್ನು ಮುಂದಿನ ವರ್ಷಗಳಿಗೆ ಮುಂದೂಡುವ ಅವಕಾಶವೂ ಇರುವುದಿಲ್ಲ.

ಜಾಗರೂಕತೆ ವಹಿಸುವುದು ಅಗತ್ಯ

ನಮಗೆ ಅರಿವಿಲ್ಲದೆ ಬ್ಯಾಂಕ್ ಬಡ್ಡಿ, ಡಿವಿಡೆಂಡ್, ತೆರಿಗೆ ರಿಫಂಡ್ ಮೇಲಿನ ಬಡ್ಡಿ ಇತ್ಯಾದಿ ತೆರಿಗೆಗೊಳಪಡುವ ಆದಾಯವು ನಮ್ಮ ಬ್ಯಾಂಕ್ ಖಾತೆಗೆ ಜಮೆಯಾಗಿರುತ್ತದೆ. ಕೊನೆ ಹಂತದಲ್ಲಿ ಈ ಮಾಹಿತಿಯನ್ನು ಕ್ರೋಡೀಕರಿಸುವುದು ತ್ರಾಸದಾಯಕ. ಇದಕ್ಕಾಗಿಯೇ ಪ್ರತಿ ತೆರಿಗೆದಾರನ ಪ್ಯಾನ್ ಖಾತೆಯ ಲಾಗಿನ್‌ನಲ್ಲಿರುವ ವಾರ್ಷಿಕ ಮಾಹಿತಿಯ ರಿಟರ್ನ್ಸ್ (ಎಐಆರ್) ಹಾಗೂ 'ಫಾರಂ 26 ಎಎಸ್' ಅನ್ನು ರಿಟರ್ನ್ಸ್ ಸಲ್ಲಿಸುವ ಮೊದಲೇ ಪರಾಮರ್ಶಿಸಬೇಕು. ಅವುಗಳಲ್ಲಿ ಕಂಡುಬರುವ ಆದಾಯಕ್ಕೂ ನೀವು ಘೋಷಿಸುವ ಆದಾಯಕ್ಕೂ ವ್ಯತ್ಯಾಸ ಇಲ್ಲ ಎಂಬುದನ್ನು ಖಾತರಿಪಡಿಸಿಕೊಂಡ ಬಳಿಕವೇ ರಿಟರ್ನ್ಸ್ ಸಲ್ಲಿಸಬೇಕಿದೆ. ನಿಮ್ಮದಲ್ಲದ ಆದಾಯದ ಮಾಹಿತಿ, ಟಿಡಿಎಸ್ ಮೊತ್ತ ನಿಮ್ಮ ಖಾತೆಯಲ್ಲಿ ತಪ್ಪಾಗಿ ಜಮಾ ಆಗಿದ್ದರೆ ಅಂತಹ ಆದಾಯವನ್ನಾಗಲಿ ಅದಕ್ಕೆ ಸಂಬಂಧಿಸಿದ ಟಿಡಿಎಸ್ ಮೊತ್ತವನ್ನಾಗಲಿ ರಿಟರ್ನ್ಸ್‌ನಲ್ಲಿ ಘೋಷಿಸಬಾರದು. ಸಂಬಂಧಿತ ಜಮಾದಾರರಿಗೆ ಅಂತಹ ತಪ್ಪು ಮಾಹಿತಿ ಸರಿಪಡಿಸುವಂತೆ ಪತ್ರ ವ್ಯವಹಾರ ಅಥವಾ ಇ–ಮೇಲ್ ಮೂಲಕ ಮಾಹಿತಿ ನೀಡಬೇಕು.

ಚುನಾವಣೆಗಾಗಿ 'ಭಾರತ್ ಅಕ್ಕಿ': ಸಿಎಂ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಭಾರತ್ ಅಕ್ಕಿ ಯೋಜನೆಯನ್ನು ಸ್ಥಗಿತಗೊಳಿಸಿರುವುದನ್ನು ನೋಡಿದರೆ, ಈ ಯೋಜನೆಯನ್ನು ಚುನಾವಣೆ ಗೋಸ್ಕರವೇ ಆರಂಭಿಸಿರುವುದು ಸ್ಪಷ್ಟ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾವು ಅನ್ನಭಾಗ್ಯ ಯೋಜನೆಗೆ ಅಕ್ಕಿ ಕೇಳಿದಾಗ, ಭಾರತೀಯ ಆಹಾರ ನಿಗಮದಲ್ಲಿ ದಾಸ್ತಾನಿದ್ದರೂ ನೀಡಲಿಲ್ಲ' ಎಂದರು.

'ಕೇಂದ್ರ ಸರ್ಕಾರ ಉದ್ದೇಶಪೂರ್ವಕವಾಗಿ ಅಕ್ಕಿ ನೀಡದ ಕಾರಣ ನಾವು ಜನರಿಗೆ ಹೆಚ್ಚುವರಿ ಅಕ್ಕಿಯ ಬದಲು, ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು' ಎಂದರು.

ಡಿಸಿಇಟಿ: 9ರಿಂದ ಸೀಟು ಹಂಚಿಕೆ ಪ್ರಕ್ರಿಯೆ

ಬೆಂಗಳೂರು: ಡಿಪ್ಲೊಮಾ ಸಿಇಟಿಯಲ್ಲಿ (ಡಿಸಿಇಟಿ) ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಎಂಜಿನಿಯರಿಂಗ್ ಮೂರನೇ ಸೆಮಿಸ್ಟರ್ ಪ್ರವೇಶಕ್ಕೆ ಹಾಗೂ ಮೊದಲನೇ ವರ್ಷದ ವಾಸ್ತುಶಿಲ್ಪ ಶಾಸ್ತ್ರ ಕೋರ್ಸ್‌ಗಳಿಗೆ ಜುಲೈ 9ರಂದು ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಅಭ್ಯರ್ಥಿಗಳಿಗೆ ತಮಗೆ ಆಸಕ್ತಿ ಇರುವ ಎಲ್ಲಾ ಕೋರ್ಸ್‌ಗಳಿಗೂ ಆದ್ಯತಾ ಕ್ರಮದಲ್ಲಿ ಇಚ್ಛೆಗಳನ್ನು ದಾಖಲಿಸಲು ಜುಲೈ 9ರಿಂದ 11ರವರೆಗೆ ಅವಕಾಶ ವಿರುತ್ತದೆ. ಇಚ್ಛೆಗಳನ್ನು ಪರಿಗಣಿಸಿ, ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯಂತೆ ಸೀಟು ಹಂಚಿಕೆ ಮಾಡಲಾಗುತ್ತದೆ ಎಂದು ಕೆಇಎ ಹೇಳಿದೆ.

ಅರ್ಜಿಗಳಲ್ಲಿನ ತಪ್ಪುಗಳ ತಿದ್ದುಪಡಿಗೆ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಿದ್ದು ಜುಲೈ 8ರ ಬೆಳಿಗ್ಗೆ 10ರವರೆಗೆ ಅವಕಾಶ ನೀಡಲಾಗಿದೆ. ದಾಖಲೆಗಳ ಪರಿಶೀಲನೆಯು ಅಂದು ಬೆಳಿಗ್ಗೆ 11ರಿಂದ ಸಂಜೆ 4 ಗಂಟೆವರೆಗೆ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯಲಿದೆ.

ಪ್ರಯಾಣಿಕ ವಾಹನ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಜೂನ್ ತಿಂಗಳಿನಲ್ಲಿ ಪ್ರಯಾಣಿಕ ವಾಹನಗಳ ಚಿಲ್ಲರೆ ಮಾರಾಟದಲ್ಲಿ ಶೇ 7ರಷ್ಟು ಇಳಿಕೆಯಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ತಿಳಿಸಿದೆ.

ಕಳೆದ ವರ್ಷದ ಜೂನ್‌ನಲ್ಲಿ 3.02 ಲಕ್ಷ ವಾಹನಗಳು ಮಾರಾಟವಾಗಿದ್ದವು. ಪ್ರಸಕ್ತ ವರ್ಷದ ಜೂನ್‌ನಲ್ಲಿ 2.81 ಲಕ್ಷ ವಾಹನಗಳು ಮಾರಾಟವಾಗಿವೆ. ಬಿಸಿ ಗಾಳಿಯಿಂದಾಗಿ ಷೋರೂಂಗಳಿಗೆ ಭೇಟಿ ನೀಡುವ ಗ್ರಾಹಕರ ಸಂಖ್ಯೆಯಲ್ಲಿ ಶೇ 15ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

'ವಾಹನಗಳ ಲಭ್ಯತೆ ಹಾಗೂ ರಿಯಾಯಿತಿ ಸೌಲಭ್ಯವು ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಉತ್ತೇಜಿಸಲು ನೆರವಾಗಿದೆ. ಆದರೆ, ಮುಂಗಾರು ಆಗಮನ ವಿಳಂಬದಿಂದಾಗಿ ಬಿಸಿ ಗಾಳಿಯು ಹೆಚ್ಚಿದೆ. ಇದರಿಂದ ಮಾರುಕಟ್ಟೆಯ ನಿರೀಕ್ಷಿತ ಗುರಿ ಸಾಧನೆಗೆ ತೊಡಕಾಗಿದೆ' ಎಂದು ಎಫ್‌ಎಡಿಎ ಅಧ್ಯಕ್ಷ ಮನೀಶ್ ರಾಜ್ ಸಿಂಘಾನಿಯಾ ತಿಳಿಸಿದ್ದಾರೆ.

ಗ್ರಾಹಕರು ವಾಹನಗಳ ಬೇಡಿಕೆಗೆ ಕೋರಿಕೆ ಸಲ್ಲಿಸಿರುವುದು ಕಡಿಮೆಯಾಗಿದೆ. ಬಹಳಷ್ಟು ಗ್ರಾಹಕರು ಖರೀದಿ ನಿರ್ಧಾರವನ್ನು ಮುಂದೂಡಿರುವ ಬಗ್ಗೆ ಡೀಲರ್‌ಗಳು ತಿಳಿಸಿದ್ದಾರೆ ಎಂದು ಹೇಳಿದ್ದಾರೆ.

ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 5ರಷ್ಟು ಏರಿಕೆಯಾಗಿದ್ದು, ಒಟ್ಟು 13.75 ಲಕ್ಷ ದ್ವಿಚಕ್ರ ವಾಹನಗಳು ಮಾರಾಟವಾಗಿವೆ.

ದೇಶದ ಗ್ರಾಮೀಣ ಪ್ರದೇಶದಲ್ಲಿ ಮೇ ತಿಂಗಳಿನಲ್ಲಿ ಪ್ರಯಾಣಿಕ ವಾಹನಗಳ ಮಾರಾಟವು ಶೇ 59.3ರಷ್ಟಿತ್ತು. ಜೂನ್‌ನಲ್ಲಿ ಶೇ 58.6ರಷ್ಟಕ್ಕೆ ಇಳಿಕೆಯಾಗಿದೆ. ಮುಂಗಾರು ಮಳೆಯ ಕೊರತೆ ಹಾಗೂ ಲೋಕಸಭಾ ಚುನಾವಣೆಯು ಗ್ರಾಮೀಣ ಪ್ರದೇಶದಲ್ಲಿ ವಾಹನಗಳ ಮಾರಾಟದಲ್ಲಿನ ಇಳಿಕೆಗೆ ಕಾರಣವಾಗಿದೆ ಎಂದು ಹೇಳಿದೆ.

ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 5ರಷ್ಟು ಕುಸಿತವಾಗಿದ್ದು, ಒಟ್ಟು 72,747 ವಾಹನಗಳು ಮಾರಾಟವಾಗಿವೆ. ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ 28ರಷ್ಟು ಇಳಿಕೆಯಾಗಿದ್ದು, 71,029 ಟ್ರ್ಯಾಕ್ಟರ್‌ಗಳು ಮಾರಾಟವಾಗಿವೆ.

ಆದರೆ, ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 5ರಷ್ಟು ಹೆಚ್ಚಳವಾಗಿದ್ದು, 94,321 ವಾಹನಗಳು ಮಾರಾಟವಾಗಿವೆ.

ಈ ಬಾರಿ ಮುಂಗಾರು ಉತ್ತಮವಾಗಿರಲಿದೆ ಎಂದು ಹವಾಮಾನ ತಜ್ಞರು ಅಂದಾಜಿಸಿದ್ದಾರೆ. ಹಾಗಾಗಿ, ಗ್ರಾಮೀಣ ಪ್ರದೇಶದಲ್ಲಿ ದ್ವಿಚಕ್ರ ವಾಹನಗಳ ಮಾರಾಟ ಹೆಚ್ಚಳವಾಗುವ ನಿರೀಕ್ಷೆಯಿದೆ. ಆದರೆ, ಕೃಷಿ ವಲಯದಲ್ಲಿನ ನಗದು ಹರಿವಿನ ಕೊರತೆ ಹಾಗೂ ಪ್ರಾದೇಶಿಕ ಮಾರುಕಟ್ಟೆಗಳ ಏರಿಳಿತವು ಸವಾಲಾಗಿದೆ ಎಂದು ಎಫ್‌ಎಡಿಎ ಹೇಳಿದೆ.

ರಥಯಾತ್ರೆ ಅಹಮದಾಬಾದ್‌ನ ಜಗನ್ನಾಥ ದೇಗುಲದಲ್ಲಿ ವಾರ್ಷಿಕ ರಥಯಾತ್ರೆಯ ವೇಳೆ ಭಕ್ತರು ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸಿದರು – ಪಿಟಿಐ ಚಿತ್ರ

ಎಫ್‌ಎಂಸಿಜಿ: ಶೇ 9ರಷ್ಟು ಬೆಳವಣಿಗೆ ನಿರೀಕ್ಷೆ - ಕ್ರಿಸಿಲ್

ಕೋಲ್ಕತ್ತ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ತ್ವರಿತವಾಗಿ ಮಾರಾಟವಾಗುವ ಗ್ರಾಹಕ ಉತ್ಪನ್ನಗಳ (ಎಫ್‌ಎಂಸಿಜಿ) ವಲಯದ ವರಮಾನವು ಶೇ 7ರಿಂದ 9ರಷ್ಟು ಬೆಳವಣಿಗೆ ಕಾಣಲಿದೆ ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ತಿಳಿಸಿದೆ.

ನಗರ ಪ್ರದೇಶದಲ್ಲಿನ ಬೇಡಿಕೆ ಸ್ಥಿರವಾಗಿರಲಿದೆ. ಗ್ರಾಮೀಣ ವಲಯದಲ್ಲಿ ಬೇಡಿಕೆ ಪ್ರಮಾಣವು ಹೆಚ್ಚಳವಾಗಲಿದೆ. ಇದು ಎಫ್‌ಎಂಸಿಜಿ ವಲಯದ ಪ್ರಗತಿಗೆ ನೆರವಾಗಲಿದೆ ಎಂದು ಶನಿವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಈ ವಲಯದ ಬೆಳವಣಿಗೆಯು ಶೇ 5ರಿಂದ 7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಲಾಗಿತ್ತು.

ಆಹಾರ ಮತ್ತು ಬೆವರೇಜಸ್ ವಲಯದಲ್ಲಿನ ಕಚ್ಚಾ ಸರಕುಗಳ ಬೆಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಲಿದೆ. ವೈಯಕ್ತಿಕ ಮತ್ತು ಗೃಹ ಬಳಕೆಯ ಕಚ್ಚಾ ವಸ್ತುಗಳ ಬೆಲೆಯು ಸ್ಥಿರವಾಗಿರಲಿದೆ ಎಂದು ತಿಳಿಸಿದೆ.

'ಉತ್ಪನ್ನ ವಿಭಾಗಗಳು ಮತ್ತು ಕಂಪನಿವಾರು ಆದಾಯದ ಬೆಳವಣಿಗೆಯಲ್ಲಿ ಬದಲಾವಣೆಯಾಗಲಿದೆ. ಆಹಾರ ಮತ್ತು ಬೆವರೇಜಸ್ ವಲಯವು ಶೇ 8ರಿಂದ 9ರಷ್ಟು ಪ್ರಗತಿ ದಾಖಲಿಸುವ ನಿರೀಕ್ಷೆಯಿದೆ. ಗ್ರಾಮೀಣ ಪ್ರದೇಶದಲ್ಲಿನ ಬಳಕೆ ಪ್ರಮಾಣದ ಹೆಚ್ಚಳವು ಇದಕ್ಕೆ ಸಹಕಾರಿಯಾಗಲಿದೆ' ಎಂದು ಕ್ರಿಸಿಲ್ ನಿರ್ದೇಶಕ ರವೀಂದ್ರ ವರ್ಮಾ ತಿಳಿಸಿದ್ದಾರೆ.

'ವೈಯಕ್ತಿಕ ಬಳಕೆ ವಸ್ತುಗಳ ವಲಯವು ಶೇ 6ರಿಂದ ಶೇ 7ರಷ್ಟು ಹಾಗೂ ಗೃಹ ಬಳಕೆ ವಸ್ತುಗಳ ವಲಯವು ಶೇ 8ರಿಂದ ಶೇ 9ರಷ್ಟು ಬೆಳವಣಿಗೆ ಕಾಣಲಿದೆ' ಎಂದು ಹೇಳಿದ್ದಾರೆ. ಗ್ರಾಮೀಣಆರ್ಥಿಕತೆಯು ಮುಂಗಾರು ಹಾಗೂ ಕೃಷಿ ಆದಾಯದ ಮೇಲೆ ಅವಲಂಬಿತವಾಗಿದೆ. ಈ ಆರ್ಥಿಕತೆಯು ಸುಧಾರಣೆಯಾದರೆ ಸ್ಥಿರವಾದ ಬೇಡಿಕೆಯನ್ನು ಸೃಷ್ಟಿಸಲಿದೆ ಎಂದು ವರದಿ ತಿಳಿಸಿದೆ.

ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ₹8,000 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ₹8,006 ಕೋಟಿ ವೆಚ್ಚದಲ್ಲಿ 929 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಅನುಮೋದನೆ ನೀಡಿದೆ.

ರಾಜ್ಯದ ಹೆದ್ದಾರಿ ಯೋಜನೆಗಳಿಗೆ ಅನುಮೋದನೆ ನೀಡುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಿಯೋಗವು ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಕಳೆದ ವಾರ ಮನವಿ ಸಲ್ಲಿಸಿತ್ತು. 2024–25ನೇ ಸಾಲಿನ ವಾರ್ಷಿಕ ಯೋಜನೆಯಡಿ ಈ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.

ಶಿರಾ- ಬೈರೇನಹಳ್ಳಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಮೂರು ತಿಂಗಳಲ್ಲಿ ಚಾಲನೆ ನೀಡಲಾಗುತ್ತದೆ ಎಂದು ಕರ್ನಾಟಕ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ತಿಳಿಸಿದ್ದಾರೆ.

ಹೆದ್ದಾರಿ ಯೋಜನೆ	ಕಿ.ಮೀ	ಮೊತ್ತ (₹ಕೋಟಿಗಳಲ್ಲಿ)
ಚಿಕ್ಕಮಗಳೂರಿನಲ್ಲಿ ಬೈಪಾಸ್	19	400
ಚೂರಿಕಟ್ಟೆ–ಸಾಗರ, ಸಾಗರ–ಆನಂದಪುರ ಹೆದ್ದಾರಿ	32	400
ಕಾರ್ಕಳ–ಮಾಳ ಗೇಟ್	29	438
ಚಾರ್ಮಾಡಿ ಘಾಟ	13	260
ಆಗುಂಬೆ ಘಾಟ	20	403
ಜೇವರ್ಗಿ–ಚಾಮರಾಜನಗರ ಹೆದ್ದಾರಿ	23	272
ಬೈಂದೂರು–ರಾಣೆಬೆನ್ನೂರು ಹೆದ್ದಾರಿ	56	900
ಸಾಗರ–ಸಿಗಂದೂರು ಹೆದ್ದಾರಿ	62	920
ಮೂಡಿಗೆರೆ–ಬಾಣಾವರ	81	1,213
ಹೆದ್ದಾರಿ 373ರ ಅರ್ಜುನಹಳ್ಳಿ–ಬಿಳಿಕೆರೆ	24	500
ಮಾಣಿಕ್‌ನಗರ ಸೇತುವೆ ಪುನರ್ ನಿರ್ಮಾಣ	0	15
ವಾಡಿ ಆರ್‌ಒಬಿ	2	150
ಬೆಂಗಳೂರು–ಮೈಸೂರು ಹೆದ್ದಾರಿ ಸಂರಕ್ಷಣಾ ಕಾರ್ಯಗಳು	2	90
ರಾಷ್ಟ್ರೀಯ ಹೆದ್ದಾರಿ 150 ಎ ಯಲ್ಲಿ ಆರ್‌ಒಬಿ	6	100
ನವಲಗುಂದ ಬೈಪಾಸ್	12	350
ಕಾರ್ಯಸಾಧ್ಯತಾ ವರದಿ/ಡಿಪಿಆರ್	459	15
ಏಳು ಕಡೆಗಳಲ್ಲಿ ರಸ್ತೆ ಸುರಕ್ಷತಾ ಕಾರ್ಯಗಳು	0	100
ಶಿರಾ–ಬೈರೇನಹಳ್ಳಿ	52	1000

ಅಂತರ ನಿಗಮ ವರ್ಗಾವಣೆ ಪಟ್ಟಿ ಬಿಡುಗಡೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅಂತರ ನಿಗಮ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದ ನೌಕರರ ವರ್ಗಾವಣೆ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿಗಳ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ 2023ನೇ ಸಾಲಿನ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಲು ಕಳೆದ ವರ್ಷ ಜುಲೈಯಿಂದ ಡಿಸೆಂಬರ್‌ವರೆಗೆ ಅವಕಾಶ ನೀಡಲಾಗಿತ್ತು. ಪರಸ್ಪರ 958 ನೌಕರರು ಅರ್ಜಿ ಸಲ್ಲಿಸಿದ್ದರು. ಈ ಪೈಕಿ 616 ನೌಕರರನ್ನು ಪರಸ್ಪರ ವರ್ಗಾವಣೆ ಮಾಡಲಾಗಿದ್ದು, ಅದರ ಆದೇಶವನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಲಾಗಿದೆ. ಆಕ್ಷೇಪಗಳು ಇದ್ದಲ್ಲಿ ಜುಲೈ 10ರ ಒಳಗೆ ಸಲ್ಲಿಸಲು ಅವಕಾಶ ನೀಡಲಾಗಿದೆ ಆಕ್ಷೇಪಣೆಗಳನ್ನು ಸಂಬಂಧಪಟ್ಟ ವಿಭಾಗದ ಆಡಳಿತಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆಯಬೇಕು ಎಂದು ಕೆಎಸ್‌ಆರ್‌ಟಿಸಿ ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ) ತಿಳಿಸಿದ್ದಾರೆ.

ಅಹವಾಲುಗಳಿಗೆ ಡಿಸಿಎಂ ಭರವಸೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ವೈಯಕ್ತಿಕವಾಗಿ ₹ 25 ಸಾವಿರ ನೀಡುತ್ತೇನೆ. ಯಾವುದಾದರೂ ಇಲಾಖೆಯಲ್ಲಿ ಉದ್ಯೋಗಕ್ಕೆ ಶಿಫಾರಸು ಮಾಡುತ್ತೇನೆ' ಎಂದು ಎಚ್.ಡಿ. ಕೋಟೆಯ ಸೇವಾದಳ ಕಾರ್ಯಕರ್ತ ಮಣಿಕಂಠ ಅವರ ಮನವಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಭಾರತ್ ಜೋಡೊ ಭವನದಲ್ಲಿ ಶನಿವಾರ ಅವರು 'ಕಾರ್ಯಕರ್ತರೊಂದಿಗೆ ನಿಮ್ಮ ಡಿಸಿಎಂ' ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಿಗಮ ಮಂಡಳಿಗೆ ನೇಮಕ, ಪಕ್ಷದಲ್ಲಿ ಸ್ಥಾನಮಾನ, ಮನೆ, ನಿವೇಶನ, ಜಮೀನು ಸಮಸ್ಯೆ, ಹಾಸ್ಟೆಲ್ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳನ್ನು ಹೊತ್ತು ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಕಾರ್ಯಕರ್ತರು ಉಪ ಮುಖ್ಯಮಂತ್ರಿಗೆ ಅಹವಾಲು ಸಲ್ಲಿಸಿದರು.

'ಲೋಕಸಭಾ ಚುನಾವಣೆಗೆ ಪ್ರಚಾರಕ್ಕೆ ತೆರಳುವ ವೇಳೆ ಅಪಘಾತವಾಗಿ ಕಾಲಿನ ಮೊಣಕಾಲು ಚಿಪ್ಪಿಗೆ ಪೆಟ್ಟು ಬಿದ್ದಿದೆ' ಎಂದು ಮಣಿಕಂಠ ತಮ್ಮ ನೋವು ಹೇಳಿಕೊಂಡರು.

'ಪಶುಸಂಗೋಪನಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಪತ್ನಿ ಮೃತ ಪಟ್ಟಿದ್ದು, ಕೋವಿಡ್ ಸಮಯದಲ್ಲಿ ನಾನು ಕಾಲು ಕಳೆದುಕೊಂಡಿದ್ದೇನೆ. ಮಗನಿಗೆ ಅನುಕಂಪದ ಆಧಾರದ ಕೆಲಸ ಕೊಡಿಸಿ' ಎಂದು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ಕಾರ್ಯಕರ್ತ ಕಿರಣ್ ಅವಲತ್ತುಕೊಂಡಾಗ, ಸಚಿವ ವೆಂಕಟೇಶ್ ಅವರನ್ನು ಭೇಟಿಯಾಗುವಂತೆ ಶಿವಕುಮಾರ್ ಸೂಚಿಸಿದರು.

'ಸ್ಥಳೀಯ ಸಂಸ್ಥೆಯವರು ನನ್ನ ಜಮೀನು ಒತ್ತುವರಿ ಮಾಡಿಕೊಂಡಿದ್ದು, ನ್ಯಾಯ ಕೊಡಿಸಿ' ಎಂಬ ಬಂಟ್ವಾಳದ ಗಿಲ್ಬರ್ಟ್ ಅವರ ಮನವಿಗೆ ಸ್ಪಂದಿಸಿದ ಶಿವಕುಮಾರ್ ಅವರು, 'ಇನ್ನೊಂದು ವಾರದಲ್ಲಿ ನಿಮ್ಮ ಸಮಸ್ಯೆ ಬಗೆಹರಿಯಲಿದೆ' ಎಂದು ಭರವಸೆ ನೀಡಿದರು.

ನಿವೃತ್ತ ಯೋಧ ರಾಮಮೂರ್ತಿ ನಗರದ ಆರ್.ಜಿ. ಜಿ. ನಾಯ್ಡು ಅವರು ತಮ್ಮ ಬಡಾವಣೆಯಲ್ಲಿನ ಮೂಲಸೌಕರ್ಯಗಳ ಸಮಸ್ಯೆ ಬಗ್ಗೆ ಗಮನ ಸೆಳೆದಾಗ, 'ಶೀಘ್ರದಲ್ಲೇ ಅಧಿಕಾರಿಗಳನ್ನು ಕಳುಹಿಸಿ ಸಮಸ್ಯೆ ಪರಿಹರಿಸಲಾಗುವುದು' ಎಂದು ವಾಗ್ದಾನ ನೀಡಿದರು. ಮಗಳ ಶಾಲಾ ಶುಲ್ಕ ಮತ್ತು ಮನೆ ನೀಡಿ ಎಂದು ಯಶವಂತಪುರದ ಅಬ್ರಹಾಂ ಶಂಕರ್ ಮನವಿ ಸಲ್ಲಿಸಿದಾಗ, 'ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಮನೆ ದೊರೆಯುವಂತೆ ಮಾಡುತ್ತೇನೆ' ಎಂದು ಧೈರ್ಯ ಹೇಳಿದರು.

'ಪಕ್ಷಕ್ಕೆ 39 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಎಂಎಸ್‌ಐಎಲ್‌ಗೆ ನಾಮನಿರ್ದೇಶನ ಮಾಡಿ' ಎಂದು ತೇರದಾಳದ ಸಂಗಮೇಶ್ ಅವರ ಮನವಿಗೆ, 'ಗೃಹಸಚಿವ ಪರಮೇಶ್ವರ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದು ಅವರಿಗೆ ತಿಳಿಸುತ್ತೇನೆ' ಎಂದರು.

ಕೆಎಸ್‌ಆರ್‌ಟಿಸಿಗೆ 20 ವೊಲ್ವೊ ಮಲ್ಟಿ ಆ್ಯಕ್ಸೆಲ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರದ ಊರುಗಳ ಪ್ರಯಾಣಕ್ಕೆ '9600 ವೊಲ್ವೊ ಮಲ್ಟಿ ಆ್ಯಕ್ಸೆಲ್' ಸೀಟರ್ ಪ್ರೋಟೊ ಟೈಪ್ (ಮೂಲ ಮಾದರಿ) 20 ಹೊಸ ಬಸ್‌ಗಳು ಇನ್ನು ಮೂರು ತಿಂಗಳಲ್ಲಿ ಕೆಎಸ್‌ಆರ್‌ಟಿಸಿಗೆ ಬರಲಿವೆ. ಈ ಪ್ರೀಮಿಯಂ ಬಸ್‌ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶನಿವಾರ ವೀಕ್ಷಿಸಿದರು.

ಮಂಗಳೂರು, ಕುಂದಾಪುರ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಿಗೆ ಹಾಗೂ ಮುಂಬೈ, ಶಿರಡಿ, ಚೆನ್ನೈ, ಎರ್ನಾಕುಲಂ ಸೇರಿದಂತೆ ಹೊರರಾಜ್ಯಗಳ ಪ್ರದೇಶಗಳಿಗೆ ಈ ಬಸ್‌ಗಳು ಸಂಚರಿಸಲಿವೆ.

ಬಸ್ ವಿಶೇಷ: ಶಕ್ತಿಶಾಲಿ ಹ್ಯಾಲೊಜಿನ್ ಹೆಡ್‌ಲೈಟ್ ಮತ್ತು ಡೇ ರನ್ನಿಂಗ್ ಲೈಟ್ (ಡಿಆರ್‌ಎಲ್), ಐಷರಾಮಿ ಒಳ ವಿನ್ಯಾಸ ಮತ್ತು ಬಾಹ್ಯ ಸ್ಕ್ಯಾಂಡಿನೇವಿಯನ್ ವಿನ್ಯಾಸವನ್ನು ಈ ಬಸ್ ಹೊಂದಿದೆ.

ಉತ್ತಮ ಇಂಧನ ದಕ್ಷತೆ, ನವೀನ ತಂತ್ರಜ್ಞಾನದಿಂದ ಸುಧಾರಿತ ಎಂಜಿನ್ ಹೊಂದಿದ್ದು, ಅತ್ಯುತ್ತಮ ಕಾರ್ಯಕ್ಷಮತೆ ಹಾಗೂ ಸುಧಾರಿತ ಎಂಜಿನ್ ಹೆಚ್ಚು ಮೈಲೇಜ್ ನೀಡುತ್ತದೆ. ಬಸ್ಸಿನ ಉದ್ದದಲ್ಲಿ ಶೇ 3.5ರಷ್ಟು ಹೆಚ್ಚಳ ಇರುವುದರಿಂದ ಪ್ರಯಾಣಿಕರ ಆಸನಗಳ ನಡುವಿನ ಅಂತರ ಹೆಚ್ಚಾಗಿದೆ. ಬಸ್ಸಿನ ಎತ್ತರದಲ್ಲಿ ಶೇ 5.6ರಷ್ಟು ಹೆಚ್ಚಳ ಇರುವುದರಿಂದ ಹೆಚ್ಚಿನ ಹೆಡ್ ರೂಂ ಹೊಂದಿದೆ. ಕಿಟಕಿ ಗಾಜು ಶೇ 9.5ರಷ್ಟು ವಿಸ್ತಾರವಾಗಿದೆ. ಲಗೇಜ್‌ಗೆ ವಿಶಾಲ ಸ್ಥಳಾವಕಾಶವಿದೆ.

'ಹೊಸ ಜನರೇಷನ್ ಮೊಬೈಲ್ ಚಾರ್ಜಿಂಗ್ ಪಾಯಿಂಟ್‌ಗಳನ್ನು ಒಳಗೊಂಡಿದೆ. ಉತ್ತಮ ಹವಾನಿಯಂತ್ರಣ ವ್ಯವಸ್ಥೆ ಇರುತ್ತದೆ. ಉನ್ನತ ದರ್ಜೆಯ, ಉತ್ತಮ ವಿನ್ಯಾಸದ ಆಸನಗಳಿವೆ. ಸುರಕ್ಷತೆಗಾಗಿ ಹಿಂಭಾಗದಲ್ಲಿ ಫಾಗ್‌ಲೈಟ್ ಮತ್ತು ಫೈರ್ ಅಲಾರ್ಮ್ ಮತ್ತು ಪ್ರೊಟೆಕ್ಷನ್ ಸಿಸ್ಟಮ್ (ಎಫ್‌ಎಪಿಎಸ್) ಅಳವಡಿಸಲಾಗಿದೆ' ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

'9600 ವೊಲ್ವೊ ಮಲ್ಟಿ ಆ್ಯಕ್ಸೆಲ್' ಸೀಟರ್ ಪ್ರೋಟೊ ಟೈಪ್ ಹೊಸ ಬಸ್‌ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ವೀಕ್ಷಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Multiple Vacancy

REQUIRED FIRE Officer, Supervisior, DCPO Fireman for Plant in Bidadi Karnataka. Contact Ajay: 9899068090, ajay.pal@gmrgroup.in

ಪ್ರವಾಸ

Travel

26.07.2024 ಚಿಕ್ಕಮಗಳೂರು, 8.8.2024 ಮಂತ್ರಾಲಯ ಒಂದಿನ, 30.08.2024 ಮಡಕೇರಿ, 13.09.2024 ಸೌದತ್ತಿಕೂಡಲಸಂಗಮ, 20.09.2024 ಮಲೆಮಹದೇಶ್ವರ ಬೆಟ್ಟ.ಶ್ರೀನಿಧಿ ಪ್ರವಾಸ. 9448373624

Holiday Package Tours

AYODHYA, KASHI, Prayagraj. Train, Food, Hotel, 12000/- Sarakki Tours, 9663676464

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ವೈವಾಹಿಕ

Grooms Wanted

Brahmin

ಬ್ರಾಹ್ಮಣ ವಧು, ವಯಸ್ಸು 27, PUC ಕಲಿತಿರುವ/ ವಯಸ್ಸು 32, SSLC ಕಲಿತಿರುವ ವಧುವಿಗೆ ಸದ್ಗುಣವಂತ ವರ ಬೇಕಾಗಿದೆ. 9880685177

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

SALE BDA Anjanapura 5th G Block 30x40 S/F 95 lakh also 40x60 W/F 9th Block and 40x60 commercial site 40x60 E/F 80Ft Road 1st Block 9620041313, 9945373839

Arkavathi Layout

BDA-SITE FOR Sale Arkavathi Layout 15th_Block 40x60. Jakkur Srirampura 5500sqft For Sale Call:7676900174 6363496142

BDA ARKAVATHY layout. 40×60. Near Manyatha Tech Park Owner Contact No: 9663005859/ 9731594565

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SALE BSK 6th stage 4th B Block 40x60 west Facing 2Cr also 40x60 Facing 6th Block 1.90Cr and 20x30, 11th Block South facing, negotiable all owners site 9945373839, 9620041313

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BANASHANKARI 6TH Stage,4th Block,BDA Site Sale 30x40,South Facing,Genuine Buyers Contact; 9844216344

BANASHANKARI 6TH Stage, 4th 'T' Block, 30x40 site for sale. Contact:- 9844006666.

Basaweshwaranagar

SALE BASAVESHWARNAGAR Commercial, 40×60 South Rajajinagar East 50×80 Residential 40×60 West Contact: 9448273220/ 8660075308

HSR Layout

"SALE 35X60 Corner Site 3rd Sector HSR Layout, good location, Genuine Buyers Call: 7760388034/ 9242135834"

Jayanagar

JAYANAGAR 9TH 30X40 Commercial 5,00,00,000/ 4th T Block, 40x82 East 80ft Road 11,48,00000, 40x60 North, 7,45,00000:- 9739995042

J P Nagar

J.P.NAGAR 2ND Phase 30x40 & 40x60 West, old house Site value only 26,000/- Sft. -9845144365

Kumarapark

SITES/HOUSES/ FLATS For Sale:- Kumaraswamy Layout, ISRO Layout MARUTI Layout, Surroundings. Contact- 9341952021/ 9108879240

Kempegowda Layout

BDA KEMPEGOWDA layout. 50×80. 300 Feet Road Commercial Site. Owner. Contact. No. 9663005859/ 7899570235

"30X40 7TH-BLOCK, 30X50 RESIDENTIAL 50X80 COMMERCIAL BDA SITES SALE 6TH BLOCK KEMPEGOWDA LAYOUT"- 9845143579"

Nagarabhavi

"NAGARABHAVI BDA Complex 30x45 North, 30x50 East BDA Site Sale, Full white, Immediate Registration. 9448432633

DC CONVERTED SITE SALE 50X80 EAST FACING BBMP A KATHA NEAR ULLAL RTO: 6366232222/ 6366242222

Peenya

BLUEJAY SUNSHINE 152 East facing (2 teak trees) 1185 sq.ft BDA approved near to Nagasandra metro. 8200/ - negotiable 9980162483

Tumkur Road

300 NOS, BMRDA Approved Residential Sites Available for sale before Nelamangala on Tumkur Road at Attractive Price. Housing Society/ Bulk_Buyers Contact: 9019862158

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

SMV LAYOUT 7th Block, 30x40 Sale, West Face BDA Allottee, Near Muddinapalya Circle. 9164089633, 9663226688.

SMV LAYOUT 6th Block, 20x30 Sale, North, BDA Allottee, Opposite KLE Law College. 9164089633, 9663226688.

DIRECT OWNER 30x40 and 40x60 BDA Sites Sale VISHVESWARAIAH LAYOUT, near 100 feet-road, SREENIDHI:9742681666

Rajarajeshwari Nagar

BEML LAYOUT, 3rd Stage,40x60,South Facing, Semi Commercial, Full Cheque Payment Contact: 9448508410

Yelahanka

40X70 W/F ROSEBAY GATED COMMUNITY RESIDENTIAL Site Sale, Prime Location Bagalur Main Road Srinivasapura Call.9591013777

30X40 SITES available for Sale at Sugahatta, Near Yelahanka Visvesvaraya Institute of Technology. Ph: 9538243975

Mangaluru

KHB ALLOTTED 30x40 EAST CORNER Site under Corporation Limit Sale 19 Lakhs Clear Papers OWNER 9980274537/ 9606866368

Bannerghatta Road

BANNERAGTTA ROAD Panduranga Nagar Corner Sites 45x80 7,20,00000/ 32x70 3,47,00000/ Bilekahalli Residential Site 30x50 1,15,00000:- 9739995042

Kanakapura Road

40X60 EF 50x80 EF, Judicial Layout, 40x60 EF Kendriya Layout Near-To Talaguttapura Metro Station: 9341238064

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.4.8 Crores (single payment preferred), not negotiable. Immediate Registration. 9845765559/ 9845043282

Bannerghatta Road

HOUSE SALE 40x60 With 5 Floors Building Rental Income 5 Lakhs 8cr. Negotiable. Near Meenakshi Mall, Arakere. 9611135365.

Jayanagar

JAYANAGAR 4TH T Block Corner 30x66 House 6,90,00000/ 45x135 Near 4th Block Jayanagar 14,48,00000 9739995042

SALE 80X120 Jayanagar 8th Block With old House on 80feet Excellent Location Road Call:9844134068 9066399102

WEEKEND CORNER ಕ್ಲಾಸಿಫೈಡ್ಸ್

Commercial Building FOR SALE

East facing Commercial property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 74118 10970
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME

ಬಿಲ್ವ ಗಾಣದ ಮನೆ
ವಿಜಯನಗರ, ನಾಗರಬಾವಿ ಸರ್ಕಲ್, ಬೆಂಗಳೂರು

ಮರದ ಗಾಣದ ಕಡಲೇಕಾಯಿ ಎಣ್ಣೆ -	1 litre 300 Rs.
ಕಬ್ಬಿಣದ ಗಾಣದ ಕಡಲೇಕಾಯಿ ಎಣ್ಣೆ -	1 litre 240 Rs.
ಕೊಬ್ಬರಿ ಎಣ್ಣೆ -	1 litre 250 Rs.
ಸೂರ್ಯಕಾಂತಿ ಎಣ್ಣೆ -	1 litre 240 Rs.
ಹರಳೆಣ್ಣೆ -	1 litre 240 Rs.

FREE HOME DELIVERY
ನಮ್ಮಲ್ಲಿ ಎಲ್ಲಾ ರೀತಿಯ ಎಣ್ಣೆಗಳು ಹಾಗೂ ಎಲ್ಲಾ ರೀತಿಯ ಹಿಂಡಿಗಳು ದೊರೆಯುತ್ತವೆ.
ಬಿ.ರವಿ - 9731564715, ರೋಹಿತ್ - 8971981863

J P Nagar

JP-NAGAR 2ND Near Central Mall 40X60 Old House 5,80,00000/ 30x50 North 3 Unit House 4,50,00000/:- 9739995042

Kengeri

KENGERI, KARUBELE Road, DC Conversion 20x33.5 Newly Constructed 4 BHK Duplex House (68,00,000/-). 92434-19641, 96860-00868.

Kanakapura Road

SALE INDEPENDENT Duplex 3BHK`Villa Gated`Community @_NANDA PRAKRUTHI off_Kanakapura Road 30x50`East Facing With`Wardrobe Kitchentte_Fans Geysers-Lights Grill`Work Car-garage 1.35crore Negotiable Roopa: 8546948484.

Nagarabhavi

5BHK-LUXURIOUS TRIPLEX-HOUSE FOR SALE near_Annapurneshwari Nagar, Nagarabhavi ₹2.50 Crore Negotiable. Contact: 9901057383

Basavanagudi

SALE 20X40 BDA Site with 3000Sft Building with Carparking. Rental income. Near Gandhi Bazar. 9845743555

Hanumanthnagar

15X45 HOUSE West-Facing at #36/B, 9th Main, Hanumanthanagar, (Behind Brahmins Coffee), Clear titles. Contact Owner- 9886798182

Magadi Road

KAMAKSHIPALYA 15X50SFT E/F "A" KHATA 5FLOORS BUILDING 1 BHK 8 HOUSES + 1 SHOP GETTING 51,000/- RENT Rs.1Cr 8Lakh NEGOTIABLE: 9845288310

Banashankari

SALE 30X55 at BSK 2nd Stage With Ground 2BHK and First Floor 3BHK Separate Units Call:9844134068 9066399102

Flat

Banashankari

"LUXURY NEW-FLAT 3BHK 2100 Sq.ft Poorna Pragna BDA Layout, 2 Car-parking, 600 Sq.ft UDS, ₹1.49 Crore. 9845286505"

Girinagar

BOOK APAPRTMENT Girinagar 1st Phase 40x60, 3 BHK, 2000 sqft Ground Floor Parking, one flat on each floor, 2nd floor available. Vegetarians Only. 9448981741 7337855467

2BHK APARTMENT WITH CARPARK GANAPATHI NAGAR, CLOSE TO AVALAHALLI BDA PARK 55 LAKHS NEGOTIABLE: 9449655947

Malleshwaram

MALLESWARAM (EIGHT Main) 2 BHK FLAT, 1000sft, First floor, North facing, 1.25CR Negotiable- 9845243757

Rajarajeshwari Nagar

SALE 2BHK Flat North Facing Fully Furnished , LoanAvailable. Rs.58 Lac Nego. Owner: 9113205017

Jakkur

SALE 3BHK EAST 1620 sft. FLAT, All Amenities. Near Highway. 2.5km from Mall of Asia. Owner: 7022334447, 7022334448

Agricultural Land Converted

Intl Airport Road

30 ACRES Kundana Devanahalli Taluk 2.80cr./ Acre, NH-207 Just 3 km, Near IVC Road. 9980577227.

Commercial Building

Seshadripuram

FOR SALE COMMERSIAL PROPERTY GROUND FLOUR 1000SQFT IN 1ST MAIN ROAD SHESHADRIPURAM SUITABLE FOR SHOWROOM,SHOP COST:1.5CR CONTACT:B.J Srinivas 9448463652/ 918762687674

Commercial Land

Yelahanka

BUILT TO-SUIT 6300 sft. PRIME COMMERCIAL LAND on AIRPORT Road, Yelahanka. Call: 7022334447, 7022334448

Commerical

Kempegowda Layout

BDA COMMERCIAL Site-for-Sale NadaprabhuKempegowda Layout 9th Block D Sector 80/65 South West Corner Price:6500/- Contact:-9686469799, 9448793428

Residential/ Commercial

Devanahalli

1100 SQFT BIAAPA Approved Residential Plot Sale at Devenahalli Rs 3000000. M 9752121223

K R Puram

SALE 5 BHK Triplex house 4200 sft built up G + 3 floors BDA approved. Lift 2 car park. Rs 2.25 cr. Contact - 9148357707

REAL ESTATE BUYING

Industrial & Factory

Airport Road

NEED INDUSTRIAL land or industrial convertible land of 2 to 3 acres in 10 km surrounding of KIAL. Interested sellers may call on below number. 9886020888

Sites

Nagarabhavi

"WANTED NAGARABHAVI, Vishveshwaraiah, RHCS, MPM Layouts`and Sorroundings, Any measurements. Please contact Genuine sellers. 7259675150"

WANTED SITES 30X40 40X60 50X80 NAGARBHAVI RAJAJINAGAR HOUSING Co. OPERATIVE SOCIETY VISHWESHWARAIAH LAYOUT NGEF: 8105688602

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

"WANTED SITE 40x60 East Only Banashankari 6th Stage, Anjanapura, Kanakapura Road Immediate Registration "Sri.Ganesh Estate"- 9845286505"

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL PREMISES Available for RENT Site No.7, 8 (Portion), 18 and 19 (Portion). 2nd, 3rd & 4th Floor measuring about 14,448 Sqft. Situated at Chunchanghatta Main Road, Yelchenahalli Main Road, BLR-560078. Contact: 88848-55475/ 96111-83868 Email: sheela.acc1 @gmail.com

RENT- 3 Acres of DC converted Land for Commercial, attached National Highway 75, Ajjapanahalli Village, 9Kms from Kolar Town. 9448081434

OFFICE SPACE Commercial 2700 Sft A/C & Lift Opp to EGL Domlur & 400/ 490/ 500 Sft FF/ Plug & Play at Domlur & Koramangala. Nandu 9901361519

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

INDUSTRIAL SHED/ Godown for rent in Harohalli Industrial Area 3rd phase, 11,000 Sft. Contact: 9108982314

Godown

4000 SFT SHED, No.45, Electronic City Phase-2, Naidu`Layout Shantipuram Village Bangalore-100 8`HP Electricity, Rent,Rs.10/-Sft Advance`10 Month Call: 9945346126.

House

"FOR-RENT RMV-2ND_STAGE near_RMV`Club Prestigious Location spacious`4BHK North`facing Corner`House with_Servant Quarters &`Fabulous Amenities. 9535461993/ WhatsApp: 9945070268"

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages

DH Classifieds DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

‘ಡೆಂಗಿ: ಕ್ರಮ ಕೈಗೊಳ್ಳದಿದ್ದರೆ ಹೋರಾಟ’

ಬೆಂಗಳೂರು: ‘ನಗರದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗುತ್ತಿದ್ದು, ನಿಯಂತ್ರಣಕ್ಕೆ ಹತ್ತು ದಿನಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದಿದ್ದರೆ ನಗರದಾದ್ಯಂತ ಹೋರಾಟ ನಡೆಸಲಾಗುತ್ತದೆ’ ಎಂದು ಬಿಜೆಪಿಯ ಬೆಂಗಳೂರು ಮಹಾನಗರ ಘಟಕ ಎಚ್ಚರಿಸಿದೆ.

‘ನಗರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ನಾಗರಿಕರಿಗೆ ಡೆಂಗಿ ಬಂದಿದೆ. ಮೈಸೂರಿನಲ್ಲಿ ಆರೋಗ್ಯ ಅಧಿಕಾರಿಯೇ ಮರಣ ಹೊಂದಿದ್ದಾರೆ. ಇಂತಹ ಘಟನೆ ನಗರದಲ್ಲೂ ಸಂಭವಿಸಿದ ಮೇಲೆ ಕ್ರಮ ಕೈಗೊಳ್ಳುತ್ತೀರಾ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಘಟಕದ ವತಿಯಿಂದ ಸಲ್ಲಿಸಿರುವ ಮನವಿಯಲ್ಲಿ ಪ್ರಶ್ನಿಸಲಾಗಿದೆ.

ಶಾಸಕ ಸಿ.ಕೆ.ರಾಮಮೂರ್ತಿ, ಬಿಜೆಪಿಯ ಬೆಂಗಳೂರು ಕೇಂದ್ರ ಜಿಲ್ಲೆ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಉತ್ತರ ಜಿಲ್ಲೆ ಘಟಕದ ಅಧ್ಯಕ್ಷ ಎಸ್. ಹರೀಶ್, ಮುಖಂಡ ಗಂಗಭೈರಯ್ಯ, ಉಮೇಶ್ ಶೆಟ್ಟಿ ಇದ್ದರು.

‘ಚಹಾ ಪುಡಿಗೂ ಕೃತಕ ಬಣ್ಣ ಬಳಕೆ’

ಆಹಾರ ಇಲಾಖೆಯಿಂದ 49 ಮಾದರಿ ಪುಡಿಗಳ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 49 ಚಹಾ ಮಾದರಿ ಪರೀಕ್ಷೆಯಲ್ಲಿ 45 ಅಸುರಕ್ಷಿತ ಎಂದು ದೃಢ
- ತೂಕ ಹೆಚ್ಚಿಸಲು ಮರದ ಪುಡಿ ಬಳಕೆ

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ಇಲ್ಲಿ ಬಳಸುತ್ತಿರುವ ಚಹಾ ಪುಡಿಯ ವಿವಿಧ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, ಹಲವು ಮಾದರಿಗಳಲ್ಲಿ ಕೃತಕ ಬಣ್ಣ ಬಳಸಿರುವುದು ದೃಢಪಟ್ಟಿದೆ.

ಬೆಂಗಳೂರಿನ ವಿವಿಧೆಡೆ 49 ಚಹಾ ಪುಡಿ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವುಗಳಲ್ಲಿ 45 ಪುಡಿಗಳು ಅಸುರಕ್ಷಿತವೆಂಬ ವರದಿ ಬಂದಿದೆ.

ಈ ಮಾದರಿಗಳಿಗೆ ಕೃತಕ ಬಣ್ಣ ಹಾಗೂ ಕೆಲವೆಡೆ ತೂಕ ಹೆಚ್ಚಿಸಲು ಮರದ ಪುಡಿ ಬಳಸಿರುವುದು ದೃಢಪಟ್ಟಿದೆ. ತಯಾರಕರು ಹಾಗೂ ಇಂತಹ ಚಹಾ ಪುಡಿಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸುವವರ ಮೇಲೆ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆಯನ್ನು ಇಲಾಖೆಯು ನೀಡಿದೆ.

‘ಕಾಫಿ ಪುಡಿಯ 50 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವುಗಳಲ್ಲಿ ಎಲ್ಲ ಮಾದರಿಗಳು ಸುರಕ್ಷಿತವೆಂಬ ವರದಿ ಬಂದಿದೆ. ಚಹಾ ಪುಡಿಯಲ್ಲಿ ಹೆಚ್ಚಿನವು ಅಸುರಕ್ಷಿತವೆಂಬುದು ದೃಢಪಟ್ಟಿದೆ. ಇವುಗಳಲ್ಲಿ ಬ್ರ್ಯಾಂಡೆಂಡ್ ಚಹಾ ಪುಡಿಯು ಸೇರಿದೆ’ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

‘ಎಲ್ಲಾ ಪದಾರ್ಥಗಳಿಗೂ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಮಾನದಂಡ ಇರುತ್ತದೆ. ಅದನ್ನು ಉಲ್ಲಂಘಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಅವರು ಎಚ್ಚರಿಕೆಯನ್ನು ನೀಡಿದ್ದಾರೆ.

ಡೆಂಗಿ: 7 ಸಾವಿರ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 175 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಈ ವರ್ಷ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,006ಕ್ಕೆ ಏರಿಕೆಯಾಗಿದೆ.

ಹೊಸದಾಗಿ ದೃಢಪಟ್ಟ ಪ್ರಕರಣಗಳಲ್ಲಿ ಒಂದು ವರ್ಷದೊಳಗಿನ ಓರ್ವ ಮಗು, ಒಂದರಿಂದ 18 ವರ್ಷದೊಳಗಿನ 53 ಮಂದಿ ಹಾಗೂ 18 ವರ್ಷಗಳು ಮೇಲ್ಪಟ್ಟ 121 ಮಂದಿ ಸೇರಿದ್ದಾರೆ. ಸದ್ಯ ಡೆಂಗಿ ಪೀಡಿತರಲ್ಲಿ 352 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ 275 ಡೆಂಗಿ ಶಂಕಿತರಿಗೆ ಪರೀಕ್ಷೆ ಮಾಡಲಾಗಿದ್ದು, 115 ಮಂದಿಗೆ ದೃಢಪಟ್ಟಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 1,908ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ಈವರೆಗೆ ಬೆಂಗಳೂರಿನಲ್ಲಿ ಒಬ್ಬರು ಸೇರಿ ಒಟ್ಟು ಆರು ಮಂದಿ ಮೃತಪಟ್ಟಿದ್ದಾರೆ.

ಸಂಪಂಗಿರಾಮನಗರ ಬಳಿಯ ಅರಸಪ್ಪ ಕಾಂಪೌಂಡ್‌ನಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಶನಿವಾರ ಆರೋಗ್ಯ ಇಲಾಖೆಯ ಸಿಬ್ಬಂದಿ ಫಾಗಿಂಗ್ ಮಾಡಿದರು

ಬೆಂಗಳೂರಿನಲ್ಲಿ ಡೆಂಗಿ ಶಂಕಿತ 11 ವರ್ಷದ ಬಾಲಕ ಶುಕ್ರವಾರ ಮೃತಪಟ್ಟಿದ್ದಾನೆ. ಆತನಿಗೆ ನಡೆಸಲಾದ ‘ರ್‍ಯಾಪಿಡ್ ಆ್ಯಂಟಿಜನ್’ ಪರೀಕ್ಷೆಯಲ್ಲಿ ಡೆಂಗಿ ದೃಢಪಟ್ಟಿದೆ. ಇದರಿಂದಾಗಿ ‘ಎಲಿಸಾ’ ಪರೀಕ್ಷೆ ನಡೆಸಲು ಬಿಬಿಎಂಪಿ ನಿರ್ಧರಿಸಿದೆ. ಇದರಲ್ಲಿಯೂ ಡೆಂಗಿ ದೃಢಪಟ್ಟಲ್ಲಿ ‘ಸಾವಿನ ಲೆಕ್ಕಗಳ ವರದಿ’ ಸಿದ್ಧಪಡಿಸಿ, ಮರಣದ ಬಗ್ಗೆ ಅಧಿಕೃತವಾಗಿ ದೃಢಪಡಿಸಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಕೆಲವೆಡೆ ಡೆಂಗಿ ಶಂಕಿತ ಮರಣ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳ ‘ಸಾವಿನ ಲೆಕ್ಕಗಳ ವರದಿ’ ಸಿದ್ಧಪಡಿಸಿದ ಬಳಿಕ ಮರಣಕ್ಕೆ ಕಾರಣ ಖಚಿತಪಡಿಸಿ, ಡೆಂಗಿ ದೃಢಪಟ್ಟಲ್ಲಿ ದೈನಂದಿನ ಡೆಂಗಿ ವರದಿಯಲ್ಲಿ ಸೇರ್ಪಡೆ ಮಾಡಲಾಗುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಲಂಚ ಪಡೆಯುತ್ತಿದ್ದ ಕಂದಾಯ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಮಾಲೂರು: ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಶನಿವಾರ ಭೂ ಪರಿವರ್ತನೆ ಮಾಡಿಕೊಡಲು ₹20 ಸಾವಿರ ಲಂಚ ಪಡೆಯುತ್ತಿದ್ದ ಕಂದಾಯ ಮತ್ತು ಸರ್ವೆ ಇಲಾಖೆಯ ಆರ್‌ಐ ಮಂಜುನಾಥ್ ಮತ್ತು ಸರ್ವೆ ಇಲಾಖೆ ಎಡಿಎಲ್‌ಆರ್ ಅಶ್ವಿನಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕನಕಪುರ

ಕನಕಪುರ ಬೈಪಾಸ್ ರಸ್ತೆ, ಕನಕಪುರ–562117

Email:apmckanakapura@rediffmail.com, apmckanakapura@gmail.com

ಸಂ.ಕೃಮಾಇ/ಕೃಉಮಾಸ(ಕ)/ 57 /2024–25 ದಿನಾಂಕ: 05–07–2024

ಪ್ರಕಟಣೆ

ದಿನಾಂಕ:15–03–2024ರಂದು ನಡೆದ ಸಮಿತಿಯ ಸಾಮಾನ್ಯ ಸಭೆಯ ನಿರ್ಣಯದಂತೆ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸದಾಗಿ ನಿರ್ಮಿಸಿರುವ ಸಣ್ಣ ಮಳಿಗೆಗಳು/ ಗೋದಾಮು ಪರಿವರ್ತಿತ ಸಣ್ಣ ಮಳಿಗೆ ಬ್ಲಾಕ್–ಎ (1,2,3,4,5,6,7,8,9)+(10,11), ಪರಿವರ್ತಿತ ಸಣ್ಣ ಮಳಿಗೆ ಬ್ಲಾಕ್–ಬಿ (1,2,3,4,5,6,7,8,) + (09,10), ಪರಿವರ್ತಿತ ಸಣ್ಣ ಮಳಿಗೆ ಬ್ಲಾಕ್–ಸಿ (1,2,3,4,5,6,7,8,)+(09,10), ಸಣ್ಣ ಮಳಿಗೆಗಳು ಬ್ಲಾಕ್–ಡಿ (1,2,3,4,5,6), ಸಣ್ಣ ಮಳಿಗೆಗಳು ಬ್ಲಾಕ್–ಇ (1,2,3,4,5,6), ಸಣ್ಣ ಮಳಿಗೆಗಳು ಬ್ಲಾಕ್–ಎಫ್ (1,2,3,4,5,6), ಸಣ್ಣ ಮಳಿಗೆಗಳು ಬ್ಲಾಕ್–ಜಿ (1,2,3,4,5,6,7,8,9), 200 ಮೆ.ಟ ಸಾಮರ್ಥ್ಯ ದ ಗೋದಾಮು ಸಂಖ್ಯೆ –3 ಗಳನ್ನು ಜೇಷ್ಠತೆಯನುಸಾರ ಅರ್ಹ ಪೇಟೆ ಕಾರ್ಯಕರ್ತರುಗಳಿಗೆ ಲೀವ್– ಅಂಡ್–ಲೈಸೆನ್ಸ್ ಆಧಾರದ ಮೇಲೆ ಹಂಚಿಕೆ ಮಾಡಲು ಈ ಸಮಿತಿಯಲ್ಲಿಪರವಾನಗಿ ಪಡೆದು ಅಧಿಸೂಚಿಸಲ್ಪಟ್ಟ ದಿನಸಿ/ ತರಕಾರಿ ಮತ್ತು ಹಣ್ಣು/ತೆಂಗಿನಕಾಯಿ/ ಬಾಳೆ/ವಿಳ್ಯದೆಲೆ ವ್ಯಾಪಾರ ವಹಿವಾಟು ನಡೆಸುತ್ತಿರುವ ಅರ್ಹ ಪೇಟೆಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಸಮಿತಿಯಲ್ಲಿ ನೋಂದಣಿ ಮಾಡಿಕೊಳ್ಳಲು ಕೊನೆಯ ದಿನಾಂಕ: 22–07–2024 ಮತ್ತು ನಮೂನೆ–03ನ್ನು ಪಡೆಯುವ ಕೊನೆಯ ದಿನಾಂಕ:25–07–2024 ಹಾಗೂ ಅರ್ಜಿ ನಮೂನೆ–03 ನ್ನು ಭರ್ತಿ ಮಾಡಿ ಸಮಿತಿಗೆ ಸಲ್ಲಿಸಲು ಕೊನೆಯ ದಿನಾಂಕ:28–07–2024, ಯಾವುದೇ ಕಾರಣ ನೀಡದೆ ಪ್ರಕಟಣೆಯನ್ನು ಪರಿಗಣಿಸುವ/ರದ್ದುಗೊಳಿಸುವ/ ತಿರಸ್ಕರಿಸುವ ಮತ್ತು ಪ್ರಕಟಣೆ ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಈ ಸಮಿತಿ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಪಡೆಯಲು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕನಕಪುರ ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ಕನಕಪುರ. ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ಕನಕಪುರ.

ಸಾರಿಗೆ ಇಲಾಖೆ

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ದೇವನಹಳ್ಳಿ, ಬೆಂಗಳೂರು (ಗ್ರಾ) ಜಿಲ್ಲೆ–562110

ಸಂಖ್ಯೆ: ಸಪ್ರಾಸಾಅ/ದೇ/ಹರಾಜು/2024–25 ದಿನಾಂಕ: 05–07–2024

ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆಯ ತಿದ್ದುಪಡಿ ಪ್ರಕಟಣೆ

ಈ ಕಛೇರಿಯ ಹರಾಜು ಪ್ರಕಟಣೆ ಸಂಖ್ಯೆ: ಸಪ್ರಾಸಾಅ/ದೇ/ಹರಾಜು/2024–25 ದಿನಾಂಕ: 02–07–2024 ರ ಪ್ರಕಟಣೆಯನ್ನು ದಿನಾಂಕ: 04–7–2024 ರಂದು ಪ್ರಜಾವಾಣಿ ಬೆಂಗಳೂರು ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಕರ್ನಾಟಕ ಪತ್ರಿಕೆಯಲ್ಲಿ ಹೊರಡಿಸಲಾಗಿರುತ್ತದೆ. ದಿನಾಂಕ: 26–07–2024 ರಂದು ನಡೆಯುವ ಸಾರ್ವಜನಿಕ ಬಹಿರಂಗ ಹರಾಜನ್ನು **ಟೆಂಡರ್ ಕಂ ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ** ಎಂದು ಓದಿಕೊಳ್ಳುವುದು. ಹಾಗೂ ಷರತ್ತು ಮತ್ತು ನಿಬಂಧನೆಗಳು ಕ್ರಮ ಸಂಖ್ಯೆ (1) ರಲ್ಲಿ ಮುಂದುವರೆದು ಟೆಂಡರ್ ಬಿಡ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: 25–7–2024 ರಂದು ಅಪರಾಹ್ನ 3.00 ರಿಂದ 5.30 ರೊಳಗೆ ಸಲ್ಲಿಸಲಾಗುವ ಪ್ರತಿಯೊಂದು ವಾಹನದ ಬಿಡ್‌ನ ಜೊತೆ ಬಿಡ್ ನಲ್ಲಿ ನಮೂದಿಸಿರುವ ಶೇಕಡ 50% ಕ್ಕಿಂತ ಮೇಲ್ಪಟ್ಟ ಮೊತ್ತದ ಡಿ.ಡಿ. ಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದೇವನಹಳ್ಳಿ ರವರ ಹೆಸರಿನಲ್ಲಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.

ಸಹಿ/–
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ
ದೇವನಹಳ್ಳಿ, ಬೆಂಗಳೂರು (ಗ್ರಾ) ಜಿಲ್ಲೆ–562110

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಕಾವೇರಿ ಭವನ, 9ನೇ ಮಹಡಿ, ಇ&ಎ ಬ್ಲಾಕ್, ಕೆ.ಜಿ. ರಸ್ತೆ, ಬೆಂಗಳೂರು–560009.
ದೂರವಾಣಿ: 080–23118888

No. RGRHCL/01/AMR/04/2024 ದಿನಾಂಕ: 05-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ

ರಾಜೀವ್ ಗಾಂಧಿ ವಸತಿ ನಿಗಮದ **ಅಧಿಕಾರಿ/ಸಿಬ್ಬಂದಿಗಳ ಮತ್ತು ಅವಲಂಬಿತರಿಗೆ ಗ್ರೂಪ್ ಮೆಡಿಕ್ಲೈಮ್ ಸೌಲಭ್ಯವನ್ನು ಕಲ್ಪಿಸಲು** ಕರ್ನಾಟಕದಲ್ಲಿ ನೊಂದಾಯಿತ ಸಾರ್ವಜನಿಕ ವಿಮಾ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಆಸಕ್ತರು ಖಾಲಿ ಟೆಂಡರ್ ಪ್ರಸ್ತಾವನೆಗಳನ್ನು ದಿನಾಂಕ: **05.07.2024** ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ದಿನಾಂಕ: **20.07.2024ರಂದು ಸಾಯಂಕಾಲ: 04:30 ಗಂಟೆಯವರೆಗೆ** ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ಮಾಹಿತಿ ಪಡೆದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಕಾರ್ಯಕ್ರಮ ಅನುಷ್ಠಾನ)
ರಾಜೀವ್ ಗಾಂಧಿ ವಸತಿ ನಿಗಮ ನಿ.,

DIPR/CP/YC/807/2024-25

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
ದೂರವಾಣಿ : 080–2728 2572 ಇ–ಮೇಲ್ : itstaff_ulb_bidadi@yahoo.com
ವೆಬ್‌ಸೈಟ್ : www.bidaditown.mrc.gov.in

ಸಂಖ್ಯೆ : ಪು.ಕಾ.ಬಿ./ಆ.ಶಾ./ಸಿಆರ್/02/2024–25 ದಿನಾಂಕ : 05–07–2024

ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000 ರಂತೆ **ಬಿಡದಿ ಪುರಸಭೆಯ ಸ್ವಚ್ಛ ಭಾರತ್–2.0 ಅನುದಾನದ ಅಡಿಯಲ್ಲಿ ಹಾಗೂ ಪುರಸಭಾ ನಿಧಿಯಡಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.** ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್ ವಿವರ : 1) ಬಿಡದಿ ಪುರಸಭೆಯ ವ್ಯಾಪ್ತಿಯಲ್ಲಿ ಪಾರಂಪರಿಕ ತ್ಯಾಜ್ಯ ಸಂಸ್ಕರಣೆ ಸಂಬಂಧ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲ ಪಡೆಯುವುದು. INDENT No. : DMA/2023-24/IND1466/Call-3, ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **23350.00, 2) ಬಿಡದಿ ಪುರಸಭೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಸಂತಾನ ನಿಯಂತ್ರಣ ಚಿಕಿತ್ಸೆ (ABC&ARV) ನೀಡುವುದು. INDENT No. : DMA/2023-24/Se2739/Call-2,** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **25000.00.**

ಸೂಚನೆಗಳು : 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 20–07–2024 ರ ಸಂಜೆ 5.30 ಗಂಟೆವರೆಗೆ, 2) ಬಿಡ್ ತೆರೆಯುವ ದಿನಾಂಕ : 22–07–2024 ರ ಬೆಳಿಗ್ಗೆ 11.00 ಗಂಟೆ ನಂತರ.

ಷರತ್ತುಗಳು : 1) ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು. 2) ಹೆಚ್ಚಿನ ವಿವರಗಳಿಗೆ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಬಿಡದಿ. ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಬಿಡದಿ.

ಡಿಐಪಿಆರ್/ರಾಮನಗರ/139/ಮಣಿಪಾಲ್/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–235/744/2024–25 ದಿನಾಂಕ:05.07.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	BIAAPA ಮಹಾ ಯೋಜನೆ 2021ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಅರವಿಂದ್ ಪರೇಕ್ ನಂ.A1602, ಸಿರೋಯ ಎನ್ವಿರಾನ್, ಆನಂದನಗರ, ಹೆಬ್ಬಾಳ, ಬೆಂಗಳೂರು	ಯಲಹಂಕ	ಜಾಲ	ಬಾಗಲೂರು	50/7 ಮತ್ತು 50/8	ಒಟ್ಟು 0ಎ–27.04 ಗುಂ	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ, ಹಲವಾರು ಜನರಿಗೆ ಉತ್ಪನ್ನಗಳು ದೊರೆಯುತ್ತವೆ. ವಾಣಿಜ್ಯ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಾಣಿಜ್ಯ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ, ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ದಿಂದ ‘ವಾಣಿಜ್ಯ ಉಪಯೋಗ’ ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಗೃಹ ಮಂಡಳಿ

ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009

ಸಂಖ್ಯೆ : ಕಗೃಮಂ/ಸ.ಕಂ.ಅ./ಜಿ.ನ.ಯೋ.ಕ/ಕೋಟೆಷನ್/1310/2024–25 ದಿನಾಂಕ : 05.07.2024

ಕಛೇರಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ಹಾಗೂ ಎಲ್&ಸಿ ಕಂಪನಿ ಜಂಟಿ ಸಹಭಾಗಿತ್ವದಲ್ಲಿ ಹಂಪಾಪುರದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: 51 EWS ಹಂಚಿಕೆದಾರರಾದ ಶ್ರೀ ಎಂ.ವಿ. ಆನಂದ S/o ಲೇಟ್ : ವೆಂಕಟರಾಮು ಎಂಬುವವರು ದಿನಾಂಕ : 26.10.2021 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನವನ್ನು ದಿವಂಗತರ ಪತ್ನಿಯವರಾದ ಶ್ರೀಮತಿ ಲಕ್ಷ್ಮೀದೇವಿ ರವರ ಹೆಸರಿಗೆ ವರ್ಗಾವಣೆ ಮಾಡಲು ನಿಯಮಾನುಸಾರ ಪ್ರಕ್ರಿಯೆ ಪ್ರಾರಂಭಿಸಿದ್ದು, ಈ ಸಂಬಂಧ ಯಾವುದೇ ತಕರಾರು / ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಗೊಂಡ ದಿನಾಂಕದಿಂದ 7 ದಿನಗಳೊಳಗೆ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, 5ನೇ ಮಹಡಿ, ಬೆಂಗಳೂರು–09 ಇಲ್ಲಿರುವ ಕಛೇರಿಗೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರು ಧರ್ಮ ಪತ್ನಿಯವರಾದ ಶ್ರೀಮತಿ ಲಕ್ಷ್ಮೀದೇವಿ ರವರ ಹೆಸರಿಗೆ ವರ್ಗಾವಣೆ ಮಾಡಲಾಗುವುದೆಂದು ಹಾಗೂ ನಿಗಧಿತ ದಿನಾಂಕದ ನಂತರ ಬರುವ ಯಾವುದೇ ತಕರಾರು/ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–
ಸಹಾಯಕ ಕಂದಾಯ ಅಧಿಕಾರಿ, ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು ನಗರ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು

ನೈಋತ್ಯ ರೈಲ್ವೆ

ಪಾರ್ಸೆಲ್ ಜಾಗ, ಪಾರ್ಕಿಂಗ್ ಮತ್ತು ಔಟ್ ಆಫ್ ಹೋಂ ಜಾಹೀರಾತು/ ಪ್ರಚಾರಕ್ಕಾಗಿ ಇ– ಹರಾಜುಗಳ ಬಿಡುಗಡೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು ವಿಭಾಗ, ನೈರುತ್ಯ ರೈಲ್ವೆ ಇವರು ಇ ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.

18.07.2024: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು (ಎಸ್‌ಎಂವಿಬಿ) ರೈಲು ನಿಲ್ದಾಣದಲ್ಲಿ ಪಾರ್ಕಿಂಗ್ ಸೌಲಭ್ಯದ ಏಕೀಕೃತ (ಆಕ್ಸೆಸ್ ನಿಯಂತ್ರಣದ) ನಿರ್ವಹಣೆ ಮತ್ತು ಉಸ್ತುವಾರಿಯ ಒಪ್ಪಂದ.

19.07.2024: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು (ಎಸ್‌ಎಂವಿಬಿ) ರೈಲು ನಿಲ್ದಾಣದ ನಿಗದಿತ ಜಾಗದಲ್ಲಿ ರೇಡಿಯೊ/ಕಾಲ್/ಅಪ್ ಆಧಾರಿತ ಟ್ಯಾಕ್ಸಿ ಮತ್ತು ಆಟೊಗಳ ಕಾರ್ಯನಿರ್ವಹಣೆ ಮತ್ತು ಉಸ್ತುವಾರಿಗೆ ಒಪ್ಪಂದ.

ಸ್ಥಳ: ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ, ನೆಲಮಹಡಿ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ನೈರುತ್ಯ ರೈಲ್ವೆ, ಬೆಂಗಳೂರು 560023 ಇವರ ಛೇಂಬರ್

ಈ ಮೇಲಿನ ಕೆಲಸಗಳಿಗೆ ಬಿಡ್ ಪೂರ್ವ ಸಭೆ 9 ಜುಲೈ 20204 ರಂದು 15.30 ಗಂಟೆವರೆಗೆ

ವಿವರಗಳಿಗಾಗಿ www.ireps.gov.in ಗೆ ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

ಪಿಯುಬಿ/229ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRES LADY Teacher For English and Computer For Primary & High School. Hebbal, Kempapura Call:9008981637

R E S POLYTECHNIC
(Estd: 1986 - Run by Rajendra Education Society)
5, Sunkadakatte, Magadi Main Road, Hegganahalli Cross, Bangalore-560 091 Phone: 080-23484814
DIPLOMA COURSES OFFERED:
1. Automobile 2. Information Technology 3. Computer Science 4. Electrical & Electronics 5. Electronics & Commn. 6. Civil 7. Mechanical 8. Fashion Technology 9. Commercial Practice
REQUIRE FULLTIME / PARTTIME - LECTURERS
Qualification for Computer Dept: MCA / MSC / BE.
For EC / EE / ME / CIVIL Dept: BE First Class.
For MATHS / SCIENCE / COMMERCE Dept: MSc / MCom.
NOTE: B.Ed is not mandatory
Note: Send your resume to: respt450@gmail.com
WITH stating branch of your specialization in SUBJECT line
Apply to PRINCIPAL within a week
RES-24506

WANTED TEACHERS ICSE Curriculum MSc, BEd, BIOLOGY. Contact: OXFORD PUBLIC SCHOOL, Srikantapura Anchepalya Near Jindal Public School Tumkur Road Bangalore Mobile: 9620075574, 9945622240

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Trained Teachers to handle English & Social-Studies for Primary & High-School. Mathematics for High School. Only English medium candidates need to apply.

BHARATH EDUCATION SOCIETY ®
B.E.S. COLLEGE OF LAW
(Affiliated to Karnataka State Law University & Recognised by BCI)
16th Main Road, 4th Block, Jayanagar, Bengaluru-560011
Phone: 080-26630499 / 22447067
RECRUITMENT NOTIFICATION
Applications are invited from qualified candidates for the appointment of following Posts

Sl. No.	Name of the Post	No.of Posts	Eligibility
1	Assistant Professor-Law	3	A good academic record with LLM Degree/MPEd Degree from recognized University with a minimum of 55% aggregate marks with NET / SLET / KSET in accordance of UGC regulations-2018
2	Physical Education Director	1	

* Salary as per Bharath Education Society Rules
Application along with supportive documents, Curriculum Vite with a passport size Photographs mentioning therein, the email ID and contact Phone Number should be sent to **The President, Bharath Education Society®, 16th Main, 4th Block, Jayanagara, Bengaluru 560011,** so as to reach on or before: **31-07-2024**
The applicant shall send copy of application along with enclosures to **The Registrar, Karnataka State Law University, Navanagar, Hubballi 580025.**

B.E.S. PREUNIVERISTY COLLEGE
Wanted LECTURERS: For Computer Science with MCA / MSc (CS)
B.E.S. DEGREE COLLEGE
Wanted LECTURERS: For Computer Science with MCA / MSc (CS)
B.E.S. INSTITUTE OF TECHNOLOGY
Wanted LECTURERS: For Computer Science with BE / M.Tech
B.E.S. ADMINISTRATIVE OFFICE
Wanted **CIVIL ENGINEER** with Diploma / BE (Civil) having 2 years experience with knowledge of AUTOCAD

Sri. Nirmal Kumar K.R., President, BES | Prof N.S. Vijaya, Vice President, BES | Sri M. Krishna Das, Secretary, BES | Smt. B.L. Nandini, Treasurer, BES
BES-2418

CHRIST ACADEMY INSTITUTE OF LAW
Invites Application for Qualified and Experience Teaching Faculty
Teaching Position: **LAW FACULTY**
Qualification: UGC NET / Ph.D (with specialization in Constitutional and Administrative Law preferred)
ECONOMICS FACULTY
Qualification: Post Graduation / Ph.D / UGC NET
Non-Teaching Position: **LIBRARIAN**
Qualified and experienced in handling Law Library preferred
Eligible candidates can apply through E-mail to: career@calaw.in
Note: SC/ST candidates can apply for reserved vacancies
CHRIST ACADEMY INSTITUTE OF LAW
Christ Nagar, Begur - Koppa Road, Hullahalli, Sakkalawara Post, Bangalore – 560083
Contact: 080 35215155 / 56
www.calaw.in

St Joseph's University
#36, Lalbagh Road, Bengaluru - 560 027
invites applications for the following positions for the academic year 2024-25:
Senior positions in:
- School of Humanities & Social Science
- School of Information Technology

Qualifications: PhD Postdoctoral Research.
Requirements: A minimum of 10 years of teaching experience as a Professor/ Associate Professor out of which at least five years should be as a Professor in a department. (Preference for this appointment may be given to the Heads of the Departments.)
To apply, use the Google Form on the University website: www.sju.edu.in (in the 'Announcements' section) on or before Sunday, 14th July 2024.

Multiple Vacancy

GLOBAL ACADEMY FOR LEARNING Next Gen School
Near Global Village & R.V. Engineering College, R.R. Nagar, Bengalure - 59.
— WE ARE HIRING —
Manager Admission/Front Office Executive (2+ years Experience) Managing admissions and counselling parents & students.
Administrator (2+ years Experience) Handling operations, finance, marketing, academics and support HR activities.
Accountant (2+ years Experience) Managing school accounts & finance.
Counsellor Graduate in Psychology / Child Development / Career Guidance with experience of working in reputed schools.
Coaches/Instructors (2+ years Experience) Graduate in Psychology / Child Development / Career Guidance with experience of working in reputed schools.
Send your CV to contact@gaflschool.com www.gaflschool.com + 91 88804 00900

TEACHER REQUIRED for Primary and High School for Social Studies, Science and Maths contact email kenmoreschool@gmail.com and 9901501185

WANTED HEAD Mistress, Trained/ Untrained Teachers Kindergarten, Primary Classes. Yoga, PT, Bus-Drivers. 3rd Phase, J.P.Nagar. 9845042249/ 26590773

Marketing & Sales

REQUIRED MARKETING Assistant who is ready to travel all over Karnataka who can join immediately. Resumes to resume2014nacpltd@yahoo.com whatsapp Ph:9391189978.

DH Classifieds More value, more impact | ಪ್ರಜಾವಾಣಿ | EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
For more details contact:
+91 9731810277 | +91 9886213331
+91 9901641752 | 080- 45557163/164
*Conditions apply

MORE Classifieds Ads on Subsequent Pages

JOB To Place your Classified Ads Contact: 9886213331

AUTOMOTIVE

Four Wheelers Selling

Benz

MERCEDES BENZ GL 350D 2013 Model 66500km Used Price 19 lakhs Chocolate Brown Automatic Direct Buyers Contact +91 90360-51000/ 080-23363646

Toyota

TOYOTA CRYSTA 2024 Diesel 6250kms driven attitude Black 2.4V Manual Brand New Price 29.60 Lakhs Contact Mr.Kumar +91 90360-51000/ 080-23363646

Hyundai

ACCIDENT VEHICLE for sale Hyundai Verna Fluidic Sx 2013 Model lying at Sri Maruthi auto Garage Gubbi gate, Tumkur Quote with and without RC to Surveyor 9845298248

EDUCATIONAL

Tuitions

ONLINE TUTION class for Mathematics class6th to 10th (State, CBSE, ICSE). Contact: 8660320590

ಕ್ಲಾಸಿಫೈಡ್ಸ್ ADMISSION CORNER

Get placement in Top most IT companies
COURSE AVAILABLE
- Diploma in Hardware and Networking Engineering, CCNA, MCSC VMWARE, CLOUD AZURE - Duration:12 months
- Diploma in Hardware Engineering
- Diploma in Network Engineering
- Basic Computer Course

ROYAL IT ACADEMY BANGALORE
(Recognized and approved by the Government of India)
MVR Building, Annasandrapalya Main Rd, Annasandrapalya Extension, Vibhutipura, Bengaluru

VVNT's Edify SCHOOL THINK BEYOND
KANAKAPURA ROAD BENGALURU
ADMISSIONS OPEN FOR KINDERGARTEN TILL GRADE 12
INTRODUCED ROBOTICS
(CBSE AFFILIATION NO. 830500)
(CAMBRIDGE AFFILIATION NO.IA 303)
https://edifyschoolbengaluru.com/
SCAN FOR SCHOOL DETAILS
CONTACT: admissions@edifyschoolbengaluru.com
Phone No. +91 9916526999, 7022895987/88

BUSINESS

Business Offers

Business For Sale

VEG RESTAURANT newly opened opp Godrej Avenue, at Yelahanka Main road for Sale. Owner 9739516555

Machinery & Tools

FOR SALE:STEEL Fabrication/Tower Manufacturing Machines as Power Press,Angle Cutting & Straightening Machine,Drilling Machine,Welding Sets,Crane with Hoist, Galvanizing Plant & Machinery, Oil Tanks and various other machineries. Available near Hoodi Metro.Interested parties Contact: Sagar Steel Pvt, Ltd.9845039680.

PERSONAL

Change of Name

CHANGE OF NAME
I, **PANKAJ SEN,** residing at # Flat No.B505, Pride Apartments, Bilekahalli, Bannerghatta Main Road, Bangalore-560076, have changed my minor daughter's name from **ANAIKA SEN** to **AANAIKA SENN** vide affidavit dated 05.07.2024, before notary Mohamed Hussain K, Bangalore. Henceforth she shall be known as **AANAIKA SENN** only

I, GURURAJ S/O Hanumantha Rao residence 187 Sun Citi Homes, Elawala Hobali, Nagawala, P.O Yelwal, Mysuru 571130 have changed my name from Gururaj to Gururaj Hanumantha Rao for all purposes

I, SREENIVASULU K S/o Subbaiah have changed my name to SRINIVASULU K vide affidavit dated: 6/7/2024 Before Notary Shreeshail B.Gobbani Bangalore.

ಹಾಥರಸ್ ಕಾಲ್ತುಳಿತ ಪ್ರಕರಣ ● ಹಣಕಾಸಿನ ವ್ಯವಹಾರ, ಕರೆ ವಿವರಗಳ ಪರಿಶೀಲನೆ

ಪಕ್ಷಗಳ ಜತೆ ಪ್ರಮುಖ ಆರೋಪಿ ಸಂಪರ್ಕ

ಆರೋಪಿ ದೇವ್‌ಪ್ರಕಾಶ್ ಮಧುಕರ್ ಅವರನ್ನು ಪೊಲೀಸರು ಹಾಥರಸ್‌ನ ಜಿಲ್ಲಾ ಆಸ್ಪತ್ರೆಗೆ ವೈದ್ಯಕೀಯ ತಪಾಸಣೆಗಾಗಿ ಶನಿವಾರ ಕರೆತಂದಿದ್ದರು –ಪಿಟಿಐ ಚಿತ್ರ

ನೋಯ್ಡಾ (ಪಿಟಿಐ): ಹಾಥರಸ್ ಜಿಲ್ಲೆಯಲ್ಲಿ ನಡೆದಿದ್ದ ಕಾಲ್ತುಳಿತ ಪ್ರಕರಣದಲ್ಲಿ ಶುಕ್ರವಾರ ತಡರಾತ್ರಿ ಬಂಧಿಸಲಾಗಿರುವ ಪ್ರಮುಖ ಆರೋಪಿ ದೇವ್‌ಪ್ರಕಾಶ್ ಮಧುಕರ್ ಅವರನ್ನು ಕೆಲ ರಾಜಕೀಯ ಪಕ್ಷಗಳು ಇತ್ತೀಚೆಗೆ ಸಂಪರ್ಕಿಸಿದ್ದವು ಎಂದು ಹಾಥರಸ್ ಪೊಲೀಸ್ ವರಿಷ್ಠಾಧಿಕಾರಿ ನಿಪುನ್ ಅಗರ್ವಾಲ್ ತಿಳಿಸಿದರು.

ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯಲ್ಲಿ ಜುಲೈ 2ರಂದು ನಡೆದಿದ್ದ ಅವಘಡದಲ್ಲಿ 121 ಜನರು ಮೃತಪಟ್ಟಿದ್ದರು.

ಮಧುಕರ್ ಅವರು ಸೂರಜ್‌ಪಾಲ್ ಅಲಿಯಾಸ್ ನಾರಾಯಣ ಸಾಕರ್ ಹರಿ ಅಲಿಯಾಸ್ ಬೋಲೆ ಬಾಬಾ ಅವರ ಕಾರ್ಯಕ್ರಮಗಳಿಗೆ ನಿಧಿ ಸಂಗ್ರಹಗಾರರಾಗಿದ್ದರು ಮತ್ತು ಅದಕ್ಕಾಗಿ ದೇಣಿಗೆ ಸಂಗ್ರಹಿಸಿದ್ದರು. ಅವರ ಹಣಕಾಸಿನ ವಹಿವಾಟುಗಳು ಮತ್ತು ಕರೆ ವಿವರಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಮಧಕರ್ ಅವರನ್ನು ಹಾಥರಸ್ ಪೊಲೀಸರ ವಿಶೇಷ ಕಾರ್ಯಾಚರಣೆ ತಂಡ ದೆಹಲಿಯ ನಜಾಫ್‌ಗಢ ಪ್ರದೇಶದಲ್ಲಿ ಬಂಧಿಸಿತ್ತು. ಅವರನ್ನು ಶನಿವಾರ ಮಧ್ಯಾಹ್ನ 2.15 ಗಂಟೆಗೆ ಹಾಥರಸ್‌ನ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿಸಲಾಯಿತು.

14 ದಿನ ನ್ಯಾಯಾಂಗ ಬಂಧನ: ಪ್ರಮುಖ ಆರೋಪಿ ದೇವಪ್ರಕಾಶ್ ಮಧುಕರ್ ಮತ್ತು ಬಂಧಿತ ಸಂಜು ಯಾದವ್ ಅವರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಿ ಶನಿವಾರ ಆದೇಶಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಬ್ಬ ಬಂಧಿತ ಆರೋಪಿ ರಾಮಪ್ರಕಾಶ್ ಶಾಕ್ಯಾ ಅವರನ್ನು ನ್ಯಾಯಾಲಯದ ಮುಂದೆ ಭಾನುವಾರ ಹಾಜರುಪಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಮಧುಕರ್, ಆ ದಿನ ಸತ್ಸಂಗದ ಕಾರ್ಯಕ್ರಮದ 'ಮುಖ್ಯ ಸೇವಾದಾರ' ಆಗಿದ್ದರು. ಸಿಕಂದ್ರಾರಾವ್ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದಾಖಲಿಸಿದ್ದ ಎಫ್‌ಐಆರ್‌ನಲ್ಲಿಯೂ ಇವರೊಬ್ಬರ ಹೆಸರನ್ನು ಉಲ್ಲೇಖಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇಲ್ಲಿಯವರೆಗೆ ಏಳು ಮಂದಿಯನ್ನು ಬಂಧಿಸಿದ್ದಾರೆ. ಅಲ್ಲದೆ ಪ್ರತ್ಯಕ್ಷದರ್ಶಿಗಳು, ಅಧಿಕಾರಿಗಳು ಮತ್ತು ಸಂತ್ರಸ್ತರ ಕುಟುಂಬದವರ ಹೇಳಿಕೆಗಳನ್ನು ದಾಖಲಿಸಿದ್ದಾರೆ.

'ವೈದ್ಯಕೀಯ ಚಿಕಿತ್ಸೆಗಾಗಿ ದೆಹಲಿಗೆ ಬಂದಿದ್ದ ಮಧುಕರ್ ಅವರು, ಅಲ್ಲಿಯೇ ಪೊಲೀಸರಿಗೆ ಶರಣಾಗಿದ್ದಾರೆ' ಎಂದು ಅವರ ವಕೀಲ ಎ.ಪಿ.ಸಿಂಗ್ ಹೇಳಿದ್ದಾರೆ.

ನಿರೀಕ್ಷಣಾ ಜಾಮೀನು ಕೋರಿರಲಿಲ್ಲ: 'ಮಧುಕರ್ ಅವರು ಯಾವುದೇ ತಪ್ಪು ಮಾಡಿಲ್ಲ. ಹೀಗಾಗಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿರಲಿಲ್ಲ. ಅಷ್ಟಕ್ಕೂ ಅವರ ಅಪರಾಧವೇನು? ಅವರು ಎಂಜಿನಿಯರ್. ಅವರು ಹೃದ್ರೋಗಿಯಾಗಿದ್ದಾರೆ. ಅವರ ಆರೋಗ್ಯ ಸ್ಥಿತಿ ಈಗ ಸ್ಥಿರವಾಗಿದೆ ಎಂದು ವೈದ್ಯರು ಹೇಳಿದ್ದಾರೆ. ಹೀಗಾಗಿ ಪೊಲೀಸರಿಗೆ ಶರಣಾಗಿದ್ದಾರೆ' ಎಂದು ವಕೀಲ ಸಿಂಗ್ ತಿಳಿಸಿದ್ದಾರೆ.

'ಪೊಲೀಸರು ಅವರನ್ನು ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸಿಕೊಳ್ಳಬಹುದು. ಅವರು ತನಿಖೆಗೆ ಸಹಕರಿಸುತ್ತಾರೆ. ಕಾರ್ಯಕ್ರಮದಲ್ಲಿನ ಸಮಾಜ ವಿರೋಧಿಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಾರೆ. ಆದರೆ ಇವುಗಳ ಜತೆಗೆ ಅವರ ಆರೋಗ್ಯ ಸ್ಥಿತಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕು' ಎಂದಿದ್ದಾರೆ.

ಸೂರಜ್‌ಪಾಲ್ ಅವರು ಸರ್ಕಾರ ಮತ್ತು ಪೊಲೀಸರೊಂದಿಗೆ ಸಹಕರಿಸಲು ಸಿದ್ಧರಿದ್ದಾರೆ. ಅವರು ಇಡೀ ಪ್ರಕರಣದ ಸಮಗ್ರ ತನಿಖೆಗೆ ಕೋರಿದ್ದಾರೆ ಎಂದು ಸಿಂಗ್ ಹೇಳಿದ್ದಾರೆ.

ಘಟನೆಯಿಂದ ತೀವ್ರ ದುಃಖವಾಗಿದೆ: ಭೋಲೆ ಬಾಬಾ

ಲಖನೌ: ಹಾಥರಸ್ ಜಿಲ್ಲೆಯಲ್ಲಿನ ಕಾಲ್ತುಳಿತ ಘಟನೆಯಿಂದ ತೀವ್ರ ದುಃಖವಾಗಿದ್ದು, ಸಂತ್ರಸ್ತರ ಕುಟುಂಬಗಳ ಜತೆ ನಿಲ್ಲುವಂತೆ ಸ್ವಯಂ ಘೋಷಿತ ದೇವಮಾನವ ಸೂರಜ್‌ಪಾಲ್ ಅಲಿಯಾಸ್ ನಾರಾಯಣ ಸಾಕರ್ ಹರಿ ಅಲಿಯಾಸ್ ಭೋಲೆ ಬಾಬಾ ತನ್ನ ಅನುಯಾಯಿಗಳಿಗೆ ತಿಳಿಸಿದ್ದಾರೆ.

ಈ ಸಂಬಂಧ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಈ ಸಾವುಗಳಿಂದ ನನಗೆ ದುಃಖವಾಗಿದೆ. ಅದರಿಂದ ಹೊರಬರಲು ಶಕ್ತಿ ನೀಡುವಂತೆ ದೇವರನ್ನು ಪ್ರಾರ್ಥಿಸುತ್ತೇನೆ' ಎಂದು ಹೇಳಿದ್ದಾರೆ.

ಸಂತ್ರಸ್ತರ ಕುಟುಂಬದವರು ಸರ್ಕಾರ ಮತ್ತು ಆಡಳಿತದ ಮೇಲೆ ನಂಬಿಕೆ ಇಡಬೇಕು ಎಂದಿರುವ ಅವರು, ಘಟನೆಗೆ ಕಾರಣರಾದ ಯಾರನ್ನು ಬಿಡಲಾಗುವುದಿಲ್ಲ ಎಂದಿದ್ದಾರೆ.

ಘಟನೆಯ ನಂತರ ಕಣ್ಮರೆಯಾಗಿರುವ ಬಾಬಾ ಅವರು, 'ಸಂತ್ರಸ್ತ ಕುಟುಂಬಗಳಿಗೆ ಮತ್ತು ಗಾಯಾಗಳುಗಳಿಗೆ ಸಾಧ್ಯವಿರುವ ಎಲ್ಲ ನೆರವನ್ನೂ ನೀಡುವಂತೆ' ತಮ್ಮ ಅನುಯಾಯಿಗಳನ್ನು ಕೇಳಿಕೊಂಡಿದ್ದಾರೆ.

ಭೋಲೆ ಬಾಬಾ ದೇಶ ತೊರೆದಿರಬಹುದು ಎಂಬ ವದಂತಿಗಳಿವೆ. ಆದರೆ ಇದನ್ನು ಅವರ ವಕೀಲ ಎ.ಪಿ.ಸಿಂಗ್ ಅಲ್ಲಗಳೆದಿದ್ದಾರೆ.

'ಅವರು ತಲೆಮರೆಸಿಕೊಂಡಿಲ್ಲ, ಉತ್ತರ ಪ್ರದೇಶದಲ್ಲಿಯೇ ಇದ್ದು, ಪೊಲೀಸ್ ತನಿಖೆಗೆ ಸಹಕರಿಸುತ್ತಿದ್ದಾರೆ. ಪೊಲೀಸರು ಯಾವಾಗ ಕರೆದರೂ ಹಾಜರಾಗುತ್ತಾರೆ' ಎಂದು ಸಿಂಗ್ ಹೇಳಿದ್ದಾರೆ.

ಸೂರತ್: ಆರು ಅಂತಸ್ತಿನ ಕಟ್ಟಡ ಕುಸಿತ; ಒಬ್ಬ ಸಾವು

ಸೂರತ್ ನಗರದಲ್ಲಿ ಶನಿವಾರ ಕುಸಿದ ಕಟ್ಟಡದಲ್ಲಿ ರಕ್ಷಣಾ ತಂಡವು ಕಾರ್ಯಾಚರಣೆ ನಡೆಸಿತು–ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸೂರತ್‌ನ ಸಚಿನ್ ಪ್ರದೇಶದಲ್ಲಿ ಶನಿವಾರ ಆರು ಅಂತಸ್ತಿನ ಕಟ್ಟಡ ಕುಸಿದಿದ್ದು, ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದಾರೆ ಕನಿಷ್ಠ ನಾಲ್ಕು ಮಂದಿ ಕಟ್ಟಡದ ಒಳಗೆ ಸಿಲುಕಿರುವ ಅನುಮಾನ ವ್ಯಕ್ತವಾಗಿದೆ. ತಕ್ಷಣವೇ ಕಾರ್ಯಾಚರಣೆ ನಡೆಸಿ ಒಬ್ಬರನ್ನು ರಕ್ಷಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ' ಎಂದು ಪೊಲೀಸರು ತಿಳಿಸಿದರು.

'30 ಫ್ಲ್ಯಾಟ್‌ಗಳನ್ನು ಹೊಂದಿದ 6 ಅಂತಸ್ತಿನ ಕಟ್ಟಡ ಕುಸಿದಿದೆ. ಕುಸಿಯುವ ವೇಳೆ 4ರಿಂದ 5 ಮಂದಿ ಕಟ್ಟಡದಲ್ಲಿ ಇದ್ದರು ಎಂದು ಹೇಳಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದೆ' ಎಂದು ಸೂರತ್ ಪೊಲೀಸ್ ಆಯುಕ್ತ ಅನುಪಮ್ ಸಿಂಗ್ ಗೆಹ್ಲೋತ್ ತಿಳಿಸಿದರು.

ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಈ ಕಟ್ಟಡದಲ್ಲಿ ಬಾಡಿಗೆಗೆ ಪಡೆದು ವಾಸಿಸುತ್ತಿದ್ದರು. ಡಿಎನ್ ನಗರ್ ಸೊಸೈಟಿಗೆ ಸೇರಿದ್ದ ಕಟ್ಟಡವು ಇದಾಗಿದ್ದು, ಸಂಪೂರ್ಣವಾಗಿ ಹದಗೆಟ್ಟಿತ್ತು.

ಅಹಮದಾಬಾದ್: ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ರಾಹುಲ್ ಗಾಂಧಿ

'ಗುಜರಾತ್‌ನಲ್ಲೂ ಬಿಜೆಪಿ ಮಣಿಸುತ್ತೇವೆ'

ವಾರಾಣಸಿಯಲ್ಲಿ ನಮ್ಮ ಚುನಾವಣಾ ಕಾರ್ಯತಂತ್ರದಲ್ಲಿ ಕೆಲವು ಲೋಪಗಳು ಸಂಭವಿಸದೇ ಇದ್ದಲ್ಲಿ, ಪ್ರಧಾನಿ ಮೋದಿ ಅವರನ್ನು ಮಣಿಸುತ್ತಿದ್ದೆವು

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಅಹಮದಾಬಾದ್ (ಪಿಟಿಐ): ಅಯೋಧ್ಯೆಯಲ್ಲಿ ಬಿಜೆಪಿಯನ್ನು ಮಣಿಸಿದಂತೆ ಗುಜರಾತ್‌ನಲ್ಲೂ ಬಿಜೆಪಿಯನ್ನು ಸೋಲಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಗುಜರಾತ್ ಭೇಟಿಯಲ್ಲಿರುವ ಅವರು ಶನಿವಾರ ಅಹಮದಾಬಾದ್‌ನಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ರಾಹುಲ್ ಅವರು ಲೋಕಸಭೆಯಲ್ಲಿ ಭಾಷಣ ಮಾಡುವಾಗ ಹಿಂದೂಗಳನ್ನು ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಇಲ್ಲಿನ ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿ (ಜಿಪಿಸಿಸಿ) ಕಚೇರಿಗೆ ಮುತ್ತಿಗೆ ಹಾಕಿದ್ದರು. ಅದರ ಮರುದಿನ ರಾಹುಲ್ ಅವರು ಅಹಮದಾಬಾದ್‌ಗೆ ಭೇಟಿ ನೀಡಿದ್ದಾರೆ.

'ಬೆದರಿಸುವ ಮತ್ತು ಕಚೇರಿಗೆ ಹಾನಿ ಉಂಟುಮಾಡುವ ಮೂಲಕ ಬಿಜೆಪಿಯವರು ನಮಗೆ ಸವಾಲು ಹಾಕಿದ್ದಾರೆ. ಅವರು ನಮ್ಮ ಕಚೇರಿಗೆ ಹಾನಿ ಮಾಡಿದ ರೀತಿಯಲ್ಲೇ ನಾವು ಒಟ್ಟಾಗಿ ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರವನ್ನು ಉರುಳಿಸಲು ಹೊರಟಿದ್ದೇವೆ. ಅಯೋಧ್ಯೆಯಲ್ಲಿ ಮಾಡಿದಂತೆ ನಾವು ಗುಜರಾತ್‌ನಲ್ಲೂ ಬಿಜೆಪಿಯನ್ನು ಮಣಿಸುತ್ತೇವೆ. ನನ್ನ ಮಾತುಗಳನ್ನು ಬರೆದಿಟ್ಟುಕೊಳ್ಳಿ' ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಕಾಂಗ್ರೆಸ್ ಪಕ್ಷವು ಅಧಿಕ್ಕಾರಕ್ಕೇರಲಿದ್ದು, ಗುಜರಾತ್‌ನಲ್ಲಿ ಹೊಸ ಯುಗ ಆರಂಭವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಈಚೆಗೆ ನಡೆದ ಚುನಾವಣೆಯಲ್ಲಿ ಉತ್ತರ ಪ್ರದೇಶದ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿ (ಅಯೋಧ್ಯೆ ರಾಮಮಂದಿರ ಇದೇ ಕ್ಷೇತ್ರದ ವ್ಯಾಪ್ತಿಯಲ್ಲಿದೆ) ಬಿಜೆಪಿಯ ಸೋಲನ್ನು ಪ್ರಸ್ತಾಪಿಸುವ ಮೂಲಕ ರಾಹುಲ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹರಿಹಾಯ್ದರು.

'ನಾನು ದೊಡ್ಡ ವಿಷಯವೊಂದನ್ನು ನಿಮಗೆ ಹೇಳುತ್ತಿದ್ದೇನೆ. ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟವು ಅಯೋಧ್ಯೆಯಲ್ಲಿ ಬಿಜೆಪಿಯನ್ನು ಸೋಲಿಸಿದೆ. ಆ ಮೂಲಕ, ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರು ಆರಂಭಿಸಿದ್ದ ರಾಮಮಂದಿರ ಚಳವಳಿಯನ್ನು ಮಣಿಸಿದೆ' ಎಂದು ತಿಳಿಸಿದರು.

'ಪ್ರಧಾನಿ ತಮ್ಮನ್ನು ತಾವು 'ಮನುಷ್ಯಾತೀತ' ಎಂದು ಹೇಳಿಕೊಳ್ಳುತ್ತಾರೆ. ಆದ್ದರಿಂದ ಸಂಸತ್ತಿನಲ್ಲಿ 'ನೀವು ಮನುಷ್ಯರೇ' ಎಂದು ಪ್ರಧಾನಿ ಅವರನ್ನು ಪ್ರಶ್ನಿಸಿದೆ. ನೀವು ದೇವರೊಂದಿಗೆ ನೇರ ಸಂಪರ್ಕ ಹೊಂದಿರುವಿರಾದರೆ, ನಿಮಗೆ ಅಯೋಧ್ಯೆಯಲ್ಲಿ ಸೋಲು ಎದುರಾದದ್ದು ಹೇಗೆ?' ಎಂದು ರಾಹುಲ್ ಗಾಂಧಿ ಅವರು ಲೇವಡಿ ಮಾಡಿದರು.

'ನೀಟ್–ಯುಜಿ': ತಿಂಗಳ ಕೊನೆಗೆ ಕೌನ್ಸೆಲಿಂಗ್?

ಒಂದನೇ ಪುಟದಿಂದ...

ಈ ಕುರಿತು ಕೆಲವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಕೇಂದ್ರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿತ್ತು. ಈ ಸಂಬಂಧ ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಎನ್‌ಟಿಎ, ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ಪ್ರಮಾಣಪತ್ರ ಸಲ್ಲಿಸಿವೆ. ಮೇ 5ರ ನೀಟ್ ಪರೀಕ್ಷೆ ರದ್ದುಪಡಿಸುವುದು ತರ್ಕಬದ್ಧ ಕ್ರಮವಲ್ಲ ಎಂದು ತಿಳಿಸಿತ್ತು.

ಮರು ಪರೀಕ್ಷೆಗೆ ಕಾಂಗ್ರೆಸ್ ಆಗ್ರಹ: ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ವಿವಿಧ ಪರೀಕ್ಷಾ ಅಕ್ರಮಗಳು ನಡೆದಿರುವ 'ನೀಟ್–ಯುಜಿ' ಅನ್ನು ಮತ್ತೊಮ್ಮೆ ಪಾರದರ್ಶಕವಾಗಿ ನಡೆಸಬೇಕು ಎಂದು ಶನಿವಾರ ಆಗ್ರಹಿಸಿರುವ ಕಾಂಗ್ರೆಸ್, ಪರೀಕ್ಷಾ ಅಕ್ರಮಗಳ ಕುರಿತು ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಸಮಗ್ರ ತನಿಖೆ ನಡೆಯಬೇಕು ಎಂದು ತನ್ನ ಬೇಡಿಕೆಯನ್ನು ಪುನರುಚ್ಚರಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿ ಸರ್ಕಾರವು 'ನೀಟ್–ಯುಜಿ' ಪರೀಕ್ಷೆಯಲ್ಲಿ ಯಾವುದೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಈ ಮೂಲಕ ಅದು ಹಸಿ ಸುಳ್ಳನ್ನು ಹೇಳಿದ್ದು, ಲಕ್ಷಾಂತರ ಯುವ ಜನರ ಭವಿಷ್ಯವನ್ನು ಹಾಳು ಮಾಡುತ್ತಿದೆ' ಎಂದು ಕಿಡಿಕಾರಿದ್ದಾರೆ.

'ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಟಿಸಿಲ್ಲ'

ನವದೆಹಲಿ (ಪಿಟಿಐ): '2024ನೇ ಸಾಲಿನ ನೀಟ್ ಯುಜಿ–ಪಿಜಿ ಕೋರ್ಸ್‌ಗಳ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ವೈದ್ಯಕೀಯ ಸಲಹಾ ಸಮಿತಿಯು (ಎಂಸಿಸಿ) ಇನ್ನೂ ಕೂಡ ಪ್ರಕಟಿಸಿಲ್ಲ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಶನಿವಾರ ತಿಳಿಸಿದೆ.

ಪರೀಕ್ಷೆ ಮುಗಿದ ಬಳಿಕ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಪ್ರತೀ ಕೋರ್ಸ್‌ಗೆ ಸಂಸ್ಥೆಯೊಂದಕ್ಕೆ ನೀಡಲಾಗುವ ಸೀಟುಗಳ ಸಂಖ್ಯೆ (ಸೀಟ್ ಮ್ಯಾಟ್ರಿಕ್ಸ್) ಯನ್ನು ಅಂತಿಮಗೊಳಿಸಿದ ಬಳಿಕ ಆರೋಗ್ಯ ಸೇವೆಗಳ ನಿರ್ದೇಶನಾಲಯದ ಸೂಚನೆಯಂತೆ ಎಂಸಿಸಿಯು ನೀಟ್ ಯುಜಿ- ಪಿಜಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಪ್ರತೀ ವರ್ಷವೂ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ. '2021, 2022, 2023ರಲ್ಲಿ ಯುಜಿ ಸೀಟುಗಳ ಕೌನ್ಸೆಲಿಂಗ್ ಪ್ರಕ್ರಿಯೆಯು ಕ್ರಮವಾಗಿ 2021ರ ಜನವರಿ 1, 2022ರ ಅಕ್ಟೋಬರ್ 11 ಹಾಗೂ 2023ರ ಜುಲೈ 20ರಂದು ನಡೆದಿತ್ತು' ಎಂದು ಸಚಿವಾಲಯವು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಎನ್‌ಕೌಂಟರ್: ನಾಲ್ವರು ಉಗ್ರರು ಹತ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಜಿಲ್ಲೆಯ ಎರಡು ಕಡೆಗಳಲ್ಲಿ ಶನಿವಾರ ಭದ್ರತಾ ಪಡೆ ಹಾಗೂ ಭಯೋತ್ಪಾದಕರ ನಡುವೆ ನಡೆದ ಪ್ರತ್ಯೇಕ ಗುಂಡಿನ ಚಕಮಕಿಯಲ್ಲಿ ನಾಲ್ವರು ಉಗ್ರರು ಹತರಾಗಿದ್ದು,ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ.

ಕುಲ್ಗಾಂನ ಚಿನ್ನಿಗ್ರಾಮ ಗ್ರಾಮದಲ್ಲಿ ಭಯೋತ್ಪಾದಕರು ಅಡಗಿದ್ದಾರೆ ಎಂಬ ಖಚಿತ ಮಾಹಿತಿ ಆಧರಿಸಿ ಶೋಧ ಕಾರ್ಯ ನಡೆಸಲಾಗಿತ್ತು. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ನಾಲ್ವರು ಉಗ್ರರನ್ನು ಹೊಡೆದು ಉರುಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಎನ್‌ಕೌಂಟರ್ ನಡೆದ ಜಾಗ ಡ್ರೋನ್ ದೃಶ್ಯಾವಳಿಗಳಲ್ಲಿ ನಾಲ್ವರು ಭಯೋತ್ಪಾದಕರ ಮೃತದೇಹದ ದೃಶ್ಯ ಸೆರೆಯಾಗಿದ್ದು, ಕಾರ್ಯಾಚರಣೆ ಮುಂದುವರಿದಿದೆ' ಎಂದರು.

ದಕ್ಷಿಣ ಕಾಶ್ಮೀರದ ಮೋದೆರಾ ಗಾಮ್ ಗ್ರಾಮದಲ್ಲಿ ಶೋಧ ಕಾರ್ಯ ಆರಂಭಿಸಿದ್ದರು. ಈ ವೇಳೆ ಭಾರತೀಯ ಸೈನಿಕರಯನ್ನು ಗುರಿಯಾಗಿರಿಸಿ, ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದರು. ಈ ವೇಳೆ ಸೇನೆಯ ಇಬ್ಬರು ಯೋಧರು ಹುತಾತ್ಮರಾದರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಿಎಸ್‌ಪಿ ಅಧ್ಯಕ್ಷನ ಕೊಲೆ: 8 ಶಂಕಿತರ ಬಂಧನ

ಚೆನ್ನೈ (ಪಿಟಿಐ): ತಮಿಳುನಾಡು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಆರ್ಮ್‌ಸ್ಟ್ರಾಂಗ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರು ನಿಜವಾದ ಆರೋಪಿಗಳೇ ಎಂದು ರಾಜಕೀಯ ಮುಖಂಡರು ಹಾಗೂ ಬೆಂಬಲಿಗರು ಪ್ರಶ್ನಿಸಿದ್ದಾರೆ.

ಬಹುಜನ ಸಮಾಜ ಪಕ್ಷದ ಮುಖಂಡನನ್ನು ಶುಕ್ರವಾರ ಪೆರಂಬೂರಿನ ಅವರ ನಿವಾಸದ ಬಳಿಯೇ ಆರು ಜನರ ತಂಡ ಕೊಲೆ ಮಾಡಿದೆ. ಚೆನ್ನೈನ ಕೇಂದ್ರ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಶನಿವಾರ ಮರಣೋತ್ತರ ಪರೀಕ್ಷೆ ನಡೆಯಿತು. ಈ ಸಂದರ್ಭ ಬೆಂಬಲಿಗರು ಆಸ್ಪತ್ರೆ ಹೊರಭಾಗದಲ್ಲಿ ಸಿಬಿಐ ತನಿಖೆಗೆ ಆಗ್ರಹಿಸಿ ಪ್ರತಿಭಟಿಸಿದರು. ಇದರಿಂದಾಗಿ ಸಂಚಾರ ವ್ಯವಸ್ಥೆ ಅಸ್ತವ್ಯಸ್ಥಗೊಂಡಿತು.

ಚೆನ್ನೈ ಮಹಾನಗರ ಪಾಲಿಕೆಯ ಮಾಜಿ ಸದಸ್ಯರೂ ಆಗಿದ್ದ ಆರ್ಮ್‌ಸ್ಟ್ರಾಂಗ್ ಅವರನ್ನು ಸಂಚು ರೂಪಿಸಿ ಕೊಲ್ಲಲಾಗಿದೆ. ಗುಪ್ತಚರ ವಿಭಾಗದ ವೈಫಲ್ಯವಿದು ಎಂದು ಬಿಎಸ್‌ಪಿ ಕಾರ್ಯಕರ್ತರು ದೂರಿದರು.

'ಈ ಪ್ರಕರಣದ ತನಿಖೆಗಾಗಿ 10 ತಂಡಗಳನ್ನು ರಚಿಸಲಾಗಿದೆ. ವಿಚಾರಣೆಯ ನಂತರ ಸತ್ಯಾಂಶ ತಿಳಿಯಲಿದೆ' ಎಂದು ಉತ್ತರ ವಲಯದ ಹೆಚ್ಚುವರಿ ಆಯುಕ್ತರಾದ ಅಸ್ರಾ ಗಾರ್ಗ್ ಸುದ್ದಿಗಾರರಿಗೆ ತಿಳಿಸಿದರು.

ಎವರೆಸ್ಟ್ ಪರ್ವತದಲ್ಲಿ 11 ಟನ್ ಕಸ

ಪ್ರಜಾವಾಣಿ ವಾರ್ತೆ

ಎವರೆಸ್ಟ್ ಪರ್ವತದಿಂದ ಹೊರತೆಗೆದ ಕಸವನ್ನು ಕಾರ್ಮಿಕರು ಬೇರ್ಪಡಿಸಿದರು (ಜೂನ್ 12ರ ಚಿತ್ರ) –ಎಎಫ್‌ಪಿ ಚಿತ್ರ

ಎವರೆಸ್ಟ್ ಪರ್ವತವು ಈಗ ಕಸದ ಮಡುವಿನಲ್ಲಿದೆ. 11 ಟನ್ ಕಸವನ್ನು ಈಗ ಹೊರತೆಗೆಯಲಾಗಿದೆ. ಈ ಪರ್ವತದಲ್ಲಿ ಇನ್ನೂ ಉಳಿದಿರುವ ಕಸವನ್ನು ತೆಗೆದುಹಾಕಲು ಹಲವು ವರ್ಷಗಳೇ ಬೇಕಾಗಬಹುದು ಎನ್ನಲಾಗುತ್ತಿದೆ.

ನೇಪಾಳ ಸರ್ಕಾರ ಹಾಗೂ ಹಲವು ಸ್ವಯಂ ಸೇವಾ ಸಂಸ್ಥೆಗಳು ಎವರೆಸ್ಟ್ ಪರ್ವತವನ್ನು ಸ್ವಚ್ಛ ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿವೆ. 1991ರಿಂದ 'ಸಗರ್‌ಮಾತಾ ಮಾಲಿನ್ಯ ತಡೆ ಸಮಿತಿ' ಎಂಬ ಎನ್‌ಜಿಒ ಪರ್ವತದ ಸ್ವಚ್ಛತೆಯ ಕಾರ್ಯ ಮಾಡುತ್ತಿದೆ. 2019ರಿಂದ ನೇಪಾಳ ಸರ್ಕಾರವು ಚಾರಣಿಗರ ಹಾಗೂ ಸೈನಿಕರ ತಂಡವನ್ನು ರಚಿಸಿ ಪ್ರತಿ ವರ್ಷವೂ ಸ್ವಚ್ಛತೆ ಕೈಗೊಳ್ಳುವ ಕಾರ್ಯವನ್ನು ಆರಂಭಿಸಿದೆ. ಇದರ ಭಾಗವಾಗಿ ಈ ವರ್ಷವೂ ತಂಡವನ್ನು ಕಳುಹಿಸಲಾಗಿತ್ತು.

ಚಾರಣಿಗ ಅಂಗ ಬಾಬು ಶೆರ್ಪಾ ಅವರ ನೇತೃತ್ವದಲ್ಲಿ ತಂಡವು ಈ ಬಾರಿ ಸ್ವಚ್ಛತೆ ಕಾರ್ಯ ಕೈಗೊಂಡಿದೆ. 'ಚಾರಣ ಮಾರ್ಗದ ದಕ್ಷಿಣ ಕಣಿವೆ ಕ್ಯಾಂಪ್‌ನಲ್ಲಿ ಸುಮಾರು 40–50 ಟನ್‌ಗಳಷ್ಟು ಕಸ ಇರಬಹುದು' ಎಂದು ಅಂಗ ಅಂದಾಜಿಸಿದ್ದಾರೆ. 'ಹಳೆಯ ಟೆಂಟ್‌ಗಳು, ಆಹಾರ ಪೊಟ್ಟಣಗಳು, ಬೆಂಕಿ ಹೊತ್ತಿಸಲು ಬಳಸುವ ಗ್ಯಾಸ್ ಕ್ಯಾರ್ಟ್ರಿಡ್ಜ್‌ಗಳು, ಆಮ್ಲಜನಕದ ಬಾಟಲಿಗಳು, ಹಗ್ಗಗಳನ್ನು ಚಾರಣಿಗರು ಇಲ್ಲಿಯೇ ಬಿಟ್ಟು ತೆರಳಿದ್ದಾರೆ' ಎಂದರು. ನೇಪಾಳ ಸರ್ಕಾರವು ಚಾರಣಿಗರಲ್ಲಿ ಪರಿಸರ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದೆ. ಈ ಕಾರಣದಿಂದ ಕಸದ ಪ್ರಮಾಣ ತುಸು ಕಡಿಮೆಯಾಗಿದೆ ಎನ್ನಲಾಗುತ್ತಿದೆ.

ಕಸ ವಾಪಾಸು ತರುವ ಕ್ರಮ: ಎವರೆಸ್ಟ್ ಪರ್ವತ ಏರುವ ಪ್ರತಿಯೊಬ್ಬರೂ 4 ಸಾವಿರ ಡಾಲರ್ (ಸುಮಾರು ₹3.33 ಲಕ್ಷ) ಠೇವಣಿ ಇಡಬೇಕು. ಒಂದು ವೇಳೆ ವ್ಯಕ್ತಿಯು ತಾನು ಸೃಷ್ಟಿಸಿದ ಕಸವನ್ನು ವಾಪಸ್ ತಂದರೆ, ಆತನಿಗೆ ಈ ಠೇವಣಿ ಹಣವನ್ನು ವಾಪಾಸು ಮಾಡುವ ಕ್ರಮವನ್ನು ನೇಪಾಳ ಸರ್ಕಾರ 2014ರಲ್ಲಿ ಜಾರಿಗೊಳಿಸಿತ್ತು.

1957ರಲ್ಲಿ ಬಿಸಾಡಿದ ಟಾರ್ಚ್‌ಲೈಟ್‌ಗಾಗಿ ರೀಚಾರ್ಜ್ ಮಾಡುವ ಬ್ಯಾಟರಿ ದೊರೆತಿದೆ

ಸುಶೀಲ್ ಖಾಂಡ್ವ, ಮರುಬಳಕೆ ಕಸಗಳನ್ನು ನಿರ್ವಹಿಸುವ ಸಂಸ್ಥೆ 'ಅಗ್ನಿ ವೆಂಚರ್ಸ್'ನ ಸದಸ್ಯ

ನಾಲ್ಕು ಶವ, ಒಂದು ಅಸ್ಥಿಪಂಜರ

ಕಸದ ರಾಶಿಯ ಜೊತೆಗೆ ಈ ತಂಡವು ನಾಲ್ಕು ಶವ ಹಾಗೂ ಒಂದು ಅಸ್ಥಿಪಂಜರವನ್ನು ಹೊರತೆಗೆದಿದೆ. ದಕ್ಷಿಣ ಕಣಿವೆಯಲ್ಲಿ ಒಂದು ಮೃತದೇಹವನ್ನು ಹೊರತೆಗೆಯಲು ಎರಡು ದಿನ ಬೇಕಾಯಿತು. ಶವವು ನಿಂತ ಸ್ಥಿತಿಯಲ್ಲಿತ್ತು ಮತ್ತು ಅದು ಹಿಮಗಡ್ಡೆಯಂತಾಗಿತ್ತು. ಇನ್ನೊಂದು ಮೃತದೇಹವು 8,400 ಮೀಟರ್ ಎತ್ತರದಲ್ಲಿ ದೊರಕಿತು. ಈ ಶವವನ್ನು ಹೊರತೆಗೆಯಲು 18 ತಾಸುಗಳು ಬೇಕಾದವು.

ಪರ್ವತದ ಆಗ್ನೇಯ ಕಣಿವೆ ಚಾರಣ ಮಾರ್ಗ

ಕ್ಯಾಂಪ್ 4 (ದಕ್ಷಿಣ ಕಣಿವೆ)
8,000 ಮೀಟರ್ ಎತ್ತರ
ಎವರೆಸ್ಟ್ ಚಾರಣದ ಕೊನೆಯ ಕ್ಯಾಂಪ್ ಇರುವ ಪ್ರದೇಶ. ಇಲ್ಲಿ ಆಮ್ಲಜನಕದ ಪ್ರಮಾಣವು ಕುಸಿಯುತ್ತದೆ. ತೀವ್ರವಾಗಿ ಗಾಳಿ ಬೀಸುತ್ತಿರುತ್ತದೆ. ಉಷ್ಣಾಂಶವು ಕುಸಿಯ ತೊಡಗುತ್ತದೆ. ಇಲ್ಲಿ ಕೃತಕ ಆಮ್ಲಜನಕದ ಅಗತ್ಯ ಇರುತ್ತದೆ.

600 ಮಾರ್ಚ್–ಮೇ ತಿಂಗಳಲ್ಲಿ ದಿನವೊಂದಕ್ಕೆ ಪರ್ವತ ಏರಲು ಬರುವ ಚಾರಣಿಗರ ಸಂಖ್ಯೆ

8 ಕೆ.ಜಿ ಚಾರಣದ ಅವಧಿಯಲ್ಲಿ ವ್ಯಕ್ತಿಯೊಬ್ಬ ಸೃಷ್ಟಿಸುವ ಕಸದ ತೂಕ

ಆಧಾರ: ಎಪಿ, ನ್ಯಾಷನಲ್ ಜಿಯೊಗ್ರಫಿಕ್, ನೇಪಾಳ ಪ್ರವಾಸೋದ್ಯಮ ಇಲಾಖೆ ವೆಬ್‌ಸೈಟ್, ರಾಯಿಟರ್ಸ್

ಮಂಜು ಗಡ್ಡೆ, ಹವಾಮಾನ ವೈಪರೀತ್ಯ ಮತ್ತು ಆರೋಗ್ಯ

'ಈಗ ದೊರಕಿರುವ ಕಸವು ಈ ಹಿಂದೆ ಚಾರಣ ನಡೆಸಿದವರು ಅಲ್ಲಿ ಬಿಟ್ಟುಬಂದಿರುವ ಕಸ' ಎಂದು ಚಾರಣಿಗ ಅಂಗ ಹೇಳಿದ್ದಾರೆ. 1957ರ ಕಸವು ಈಗ ಹೇಗೆ ದೊರೆಯಿತು ಎಂಬ ಪ್ರಶ್ನೆಯು ಮೂಡುವುದು ಸಹಜ. ಇದಕ್ಕೆ ಕಾರಣ ಹವಾಮಾನ ವೈಪರೀತ್ಯ. ಉಷ್ಣಾಂಶ ಏರಿಕೆಯಿಂದಾಗಿ ಹಿಮ ಕರಗುತ್ತಿದೆ. ಈ ಕಾರಣದಿಂದಾಗಿ ಹಿಮದ ಒಳಗೆ ಹಲವು ದಶಕಗಳಿಂದ ಹುದುಗಿದ್ದ ಶವಗಳು, ಕಸಗಳು ಈಗ ಕಾಣುತ್ತಿವೆ. ಇಂಥ ಕಸಗಳು ಪರ್ವತದ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಹಾಳು ಮಾಡುತ್ತಿವೆ. ಚಾರಣವು ಹಲವು ದಿನಗಳವರೆಗೆ ನಡೆಯುವುದರಿಂದ, ಮಾನವ ಮಲವು ಕಸದ ರಾಶಿಗಳೊಂದಿಗೆ ಸೇರುತ್ತಿದೆ. ಒಂದೆಡೆ ಹಿಮ ಕರಗುತ್ತಿದ್ದರೆ, ಈ ತ್ಯಾಜ್ಯಗಳು ಅವುಗಳೊಂದಿಗೆ ನದಿ ಸೇರುತ್ತಿವೆ. ಇದು ಸ್ಥಳೀಯ ಜಲಮೂಲಕ್ಕೆ ತೊಡಕಾಗಿದ್ದು, ಹಲವು ರೋಗಗಳಿಗೆ ಮೂಲವಾಗಿದೆ.

ಅಸ್ಸಾಂ ಪ್ರವಾಹ: 24.50 ಲಕ್ಷ ಜನ ಬಾಧಿತರು

ಅಸ್ಸಾಂನ ಪ್ರವಾಹ ಪೀಡಿತ ಮೊರಿಗಾಂವ್ ಜಿಲ್ಲೆಯ ಬಲಿಮುಕ್ ಗ್ರಾಮದ ಜನರು ದೋಣಿ ಮೂಲಕ ಶನಿವಾರ ಸುರಕ್ಷಿತ ಪ್ರದೇಶದತ್ತ ಸಾಗಿದರು –ಪಿಟಿಐ ಚಿತ್ರ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಶನಿವಾರವೂ ಗಂಭೀರವಾಗಿದ್ದು, 30 ಜಿಲ್ಲೆಗಳಲ್ಲಿ 24.50 ಲಕ್ಷಕ್ಕೂ ಹೆಚ್ಚು ಜನರು ಬಾಧಿತರಾಗಿದ್ದಾರೆ. ರಾಜ್ಯದ ಹಲವೆಡೆ ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಈ ವರ್ಷ ಪ್ರವಾಹ, ಭೂಕುಸಿತ, ಬಿರುಗಾಳಿಗಳಲ್ಲಿ ಮೃತಪಟ್ಟವರ ಸಂಖ್ಯೆ 64ಕ್ಕೆ ಏರಿಕೆಯಾಗಿದೆ. ಈ ಪೈಕಿ ಪ್ರವಾಹದಿಂದ 52 ಮಂದಿ ಮೃತಪಟ್ಟಿದ್ದರೆ, ಭೂಕುಸಿತ ಮತ್ತು ಬಿರುಗಾಳಿಯಿಂದ 12 ಜನರು ಅಸುನೀಗಿದ್ದಾರೆ ಎಂದು ಅದು ವಿವರಿಸಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಶುಕ್ರವಾರ ದಿಬ್ರುಗಢ ಜಿಲ್ಲೆಯ ವಿವಿಧೆಡೆ ಪ್ರವಾಹ ಪರಿಸ್ಥಿತಿಯನ್ನು ಪರಿಶೀಲಿಸಿದರು. ಅಲ್ಲಿಂದ ಹಿಂದಿರುಗಿದ ಬಳಿಕ ತಡರಾತ್ರಿ ಅವರು ಅಧಿಕಾರಿಗಳ ಜತೆ ಪ್ರವಾಹ ಪರಿಸ್ಥಿತಿ ಕುರಿತು ಪರಿಶೀಲನಾ ಸಭೆ ನಡೆಸಿದರು.

ಸುಧಾರಣಾವಾದಿ ನಾಯಕನಿಗೆ ಒಲಿದ ಗೆಲುವು

ಇರಾನ್: ಪೆಜೆಶ್ಕಿಯಾನ್ ಅಧ್ಯಕ್ಷ

ಮುಖ್ಯಾಂಶಗಳು
- 1.6 ಕೋಟಿಗೂ ಅಧಿಕ ಮತಗಳನ್ನು ಪಡೆದ ಪೆಜೆಶ್ಕಿಯಾನ್
- ಸಂಪ್ರದಾಯವಾದಿ ಅಭ್ಯರ್ಥಿ ಜಲೀಲಿಗೆ ಸೋಲು
- ಶೇ 49.8ರಷ್ಟು ಮತದಾನ

ಮಸೂದ್ ಪೆಜೆಶ್ಕಿಯಾನ್

ಟೆಹರಾನ್/ದುಬೈ (ಎಎಫ್‌ಪಿ/ರಾಯಿಟರ್ಸ್): ಇರಾನ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸುಧಾರಣಾವಾದಿ ನಾಯಕ ಮಸೂದ್ ಪೆಜೆಶ್ಕಿಯಾನ್ ಅವರು ಗೆಲುವು ಸಾಧಿಸಿದ್ದಾರೆ ಎಂದು ಒಳಾಡಳಿತ ಸಚಿವಾಲಯ ತಿಳಿಸಿದೆ.

ಶುಕ್ರವಾರ ನಡೆದ ಚುನಾವಣೆಯಲ್ಲಿ 69 ವರ್ಷದ ಪೆಜೆಶ್ಕಿಯಾನ್ ಅವರು ಸಂಪ್ರದಾಯವಾದಿ ಸಯೀದ್ ಜಲೀಲಿ ಅವರನ್ನು ಮಣಿಸಿದ್ದಾರೆ. 'ಪೆಜೆಶ್ಕಿಯಾನ್ ಅವರು 1.6 ಕೋಟಿಗೂ ಅಧಿಕ ಮತಗಳನ್ನು ಪಡೆದರೆ, ಜಲೀಲಿ ಅವರು ಸುಮಾರು 1.3 ಕೋಟಿ ಮತಗಳನ್ನು ಗಳಿಸಿದರು. 3 ಕೋಟಿಗೂ ಅಧಿಕ ಮಂದಿ ಮತದಾನ ಮಾಡಿದ್ದಾರೆ' ಎಂದು ಚುನಾವಣಾ ಆಯೋಗದ ವಕ್ತಾರ ಮೊಹ್ಸಿನ್ ಇಸ್ಲಾಮಿ ತಿಳಿಸಿದರು.

ಶೇ 49.8ರಷ್ಟು ಮತದಾನ ನಡೆದಿದ್ದು, 6 ಲಕ್ಷಕ್ಕೂ ಅಧಿಕ ಮತಗಳು ಅಸಿಂಧುವಾಗಿವೆ ಎಂದು ಅವರು ಮಾಹಿತಿ ನೀಡಿದರು.

'ಇರಾನ್‌ನ ಆತ್ಮೀಯ ಜನರೇ, ಚುನಾವಣೆ ಮುಗಿದಿದೆ ಮತ್ತು ನಾವು ಒಟ್ಟಾಗಿ ಕೆಲಸ ಮಾಡುವ ದಿನ ಪ್ರಾರಂಭವಾಗಿದೆ. ಕಠಿಣ ಹಾದಿ ನಮ್ಮ ಮುಂದಿದ್ದು, ನಿಮ್ಮೆಲ್ಲರ ಸಹಕಾರವಿದ್ದರೆ ಮಾತ್ರ ಈ ಹಾದಿ ಸುಗಮವಾಗಿ ಬದಲಾಗಲಿದೆ' ಎಂದು ಗೆಲುವಿನ ಬೆನ್ನಲ್ಲೇ ಪೆಜೆಶ್ಕಿಯಾನ್ ಅವರು 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

'ನಾನು ಎಲ್ಲರತ್ತಲೂ ಸ್ನೇಹದ ಹಸ್ತ ಚಾಚುತ್ತೇನೆ. ನಾನು ನಿಮ್ಮನ್ನು ಅರ್ಧ ಹಾದಿಯಲ್ಲಿ ಕೈಬಿಡುವುದಿಲ್ಲ, ನೀವು ಕೂಡಾ ನನ್ನ ಕೈಬಿಡಬೇಡಿ' ಎಂದು ಜನರಿಗೆ ಮನವಿ ಮಾಡಿದರು.

ಇರಾನ್‌ನ ಅಧ್ಯಕ್ಷರಾಗಿದ್ದ ಇಬ್ರಾಹಿಂ ರೈಸಿ ಅವರು ಮೇ ತಿಂಗಳಲ್ಲಿ ನಡೆದಿದ್ದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿದ್ದರು. ಅವರ ಉತ್ತರಾಧಿಕಾರಿಯ ಆಯ್ಕೆಗೆ ಚುನಾವಣೆ ನಡೆದಿದೆ.

ಕಳೆದ ಶುಕ್ರವಾರ (ಜೂನ್ 28) ನಡೆದಿದ್ದ ಮತದಾನದಲ್ಲಿ ಕಣದಲ್ಲಿದ್ದ ನಾಲ್ವರು ಅಭ್ಯರ್ಥಿಗಳಲ್ಲಿ ಯಾರಿಗೂ ಶೇ 50ಕ್ಕಿಂತ ಹೆಚ್ಚು ಮತಗಳು ಲಭಿಸಿರಲಿಲ್ಲ. ಇದರಿಂದ ಮೊದಲ ಎರಡು ಸ್ಥಾನ ಪಡೆದ ಅಭ್ಯರ್ಥಿಗಳಲ್ಲಿ (ಪೆಜೆಶ್ಕಿಯಾನ್ ಮತ್ತು ಜಲೀಲಿ) ಒಬ್ಬರ ಆಯ್ಕೆಗೆ ಒಂದು ವಾರದ ಬಳಿಕ (ಜುಲೈ 5) ಮತ್ತೊಮ್ಮೆ ಮತದಾನ ನಡೆದಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಸೇರಿದಂತೆ ಹಲವು ದೇಶಗಳ ನಾಯಕರು ಪೆಜೆಶ್ಕಿಯಾನ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಬದಲಾಗುವುದೇ ವಿದೇಶಾಂಗ ನೀತಿ?

ಪೆಜೆಶ್ಕಿಯಾನ್‌ನ ಅವರ ಗೆಲುವು ಪಾಶ್ಚಿಮಾತ್ಯ ದೇಶಗಳೊಂದಿಗಿನ ಇರಾನ್‌ನ ಸಂಬಂಧ ಉತ್ತಮಗೊಳ್ಳುವ ನಿರೀಕ್ಷೆ ಮೂಡಿಸಿದೆ. ಅದೇ ರೀತಿ, ಪರಮಾಣು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಮೆರಿಕ ಸೇರಿದಂತೆ ಇತರ ದೇಶಗಳ ಜತೆಗಿನ 'ಸಂಘರ್ಷ' ತಣ್ಣಗಾಗುವ ಭರವಸೆ ಮೂಡಿದೆ.

ಆದರೆ ಇರಾನ್‌ನ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇಮಿ ಅವರಿಗೆ ಮಾತ್ರ ಇರುವುದರಿಂದ, ಪೆಜೆಶ್ಕಿಯಾನ್ ಅವರಿಂದ ಭಾರಿ ಬದಲಾವಣೆಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ವಿಶ್ಲೇಷಿಸಲಾಗಿದೆ.

ಭಾರತ ಮೂಲದ ಲೀಸಾ, ಈಗ ಸಚಿವೆ

ಲಂಡನ್ (ಪಿಟಿಐ): ಲೇಬರ್ ಪಕ್ಷದ ಲೀಸಾ ನಂದಿ ಅವರ ಕುಟುಂಬದ ಬೇರುಗಳು ಭಾರತದ ಕೋಲ್ಕತ್ತದಲ್ಲಿವೆ. 'ವೀಗನ್' ಕ್ಷೇತ್ರದಿಂದ 44 ವರ್ಷದ ಲೀಸಾ ಮರು ಆಯ್ಕೆ ಆಗಿದ್ದಾರೆ. ಪ್ರಧಾನಿ ಕೀರ್ ಸ್ಟಾರ್ಮರ್ ಅವರು ತಮ್ಮ ಸಂಪುಟದಲ್ಲಿ 11 ಮಹಿಳೆಯರಿಗೆ ಸಚಿವ ಸ್ಥಾನ ನೀಡಿದ್ದು, ಲೀಸಾ ಅವರು 'ಸಂಸ್ಕೃತಿ, ಮಾಧ್ಯಮ ಹಾಗೂ ಕ್ರೀಡಾ' ಸಚಿವರಾಗಿದ್ದಾರೆ.

'ಸಚಿವ ಸ್ಥಾನ ಸಿಗುತ್ತದೆ ಎಂಬುದನ್ನು ಊಹಿಸಿಯೂ ಇರಲಿಲ್ಲ' ಎಂದು ಲೀಸಾ ಹೇಳಿದ್ದಾರೆ. ಲೀಸಾ ಅವರ ತಂದೆ, ಪ್ರಾಧ್ಯಾಪಕರಾಗಿದ್ದರು. ಜೊತೆಗೆ, ಬ್ರಿಟನ್‌ನಲ್ಲಿನ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಡಿದವರು. ಲೀಸಾ ಅವರ ಮುತ್ತಾತ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ತಾಯಿ ಲೂಸಿ ಬೇರ್ಸ್ ಅವರು ಬ್ರಿಟನ್‌ನವರಾಗಿದ್ದಾರೆ.

ಕನಿಷ್ಕ ಗೆಲುವು: ಬಿಹಾರದಲ್ಲಿ ಸಂಭ್ರಮ

ಮುಜಫರ್‌ಪುರ (ಬಿಹಾರ) (ಪಿಟಿಐ): ಮುಜಫರ್‌ಪುರದ ಜನತೆ ಇಲ್ಲಿನ ಮಣ್ಣಿನ ಮಗ ಕನಿಷ್ಕ ನಾರಾಯಣ್ ಅವರ ಯಶಸ್ಸಿಗೆ ಸಂಭ್ರಮಿಸುತ್ತಿದ್ದಾರೆ. 33 ವರ್ಷದ ಕನಿಷ್ಕ ಅವರು ಲೇಬರ್ ಪಕ್ಷದಿಂದ 'ವೇಲ್ ಆಫ್ ಗ್ಲಮೋರ್ಗನ್' ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಈ ಬಗ್ಗೆ ಪ್ರತಿಕ್ರಿತಿಸಿರುವ ಕೃಷ್ಣ ಕಾನೂನು ಕಾಲೇಜಿನ ನಿರ್ದೇಶಕ ಜಯಂತ್ ಕುಮಾರ್, 'ನಮ್ಮ ತಂದೆ ಕೃಷ್ಣ ಕಾನೂನು ಕಾಲೇಜನ್ನು ಸ್ಥಾಪಿಸಿದವರು. ನಾವು ವೈಶಾಲಿ ಜಿಲ್ಲೆಯ ಮೂಲದವರು' ಎಂದರು. ಕನಿಷ್ಕ ಅವರು ಜಯಂತ್ ಅವರ ಸಹೋದರನ ಮಗ. 'ಕನಿಷ್ಕ ಪೋಷಕರು ಬ್ರಿಟನ್‌ನಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾರೆ. ಕನಿಷ್ಕ ಅವರಿಗೆ 12 ವರ್ಷ ಇರುವಾಗ ಅವರ ಪೋಷಕರು ಕಾರ್ಡಿಫ್ ನಗರಕ್ಕೆ ತೆರಳಿದರು' ಎಂದರು ಜಯಂತ್.

'ಎಫ್‌ಟಿಎ ಅಂತಿಮಗೊಳಿಸಲು ಸಿದ್ಧ'

ಲಂಡನ್ (ಪಿಟಿಐ): ಎರಡೂ ದೇಶಗಳಿಗೆ ಲಾಭದಾಯಕವಾದ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ಅಂತಿಮಗೊಳಿಸಲು ಸಿದ್ಧವಿರುವುದಾಗಿ ಬ್ರಿಟನ್‌ನ ನೂತನ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭರವಸೆ ನೀಡಿದ್ದಾರೆ ಎಂದು ಬ್ರಿಟನ್ ಪ್ರಧಾನಿಯ ವಕ್ತಾರರು ಹೇಳಿದ್ದಾರೆ.

ಎಫ್‌ಟಿಎ ಒಪ್ಪಂದಕ್ಕೆ ಅಂತಿಮ ರೂಪ ನೀಡಲು ಭಾರತ ಮತ್ತು ಬ್ರಿಟನ್ ಕಳೆದ ಎರಡು ವರ್ಷಗಳಿಂದ ಮಾತುಕತೆ ನಡೆಸುತ್ತಿವೆ. ಆದರೆ ಎರಡೂ ದೇಶಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆದ ಮಾತುಕತೆಯು 14ನೇ ಸುತ್ತಿನ ಬಳಿಕ ಸ್ಥಗಿತಗೊಂಡಿತ್ತು.

ಸ್ಟಾರ್ಮರ್ ಅವರು ಶನಿವಾರ ಬೆಳಿಗ್ಗೆ ಮೋದಿ ಜತೆ ಮಾತುಕತೆ ನಡೆಸಿದ ವೇಳೆ ಈ ಭರವಸೆ ನೀಡಿದ್ದಾರೆ.

'ಮಾತುಕತೆ ಸಂದರ್ಭ ಎಫ್‌ಟಿಎ ಬಗ್ಗೆಯೂ ಚರ್ಚೆ ನಡೆಯಿತು. ಒಪ್ಪಂದಕ್ಕೆ ಶೀಘ್ರದಲ್ಲೇ ಅಂತಿಮ ರೂಪ ನೀಡಲು ಸಿದ್ಧ ಎಂದು ಸ್ಟಾರ್ಮರ್ ಹೇಳಿದರು. ಈ ಸಂಬಂಧ ಮುಂದಿನ ಸುತ್ತಿನ ಮಾತುಕತೆ ಬೇಗನೇ ನಡೆಸುವ ವಿಶ್ವಾಸವನ್ನು ಉಭಯ ನಾಯಕರು ವ್ಯಕ್ತಪಡಿಸಿದರು' ಎಂದು ವಕ್ತಾರರು ತಿಳಿಸಿದರು.

ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ

ನವದೆಹಲಿ (ಪಿಟಿಐ): ಭ್ರೂಣದ ಬೆಳವಣಿಗೆಯಲ್ಲಿ ನ್ಯೂನತೆ ಇರುವುದರಿಂದ, 31 ವಾರಗಳ ಗರ್ಭಿಣಿಗೆ ಗರ್ಭಪಾತ ಮಾಡಿಸಿಕೊಳ್ಳಲು ದೆಹಲಿ ಹೈಕೋರ್ಟ್ ಅನುಮತಿ ನೀಡಿದೆ.

ಭ್ರೂಣದ ನರಗಳ ಬೆಳವಣಿಗೆಯಲ್ಲಿ ತೊಂದರೆ ಕಾಣಿಸಿರುವುದರಿಂದ ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ಕೋರಿ 31 ವರ್ಷದ ಮಹಿಳೆಯೊಬ್ಬರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜೀವ್ ನರೂಲಾ ಅವರು ಶನಿವಾರ ತೀರ್ಪು ನೀಡಿದರು.

ಭ್ರೂಣದ ಬೆಳವಣಿಗೆಯಲ್ಲಿ ತೀವ್ರ ತೆರನಾದ ಅಸಹಜತೆಗಳಿದ್ದರೆ, ಅಂತಹ ಗರ್ಭಾವಸ್ಥೆಯನ್ನು ಮುಂದುವರಿಸುವಂತೆ ಕಾನೂನು ಬಲವಂತಪಡಿಸುವುದಿಲ್ಲ ಎಂದು ಹೈಕೋರ್ಟ್ ಅದೇಶದಲ್ಲಿ ಹೇಳಿದೆ.

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನೀಡಿದ ವೈದ್ಯಕೀಯ ವರದಿಯನ್ನು ಉಲ್ಲೇಖಿಸಿದ ಪೀಠ, ನರ ಸಂಬಂಧಿ ನ್ಯೂನತೆಗಳೊಂದಿಗೆ ಮಗು ಜನಿಸಿದರೆ, ಮುಂದೆ ಆರೋಗ್ಯಕ್ಕೆ ಸಂಬಂಧಿಸಿದ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತದೆ ಎಂದು ತಿಳಿಸಿತು.

ಡೆಂಗಿ: ವೈದ್ಯಕೀಯ ತುರ್ತು ಪರಿಸ್ಥಿತಿ ಘೋಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲೆಡೆ ವೇಗವಾಗಿ ಹರಡುತ್ತಿರುವ ಡೆಂಗಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಕೋವಿಡ್ ಮಾದರಿಯಲ್ಲಿ ಚಿಕಿತ್ಸಾ ವ್ಯವಸ್ಥೆ ಕಲ್ಪಿಸಬೇಕು. ವೈದ್ಯಕೀಯ ತುರ್ತು ಪರಿಸ್ಥಿತಿ ಘೋಷಿಸಬೇಕು ಎಂದು ಬಿಜೆಪಿ ಸಂಸದ ಡಾ.ಸಿ.ಎನ್. ಮಂಜುನಾಥ್ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡೆಂಗಿ ನಿಯಂತ್ರಣಕ್ಕೆ ನಿಖರವಾದ ಚಿಕಿತ್ಸೆ ಇಲ್ಲ. ಸೊಳ್ಳೆಗಳ ನಿಯಂತ್ರಣವೇ ಕಾಯಿಲೆ ಹರಡುವುದನ್ನು ತಡೆಯಲು ಇರುವ ಪ್ರಮುಖ ಅಂಶ. ಸೊಳ್ಳೆಗಳನ್ನು ನಿಯಂತ್ರಿಸಿದರೆ ಚಿಕುನ್ ಗುನ್ಯಾ, ಮಲೇರಿಯಾ ಸೇರಿದಂತೆ ಹಲವು ಕಾಯಿಲೆ ತಡೆಯಬಹುದು ಎಂದರು.

ಸರ್ಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚು ಹಣ ಪಡೆಯುವ ಆಸ್ಪತ್ರೆ, ಘಟಕ, ಪ್ರಯೋಗಾಲಯಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅರ್ಧಕ್ಕೆ ನಿಂತ ಕಾಮಗಾರಿ , ಅಂಡರ್ ಪಾಸ್, ಅಗೆದ ರಸ್ತೆಗಳಲ್ಲಿ ಮಳೆ ಬಂದಾಗ ನೀರು ನಿಲ್ಲುತ್ತದೆ. ಇದರಿಂದ ಸೊಳ್ಳೆ ನಿಯಂತ್ರಣ ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

ಶಾಸಕರಾಗಿ ಕ್ಷೇತ್ರದಲ್ಲಿ ಎಚ್‌ಡಿಕೆ ಏನೂ ಕೆಲಸ ಮಾಡಿಲ್ಲ – ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ

‘ಚನ್ನಪಟ್ಟಣ: 10 ಸಾವಿರ ಅರ್ಜಿ ಸ್ವೀಕಾರ’

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ‘ಎಚ್.ಡಿ. ಕುಮಾರಸ್ವಾಮಿ ಶಾಸಕರಾಗಿದ್ದ ಚನ್ನಪಟ್ಟಣ ಕ್ಷೇತ್ರದಲ್ಲಿ ನಡೆಸಿದ ಜನತಾದರ್ಶನ ದಲ್ಲಿ 10 ಸಾವಿರ ಅರ್ಜಿ ಬಂದಿದೆ. ಅರ್ಜಿ ಕೊಟ್ಟವರ ಮೊಬೈಲ್ ಸಂಖ್ಯೆಯೂ ಇದೆ. ಎಲ್ಲ ಅರ್ಜಿಗಳನ್ನೆಲ್ಲಾ ಕೌಂಟರ್‌ನಲ್ಲಿ ಸ್ವೀಕರಿಸಿದ್ದೇವೆ’ ಎಂದು ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

‘ರಾಜ್ಯ ಸರ್ಕಾರ ಏನೂ ಕೆಲಸ ಮಾಡದ ಕಾರಣ ಮಂಡ್ಯದ ಜನತಾ ದರ್ಶನದಲ್ಲಿ ನನಗೆ ಮೂರೂವರೆ ಸಾವಿರ ಅರ್ಜಿ ಬಂದಿದೆ’ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಅವರು ಈ ಮೂಲಕ ತಿರುಗೇಟು ನೀಡಿದರು.

‘ಚನ್ನಪಟ್ಟಣ ಕ್ಷೇತ್ರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರೂ ಏನೂ ಕೆಲಸ ಮಾಡಿಲ್ಲ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷ್ಯ ಬೇಕೇ? ಕುಮಾರಸ್ವಾಮಿ ಮಾತ್ರ ರಾಜಕಾರಣ ಮಾಡುತ್ತಾರಾ? ನಮಗೂ ರಾಜಕಾರಣ ಮಾಡಲು ಬರುತ್ತದೆ. ಆದರೆ, ನಮಗೆ ರಾಜಕಾರಣ ಮುಖ್ಯ ಅಲ್ಲ, ಜನರ ಸೇವೆ ಮಾಡಬೇಕು ಎಂಬುದು ಮುಖ್ಯ’ ಎಂದರು.

ಮುಡಾ ಅಕ್ರಮದ ಕುರಿತು ಅವರು, ‘ಮುಡಾದಲ್ಲಿ ಆಸ್ತಿ ಕಳೆದುಕೊಂಡಿರುವವರು ಅರ್ಜಿ ಸಲ್ಲಿಸಿ ಪರಿಹಾರ ಪಡೆದಿದ್ದಾರೆ. ನಿಯಮದ ಪ್ರಕಾರ ನಿವೇಶನ ಹಂಚಿಕೆಯಾಗಿದೆ. ಅದೇ ಪ್ರಕಾರ ಮುಡಾದವರು ಪರಿಹಾರ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಕೂಡ ಪ್ರಮಾಣಪತ್ರದಲ್ಲಿ ತಮ್ಮ ಪತ್ನಿಗೆ ಈ ರೀತಿ ಆಸ್ತಿ ಬಂದಿದೆ ಎಂಬ ಮಾಹಿತಿ ಕೊಟ್ಟಿದ್ದಾರೆ’ ಎಂದರು.

‘ಬಿಡಿಎಯಲ್ಲಿ 60:40 ಅನುಪಾತದಲ್ಲಿ ಪರಿಹಾರ ಕೊಡಲಾಗುತ್ತದೆ. ಮುಡಾದಲ್ಲಿ 50:50 ಅನುಪಾತದಲ್ಲಿ ನಿವೇಶನ ಪರಿಹಾರ ಕೊಡಲು ತೀರ್ಮಾನವಾಗಿದೆ. ಅದರ ಪ್ರಕಾರ ಕೊಟ್ಟಿದ್ದಾರೆ. ಬಿಜೆಪಿ, ಜೆಡಿಎಸ್‌ನವರು ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ’ ಎಂದರು.

ಚನ್ನಪಟ್ಟಣಕ್ಕೆ ಅಚ್ಚರಿಯ ಅಭ್ಯರ್ಥಿ: ಎಚ್‌ಡಿಕೆ

ಬೆಂಗಳೂರು: ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಬಿಜೆಪಿ ನಾಯಕರ ಜತೆ ಚರ್ಚಿಸಿ, ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರ ಸಂಸದ ಡಾ.ಸಿ. ಎನ್.ಮಂಜುನಾಥ್ ಅವರ ಪತ್ನಿ, ತಮ್ಮ ಸಹೋದರಿ ಅನಸೂಯಾ ಅವರ ಸ್ಪರ್ಧೆ ಕುರಿತ ವರದಿಗಳ ಬಗ್ಗೆ ಸ್ಪಷ್ಟನೆ ನೀಡಿದ ಅವರು, ‘ಮೊದಲು ನಿಖಿಲ್ ಹೆಸರಿತ್ತು. ಈಗ ಅನಸೂಯಾ ಹೆಸರನ್ನು ಮುನ್ನೆಲೆಗೆ ತಂದಿದ್ದಾರೆ. ಆದರೆ, ಚನ್ನಪಟ್ಟಣದ ಜೆಡಿಎಸ್ ಮುಖಂಡರು, ಕಾರ್ಯಕರ್ತರ ಅಭಿಪ್ರಾಯ ಪಡೆದು ಅಂತಿಮ ನಿರ್ಧಾರ ಮಾಡಲಾಗುವುದು’ ಎಂದರು.

‘ಕುಮಾರಸ್ವಾಮಿ ಗ್ರೀನ್ ಸಿಗ್ನಲ್ ನೀಡಿದರೆ ಸ್ಪರ್ಧೆಗೆ ಸಿದ್ಧ’ ಎಂಬ ಬಿಜೆಪಿಯ ಸಿ.ಪಿ.ಯೋಗೀಶ್ವರ್ ಹೇಳಿಕೆಗೆ ಅವರು, ‘ಬಿಜೆಪಿಯ ಕೇಂದ್ರ, ರಾಜ್ಯದ ನಾಯಕರು ಈ ಬಗ್ಗೆ ನನ್ನ ಜೊತೆಗೆ ಚರ್ಚಿಸಿಲ್ಲ. ಸ್ವಂತ ಬಲ, ಕಾರ್ಯಕರ್ತರ ಪರಿಶ್ರಮದಿಂದ ಎರಡು ಬಾರಿ ಗೆದ್ದಿದ್ದೇನೆ. ಅದು ಜೆಡಿಎಸ್ ಕ್ಷೇತ್ರವಾಗಿದೆ. ಕಾರ್ಯಕರ್ತರ ಜೊತೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳುವೆ’ ಎಂದರು.

ಕಾರ್ಯಕರ್ತರು, ಪದಾಧಿಕಾರಿಗಳ ಜೊತೆ 13ರಂದು ಮುಖ್ಯಮಂತ್ರಿ ಭೇಟಿ

‘ಕೆಪಿಸಿಸಿ ಪದಾಧಿಕಾರಿಗಳು, ಕಾರ್ಯಕರ್ತರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 13ರಂದು ಭೇಟಿಯಾಗಲಿದ್ದಾರೆ. ಶೀಘ್ರದಲ್ಲೇ ದಿನಕ್ಕೆ ಇಬ್ಬರು ಸಚಿವರು ಪಕ್ಷದ ಕಾರ್ಯಕರ್ತರನ್ನು ಭೇಟಿಯಾಗುವ ಕಾರ್ಯಕ್ರಮ ರೂಪಿಸಲಾಗುವುದು. ಯಾವ ಸಚಿವರು, ಯಾವಾಗ ಲಭ್ಯ ಇರಲಿದ್ದಾರೆ ಎನ್ನುವ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.

‘ಪಕ್ಷವನ್ನು ಅಧಿಕಾರಕ್ಕೆ ತಂದಂತಹ ಕಾರ್ಯಕರ್ತರ ಸಮಸ್ಯೆಗಳನ್ನು ಬಗೆಹರಿಸುವುದು ನಮ್ಮ ಕರ್ತವ್ಯ. ಹಲವರು ತಮ್ಮ ಕ್ಷೇತ್ರದ ಜನರ ಸಮಸ್ಯೆ, ಜಮೀನು ಖಾತೆ, ವೈಯಕ್ತಿಕ ಕುಂದುಕೊರತೆಗಳು, ಪಕ್ಷದಲ್ಲಿ ಹುದ್ದೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದಾರೆ. ನಮ್ಮ ವ್ಯಾಪ್ತಿಯಲ್ಲಿ ಬಗೆಹರಿಸುವಂತಹ ಸಮಸ್ಯೆಗಳನ್ನು ಶೀಘ್ರ ವಿಲೇವಾರಿ ಮಾಡಲಾಗುವುದು. ಆಯಾ ಇಲಾಖೆಗಳಿಗೆ ಕಳಿಸುವ ವ್ಯವಸ್ಥೆಯನ್ನೂ ಮಾಡಲಾಗುವುದು’ ಎಂದರು.

ಸುದ್ದಿ 2 ನಿಮಿಷ

ಉಪ ಚುನಾವಣೆ: ಬಿಜೆಪಿ ಉಸ್ತುವಾರಿಗಳ ನೇಮಕ

ಬೆಂಗಳೂರು: ವಿಧಾನಸಭೆ ಮತ್ತು ವಿಧಾನ ಪರಿಷತ್ ಉಪ ಚುನಾವಣೆಗಳಿಗೆ ಕ್ಷೇತ್ರವಾರು ಉಸ್ತುವಾರಿಗಳನ್ನು ಪಕ್ಷದ ರಾಜ್ಯಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇಮಿಸಿದ್ದಾರೆ.

ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಪಕ್ಷದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಶಾಸಕರಾದ ಅರವಿಂದ್ ಬೆಲ್ಲದ್, ಮಹೇಶ್ ಟೆಂಗಿನಕಾಯಿ, ಸಂಡೂರಿಗೆ ಸಂಸದ ಗೋವಿಂದ ಕಾರಜೋಳ, ಶಾಸಕ ವಿ. ಸುನೀಲ್‌ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಕೆ.ಎಸ್. ನವೀನ್, ಚನ್ನಪಟ್ಟಣಕ್ಕೆ ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಂ. ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯ ಎಚ್. ಎಸ್. ಗೋಪಿನಾಥ ರೆಡ್ಡಿ, ಪಕ್ಷದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ಅವರನ್ನು ನೇಮಿಸಲಾಗಿದೆ.

ಕೋಟ ಶ್ರೀನಿವಾಸ ಪೂಜಾರಿ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನ ಪರಿಷತ್ ಸ್ಥಾನಕ್ಕೆ (ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆ) ನಡೆಯುವ ಉಪ ಚುನಾವಣೆಗೆ ಸಂಸದರಾದ ಬಸವರಾಜ ಬೊಮ್ಮಾಯಿ, ಕೋಟ ಶ್ರೀನಿವಾಸ ಪೂಜಾರಿ, ಬ್ರಿಜೇಶ್ ಚೌಟ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅವರು ಉಸ್ತುವಾರಿಗಳಾಗಿದ್ದಾರೆ.

‘ಕಾಶ್ಮೀರಕ್ಕೆ ಪ್ರತ್ಯೇಕ ಸ್ಥಾನಮಾನ ರದ್ದತಿಗೆ ‘ಮುಖರ್ಜಿ’ಯೇ ಪ್ರೇರಣೆ’

ಬೆಂಗಳೂರು: ಕಾಶ್ಮೀರವನ್ನು ಭಾರತದಲ್ಲೇ ಉಳಿಸಲು ಹಾಗೂ ಕಾಶ್ಮೀರಕ್ಕೆ ಪ್ರತ್ಯೇಕ ಸ್ಥಾನಮಾನ ನೀಡುವುದರ ವಿರುದ್ಧ ಶ್ಯಾಮಪ್ರಸಾದ್ ಮುಖರ್ಜಿ ನಿರಂತರ ಹೋರಾಟ ಮಾಡಿದ್ದರು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ಶ್ಯಾಮಪ್ರಸಾದ್ ಮುಖರ್ಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಶ್ಮೀರಕ್ಕಾಗಿಯೇ ಅವರ ಬಲಿದಾನವೂ ಆಯಿತು. ಮುರಳಿ ಮನೋಹರ ಜೋಷಿ ಅವರ ನೇತೃತ್ವದಲ್ಲಿ ಕಾಶ್ಮೀರದ ಲಾಲ್ ಚೌಕದಲ್ಲಿ ತ್ರಿವರ್ಣ ಧ್ವಜ ಹಾರಿಸಲಾಗಿತ್ತು. ಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಅನಂತಕುಮಾರ್ ಮತ್ತಿತರ ನಾಯಕರು ಭಾಗವಹಿಸಿದ್ದರು ಎಂದು ಸ್ಮರಿಸಿದರು.

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಸೇರಿ ಹಲವು ಮುಖಂಡರು ಭಾಗವಹಿಸಿದ್ದರು.

ಚಿತ್ರಾವಳಿ



ಲೇಖಕಿ ಭೂಮಿಕಾ ರಾಜನ್ ಅವರ ‘ದಿ ಲಾಂಗ್ವೇಜ್ ಆಫ್ ಅನ್‌ಹೀಲ್ಡ್ ವೂಂಡ್ಸ್’ ಕವನ ಸಂಕಲನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಶೋಭಾ, ಪುಟ ವಿನ್ಯಾಸಕಿ ಮಿಥಾಲಿ ಬೈಂದೂರ ಬಿಡುಗಡೆ ಮಾಡಿದರು

ಬೆಂಗಳೂರಿನ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ಗ್ಯಾಲರಿಯಲ್ಲಿ ಶನಿವಾರ ವ್ಯಂಗ್ಯಚಿತ್ರಕಲಾವಿದ ಕೇಶವ್ ವೆಂಕಟರಾಮನ್ ಅವರಿಗೆ 'ಬಾರ್ಟನ್' ಜೀವಮಾನದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಯಾಕಾಮತ್ ಮೆಮೋರಿಯಲ್ ಸ್ಪರ್ಧೆಯ ಟ್ರಸ್ಟಿ ಅಮರ್‌ನಾಥ್ ಕಾಮತ್, ಬಾರ್ಟನ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಭರತ್ ಮೆಹ್ತಾ, ಪ್ರಶಸ್ತಿ ಸ್ವೀಕರಿಸಿದ ಕೇಶವ್, ಎನ್ ಇಸಿಇ ಚೇರ್‌ಮನ್ ಡಾ. ಕೆ ಅನಂತ ಗೌಡ ಹಾಗೂ ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ವಿ.ಜಿ. ನರೇಂದ್ರ ಭಾಗವಹಿಸಿದ್ದರು

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅಭಿಮತ

‘ಹಿಂದೂ: ಜಾತಿ ವ್ಯವಸ್ಥೆಯ ಸಂಕೇತವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲಿಯವರೆಗೆ ಹಿಂದೂ ಸಮಾಜವನ್ನು ಜಾತಿ ವ್ಯವಸ್ಥೆ ಆವರಿಸಿಕೊಂಡಿರುತ್ತದೋ, ಆ ಬಂಧನದಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ನನ್ನನ್ನು ನಾನು ಹಿಂದೂ ಎಂದು ಕರೆದುಕೊಳ್ಳುವುದಿಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ತಿಳಿಸಿದರು.

ಭವತಾರಿಣಿ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಸ್. ಗುರುಮೂರ್ತಿ ಅವರು ರಚಿಸಿದ ‘ಕರ್ಪೂರಿ ಠಾಕೂರ್’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದ ಅವರು, ‘ಹಿಂದೂ ಎನ್ನುವುದು ಜಾತಿ ವ್ಯವಸ್ಥೆಯ ಸಂಕೇತವಲ್ಲ’ ಎಂದು ಪ್ರತಿಪಾದಿಸಿದರು.

‘ಸಮಾಜದಲ್ಲಿ ಜಾತಿ ವ್ಯವಸ್ಥೆ, ಲಿಂಗ ತಾರತಮ್ಯತೆ ನಿವಾರಣೆ ಆಗುವವರೆಗೆ ಬಡತನ ತೊಲಗುವುದಿಲ್ಲ. ವಿವಿಧ ಸರ್ಕಾರಿ ಕಾರ್ಯಕ್ರಮಗಳಿಂದ ಈ ವ್ಯವಸ್ಥೆಯ ಸುಧಾರಣೆ ಸಾಧ್ಯವಿಲ್ಲ. ಇದಕ್ಕೆ ವೈಚಾರಿಕ ಶಸ್ತ್ರಚಿಕಿತ್ಸೆ ಅಗತ್ಯ. ಜಗತ್ತಿನ ಸಂತೋಷ ಸೂಚ್ಯಂಕದಲ್ಲಿ ನಮ್ಮ ದೇಶ 126ನೇ ಸ್ಥಾನದಲ್ಲಿದೆ. ಇದಕ್ಕೆ ಇಲ್ಲಿನ ಜಾತಿ ವ್ಯವಸ್ಥೆಯೇ ಕಾರಣ. ಶೈಕ್ಷಣಿಕ ಹಾಗೂ ವೈಜ್ಞಾನಿಕ ಪ್ರಗತಿ ಹೊಂದಿದಂತೆ ಜಾತಿ ವ್ಯವಸ್ಥೆ ಬೆಳೆಯುತ್ತಿದೆ. ಆದ್ದರಿಂದ ಜಾತಿ ವ್ಯವಸ್ಥೆಯ ವಿರುದ್ಧ ಆಂದೋಲನ ನಡೆಯಬೇಕು’ ಎಂದರು.

ಕಾರ್ಯಕ್ರಮದಲ್ಲಿ ಎಸ್. ಗುರುಮೂರ್ತಿ (ಎಡದಿಂದ ನಾಲ್ಕನೆಯವರು) ಅವರ ‘ಕರ್ಪೂರಿ ಠಾಕೂರ್’ ಪುಸ್ತಕವನ್ನು ಎಂ. ವೀರಪ್ಪ ಮೊಯಿಲಿ ಬಿಡುಗಡೆ ಮಾಡಿದರು. ವಕೀಲ ಸಿ.ಎಸ್. ದ್ವಾರಕಾನಾಥ್, ಅಕ್ಲಾಕ್ ಅಹ್ಮದ್, ಬಿ.ಆರ್.ಪಾಟೀಲ, ಕವಿ ಎಲ್. ಹನುಮಂತಯ್ಯ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ರಾಜಕಾರಣಿಗಳಲ್ಲಿ ಬಹುತೇಕರು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಶಿಕ್ಷಣದ ಅಗತ್ಯ ಇದೆ‘ ಎಂದರು. ನಾನು ‘ವಿಶ್ವ ಸಂಸ್ಕೃತಿಯ ಮಹಾಯಾನ’ ಎಂಬ ಪುಸ್ತಕವನ್ನು ಬರೆಯುತ್ತಿದ್ದೇನೆ. ಒಟ್ಟು ಐದು ಸಂಪುಟಗಳಲ್ಲಿ ಹೊರಬರಲಿದೆ’ ಎಂದು ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಮುಖ್ಯಮಂತ್ರಿಯವರ ರಾಜಕೀಯ ಸಲಹೆಗಾರ ಬಿ.ಆರ್.ಪಾಟೀಲ ಅವರು,, ‘ಎಲ್ಲರೂ ಸಮಾಜವಾದಿ ಟೋಪಿ ಹಾಕಿಕೊಳ್ಳುತ್ತಿದ್ದಾರೆ. ಆದರೆ, ಯಾರು ಅಸಲಿ ಸಮಾಜವಾದಿ ಎನ್ನುವುದು ತಿಳಿಯದಂತಾಗಿದೆ. ಸರಳ ಸಜ್ಜನಿಕೆಯ ಜನರು ಇತಿಹಾಸದಲ್ಲಿ ಉಳಿಯುತ್ತಿಲ್ಲ’ ಎಂದು ವಿಷಾದಿಸಿದರು.

‘ಜಾತಿ ವ್ಯವಸ್ಥೆಯ ನಿರ್ಮೂಲನೆಗೆ ಸಿದ್ಧಾಂತಗಳನ್ನು ಹುಟ್ಟು ಹಾಕಿದವರು ಸಮಾಜವಾದಿಗಳು. ಆದರೆ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಜಾತಿ ವ್ಯವಸ್ಥೆಯು ತೊಲಗಿಲ್ಲ. ಜಾತಿಯನ್ನು ಬೇರೆ ರೂಪದಲ್ಲಿ ತಂದು ಆಡಳಿತ ನಡೆಸುವ ಹುನ್ನಾರಗಳು ನಡೆಯುತ್ತಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜವಾದಿ ನಾಯಕ ಕರ್ಪೂರಿ ಠಾಕೂರ್ ಅವರು ಬಿಹಾರದ ಮುಖ್ಯಮಂತ್ರಿಯಾಗಿದ್ದಾಗ ಅವರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿದ್ದ ಅಕ್ಲಾಕ್ ಅಹ್ಮದ್ ಅವರು, ಠಾಕೂರ್ ಅವರ ಸರಳತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರ ಜತೆಗಿನ ಒಡನಾಟವನ್ನು ಸ್ಮರಿಸಿಕೊಂಡರು. ಸಮಾಜವಾದಿ ಲೇಖಕ ಮಂಗ್ಳೂರು ವಿಜಯ ಅವರು ಪುಸ್ತಕದ ಬಗ್ಗೆ ಮಾತನಾಡಿದರು.

ಮುಖ್ಯಾಂಶಗಳು

- ಸರ್ಕಾರಿ ಕಾರ್ಯಕ್ರಮಗಳಿಂದಲೇ ವ್ಯವಸ್ಥೆಯ ಸುಧಾರಣೆ ಅಸಾಧ್ಯ
- ರಾಜಕಾರಣಿಗಳಲ್ಲಿ ಬಹುತೇಕರು ಅನಕ್ಷರಸ್ಥರು, ಶಿಕ್ಷಣದ ಅಗತ್ಯವಿದೆ
- ಎಲ್ಲ ಸಮಾಜವಾದಿ ಟೋಪಿ ಧರಿಸುತ್ತಿದ್ದಾರೆ. ಅಸಲಿ ಯಾರೆಂದು ತಿಳಿಯುತ್ತಿಲ್ಲ

‘ತುಮಕೂರಿನಲ್ಲೇ ವಿಮಾನ ನಿಲ್ದಾಣ’

ತುಮಕೂರು: ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಆದರೆ, ಇಂತಹ ಸಮಯದಲ್ಲೇ ತಮಿಳುನಾಡು ಸರ್ಕಾರ ಹೊಸೂರು ಬಳಿ ವಿಮಾನ ನಿಲ್ದಾಣ ನಿರ್ಮಿಸುವುದಾಗಿ ಹೇಳುತ್ತಿದೆ ಎಂದು ಸೋಮಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ದಾಬಸ್‌ಪೇಟೆ ಬಳಿ ಬೃಹತ್ ಮಟ್ಟದಲ್ಲಿ ಕೈಗಾರಿಕಾ ಕೇಂದ್ರ ನಿರ್ಮಾಣವಾಗುತ್ತಿದೆ. ಇದು ದೇಶದಲ್ಲೇ ದೊಡ್ಡ ಕೈಗಾರಿಕಾ ಪ್ರದೇಶವಾಗಿ ರೂಪುಗೊಳ್ಳಲಿದೆ. ಇದಕ್ಕೆ ಪರ್ಯಾಯವಾಗಿ ಜಿಲ್ಲೆಯಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಿದರೆ ಸಹಕಾರಿಯಾಗುತ್ತದೆ ಎಂದರು.

ಮದ್ದೂರು: ಬಾಲಕನಿಗೆ ಬೈಕ್, ತಾಯಿಗೆ ದಂಡ

ಮದ್ದೂರು (ಮಂಡ್ಯ ಜಿಲ್ಲೆ): ಅಪ್ರಾಪ್ತ ವಯಸ್ಸಿನ ಮಗನಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಕೊಟ್ಟ ತಾಯಿಗೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಅಜಿತ್ ದೇವರಮನಿ ₹ 25 ಸಾವಿರ ದಂಡ ವಿಧಿಸಿದ್ದಾರೆ.

ರಾಮನಗರದ ನಿವಾಸಿ ಮಧುಮತಿ ಅವರ ಮಗ ಜುಲೈ 3ರಂದು ಬಿಡದಿಯಿಂದ ಮಂಡ್ಯ ಕಡೆಗೆ ಹೊರಟಿದ್ದಾಗ ಸಂಚಾರ ವಿಭಾಗದ ಪಿಎಸ್‌ಐ ಮಹೇಶ್ ಅವರು ತಡೆದು ಪರಿಶೀಲಿಸಿದ್ದರು. ಬಳಿಕ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕಾಂಗ್ರೆಸ್‌ನ ಹಿರಿಯ ನಾಯಕಿಯರಾದ (ಕುಳಿತವರು ಎಡದಿಂದ) ಪಂಕಜಾಕ್ಷಿ ಸಿ (ಮೈಸೂರು), ಸುಶೀಲಾ ಕೇಶವಮೂರ್ತಿ (ಮೈಸೂರು), ರಾಜ್ಯಸಭೆಯ ಮಾಜಿ ಸದಸ್ಯೆ ಬಿಂಬಾ ರಾಯ್ಕರ್ (ಬೆಂಗಳೂರು), ಮನೋರಮಾ ಬುನಿಯಾನ್ (ಹುಬ್ಬಳ್ಳಿ) ಮತ್ತು ಪ್ಯಾರಿ ಜಾನ್ (ಬೆಂಗಳೂರು) ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸನ್ಮಾನಿಸಿದರು. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ರಾಣಿ ಸತೀಶ್ ಮತ್ತು ಜಲಜಾ ನಾಯಕ್ ಇದ್ದರು – ಪ್ರಜಾವಾಣಿ ಚಿತ್ರ

ಪಕ್ಷ ಬಲಪಡಿಸಲು ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ‘ಗ್ಯಾರಂಟಿ’ ಯೋಜನೆಗಳ ಕುರಿತು ಮಹಿಳೆಯರ ಅಭಿಪ್ರಾಯ ಪಡೆಯುವ ಜೊತೆಗೆ, ಕಾಂಗ್ರೆಸ್ ಪಕ್ಷದತ್ತ ಸೆಳೆಯುವ ಕುರಿತು ಪಕ್ಷದ ಹಿರಿಯ ನಾಯಕಿಯರಿಂದ ಸಲಹೆ ಪಡೆಯಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಮಹಿಳಾ ಘಟಕದ ಪದಾಧಿಕಾರಿಗಳು, ಪಕ್ಷದ ಹಿರಿಯ ನಾಯಕಿಯರ ಜೊತೆ ಶನಿವಾರ ಸಭೆ ನಡೆಸಿ ಅವರು ಮಾತನಾಡಿದರು.

‘ಮಹಿಳೆಯರ ಸಬಲೀಕರಣಕ್ಕಾಗಿ ಜಾರಿಗೆ ತಂದಿರುವ ‘ಗ್ಯಾರಂಟಿ’ ಯೋಜನೆಗಳ ಬಗ್ಗೆ ಜನರ ಭಾವನೆ ಏನಿದೆ? ನಾವು ಇಷ್ಟು ಉತ್ತಮ ಯೋಜನೆ ಕೊಟ್ಟಿದ್ದರೂ ಜನರ ನಿರೀಕ್ಷೆಗಳೇನು? ಎಂಬ ಕುರಿತು ಚರ್ಚಿಸಲು ಹಿರಿಯ ನಾಯಕಿಯರ ಸಭೆ ಕರೆಯಲಾಗಿತ್ತು. ಸುಮಾರು 40 ಮಂದಿ ನಾಯಕಿಯರು ತಮ್ಮ ಅನುಭವಗಳನ್ನು ಆಧರಿಸಿ, ಸಲಹೆ ನೀಡಿದ್ದಾರೆ‘ ಎಂದು ತಿಳಿಸಿದರು.

‘ಪಕ್ಷದ ಘಟಕಗಳಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವಂತೆ ಕೆಲವರು ಬೇಡಿಕೆ ಇಟ್ಟಿದ್ದಾರೆ. ನಮ್ಮ ಪಕ್ಷ ಈಗಾಗಲೇ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೀಸಲಾತಿ ನೀಡಿದ್ದು, ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿ ತರಲು ಹೋರಾಟ ಮಾಡುತ್ತಿದ್ದೇವೆ’ ಎಂದರು.

ಬೆಂಗಳೂರು ಗ್ರಾಮಾಂತರದ ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಜನಸ್ಪಂದನಾ ಕಾರ್ಯಕ್ರಮ ಮಾಡಿದಾಗ ಅಧಿಕಾರಿಗಳು ಹೋಗಿದ್ದರು ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ನಾನು ಜನಸಂಪರ್ಕ ಸಭೆ ಮಾಡಿದ್ದೇನೆಯೇ ಹೊರತು, ಮಾಜಿ ಸಂಸದರು ಯಾವುದೇ ಕಾರ್ಯಕ್ರಮ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.

ಜಿಲ್ಲಾ ವರದಿ ಸರಿ ಇಲ್ಲದೇ ನೇಮಕಾತಿ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಲ್ಲೆಗಳಿಂದ ಸರಿಯಾಗಿ ವರದಿ ಬರುತ್ತಿದ್ದರೆ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ 150 ಇನ್‌ಸ್ಪೆಕ್ಟರ್ ಹುದ್ದೆಗಳು ಭರ್ತಿಯಾಗುತ್ತಿದ್ದವು. ಜಿಲ್ಲಾಧಿಕಾರಿ ನೀಡಿದ ವರದಿಯಂತೆ ಕೇವಲ 84 ಹುದ್ದೆಗಳು ಭರ್ತಿ ಮಾಡಲಾಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸಾರಿಗೆ ಇಲಾಖೆ ವತಿಯಿಂದ ಸಾರಿಗೆ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಮೋಟಾರು ವಾಹನ ನಿರೀಕ್ಷಕರಿಗಾಗಿ ಶನಿವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಎಲ್ಲರೂ ಒಂದು ರೂಪಾಯಿಯನ್ನು ಕೊಡದೇ ಆಯ್ಕೆಯಾಗಿದ್ದಾರೆ. ಆ ಮೂಲಕ ಸಂಪೂರ್ಣ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆದಿದೆ. ಇನ್ನು ಕನಿಷ್ಠ 35 ವರ್ಷ ದುಡಿಯಬಹುದು. ಸಹಾಯಕ ಆಯುಕ್ತ ಹುದ್ದೆವರೆಗೆ ತಲುಪುವ ಅವಕಾಶವಿದೆ. ಜನರಿಗೆ ತೊಂದರೆ ನೀಡದಂತೆ ಉತ್ತಮವಾಗಿ ಕೆಲಸ ಮಾಡಿ ಇಲಾಖೆಗೆ ಉತ್ತಮ ಹೆಸರು ತರಬೇಕು’ ಎಂದು ಸಲಹೆ ನೀಡಿದರು.

‘ಅತಿ ಹೆಚ್ಚು ಆದಾಯ ಸಂಗ್ರಹವಾಗುವ ಖಾತೆ ನಮ್ಮದು. ಪ್ರತಿ ವರ್ಷ ₹13 ಸಾವಿರ ಕೋಟಿ ಸಂಗ್ರಹವಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಸಾರಿಗೆ ಆಯುಕ್ತ ಯೋಗಿಶ್ ಎ.ಎಂ., ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ್ ಭಾಗವಹಿಸಿದ್ದರು.

ಶಿಕ್ಷಕರ ವಿರುದ್ಧದ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಕಾರ

‘ಮಕ್ಕಳ ಜೀವಕ್ಕೆ ಶಿಸ್ತು ಎರವಾಗದಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಸ್ತು ಹೇರುವ ಭರದಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಅಮಾಯಕ ಜೀವಗಳಿಗೆ ಹಾನಿಯಾಗುವಂತೆ ನಡೆದುಕೊಳ್ಳಬಾರದು’ ಎಂಬ ಕಳಕಳಿ ವ್ಯಕ್ತಪಡಿಸಿರುವ ಹೈಕೋರ್ಟ್, ವಿದ್ಯಾರ್ಥಿನಿಯೊಬ್ಬರಿಗೆ ಬೆದರಿಕೆ ಹಾಕಿ ಆಕೆಯ ಆತ್ಮಹತ್ಯೆಗೆ ಕಾರಣವಾದ ಆರೋಪ ಹೊತ್ತ ಇಬ್ಬರು ಶಿಕ್ಷಕರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಸ್ಪಷ್ಟವಾಗಿ ನಿರಾಕರಿಸಿದೆ.

‘ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಧರ್ಮಸ್ಥಳದ ಎಸ್.ಡಿ.ಎಂ ಪ್ರೌಢಶಾಲೆ ಶಿಕ್ಷಕರಾದ ರೂಪೇಶ್ (34) ಮತ್ತು ಸದಾನಂದ (44) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

‘ಇದೊಂದು ಸೂಕ್ಷ್ಮ ಪ್ರಕರಣವಾಗಿದ್ದು, ಘಟನೆಯ ಕುರಿತು ವಿಸ್ತೃತ ವಿಚಾರಣೆ ನಡೆಯಬೇಕಾದ ಅಗತ್ಯವಿದೆ’ ಎಂದು ಹೇಳಿದೆ.

‘ಶಿಕ್ಷಕರು ಹದಿವಯಸ್ಸಿನ ಮಕ್ಕಳಿಗೆ ಬೋಧಿಸುವಾಗ ಅವರ ಮಾನಸಿಕ ತುಮುಲಗಳನ್ನು ಅರಿತಿರಬೇಕು. ಅವರ ಮುಗ್ಧ ಮತ್ತು ಅರಳುವ ತಾರುಣ್ಯದ ಕನಸುಗಳಿಗೆ ಸರಿದಾರಿ ತೋರಿಸಬೇಕು. ಎಳೆಮಕ್ಕಳ ನಡವಳಿಕೆಗಳನ್ನು ವಿಶಾಲ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಬೇಕು’ ಎಂದಿದೆ.

‘ಶಿಕ್ಷಕ ಸದಾನಂದ ಅವರು, ನೀನು (ಮೃತ ವಿದ್ಯಾರ್ಥಿನಿ) ಯುವಕನನ್ನು ಚುಂಬಿಸುತ್ತಿರುವ ವಿಡಿಯೊ ನನ್ನ ಬಳಿ ಇದೆ. ಅದನ್ನು ಎಲ್ಲರಿಗೂ ತಿಳಿಯುವಂತೆ ಪ್ರಸಾರ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದಾಗಿ ಮೃತ ವಿದ್ಯಾರ್ಥಿನಿ ಮರಣಪೂರ್ವ ಹೇಳಿಕೆ ನೀಡಿದ್ದಾರೆ. ಇದನ್ನು ಗಮನಿಸಿದಾಗ, ಮಕ್ಕಳ ವಿಚಾರದಲ್ಲಿ ಶಿಕ್ಷಕರು ಹೊಂದಿರುವ ಸಂಕುಚಿತ ದೃಷ್ಟಿಕೋನದ ಬಗ್ಗೆ ಆತಂಕ ಮೂಡುತ್ತದೆ’ ಎಂದು ಪೀಠ ಹೇಳಿದೆ.

‘ವಿದ್ಯಾರ್ಥಿನಿ ಯುವಕನನ್ನು ಮಾತನಾಡಿಸುವುದನ್ನೇ ಅಶಿಸ್ತು ಎಂದು ಪರಿಗಣಿಸಲು ಸಾಧ್ಯವಿಲ್ಲ’ ಎಂದು ಪೀಠ ವಿವರಿಸಿದೆ.

‘ಮೃತ ವಿದ್ಯಾರ್ಥಿನಿ 14 ವರ್ಷದ ಬಾಲಕಿ. ಅದು ಬಾಲಕಿಯೊಬ್ಬಳ, ದೈಹಿಕ ಮತ್ತು ಮಾನಸಿಕ ಬದಲಾವಣೆಯ ಹಂತ. ಇಂತಹ ಮಕ್ಕಳ ಜೊತೆ ಶಿಕ್ಷಕರು ಎನ್ನಿಸಿಕೊಂಡವರು ಮುದದಿಂದ, ಸಹಾನುಭೂತಿಯಿಂದ ನಿಷ್ಕಲ್ಮಷ ಪ್ರೀತಿಯಿಂದ ವ್ಯವಹರಿಸಬೇಕು. ಇಂದು ಕಾಲ ಬದಲಾಗಿದೆ. ಅದಕ್ಕೆ ಅನುಗುಣವಾಗಿ ನಾವೂ ಬದಲಾಗಬೇಕು ಎಂಬ ಸೂಕ್ಷ್ಮತೆಯನ್ನು ಶಿಕ್ಷಕರು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು‘ ಎಂದು ನ್ಯಾಯಪೀಠ ಎಚ್ಚರಿಸಿದೆ.

ಪ್ರಕರಣವೇನು?: ‘ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಎಸ್ ಡಿ ಎಂ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿನಿಯಾಗಿದ್ದ ಮೃತ ಬಾಲಕಿ, ಅದೇ ಶಾಲೆಯಲ್ಲಿನ ಯುವಕನ ಜೊತೆ ನಿರಂತರವಾಗಿ ಮಾತನಾಡುತ್ತಿದ್ದರು. ಇದನ್ನು ಶಿಕ್ಷಕರು ಶಾಲೆಯ ಮುಖ್ಯ ಶಿಕ್ಷಕರು ಹಾಗೂ ವಿದ್ಯಾರ್ಥಿನಿಯ ತಾಯಿಯ ಗಮನಕ್ಕೆ ತಂದಿದ್ದರು. ಈ ಬಗ್ಗೆ ಶಾಲೆಗೆ ತೆರಳಿದ್ದ ವಿದ್ಯಾರ್ಥಿನಿಯ ತಾಯಿ, ನನ್ನ ಮಗಳ ಬಗ್ಗೆ ಏನೇ ಆರೋಪ ಇದ್ದರೂ, ಅದನ್ನು ಇತರೆ ಮಕ್ಕಳ ಮುಂದೆ ಬಹಿರಂಗಪಡಿಸಿ ಅವಮಾನಿಸದೆ ನನ್ನ ಗಮನಕ್ಕೆ ತನ್ನಿ. ಯಾವುದೇ ಕಾರಣಕ್ಕೂ ಮಗಳ ಘನತೆಗೆ ಮಸಿ ಬಳಿಯಬೇಡಿ ಎಂದು ಮನವಿ ಮಾಡಿದ್ದರು.

ಏತನ್ಮಧ್ಯೆ ವಿದ್ಯಾರ್ಥಿನಿ ಮಾತನಾಡುವ ವಿಚಾರವನ್ನು ರೂಪೇಶ್ ಇತರೆ ವಿದ್ಯಾರ್ಥಿಗಳಿಗೆ ತಿಳಿಸಿದ್ದರು. ಇದರಿಂದ ಬಾಲಕಿ ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಬಳಿಕ ಮೃತಪಟ್ಟಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರಕಲಾ ಶಿಕ್ಷಕ ರೂಪೇಶ ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಸದಾನಂದ ವಿರುದ್ಧ ವಿದ್ಯಾರ್ಥಿನಿ ತಾಯಿ ದೂರು ನೀಡಿದ್ದರು’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಧರ್ಮಸ್ಥಳ ಠಾಣೆಯ ಪೊಲೀಸರು ಆರೋಪಿಗಳ ವಿರುದ್ಧ ಐಪಿಸಿಯ ವಿವಿಧ ಸೆಕ್ಷನ್, ಪೋಕ್ಸೊ ಮತ್ತು ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು.

ಪಠ್ಯದಲ್ಲಿ ಕೈಬಿಟ್ಟ ‘ವೀರಶೈವ’ ಪದ: ಹೋರಾಟಕ್ಕೆ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪಠ್ಯಕ್ರಮದ 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದ ಬಸವಣ್ಣನವರ ಪರಿಚಯ ಅಧ್ಯಾಯದಲ್ಲಿ ‘ವೀರಶೈವ’ ಪದ ಕೈಬಿಟ್ಟಿರುವುದರ ವಿರುದ್ಧ ಕಾನೂನು ಹೋರಾಟ ಕೈಗೊಳ್ಳಲು ಶನಿವಾರ ನಡೆದ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ನಿರ್ಣಯ ಕೈಗೊಂಡಿದೆ.

ವೀರಶೈವ ಪದ ಕೈಬಿಡುವ ಮೂಲಕ ರಾಜ್ಯ ಸರ್ಕಾರ ನಿಜ ವೀರಶೈವ ಬಸವೇಶ್ವರರ ಇತಿಹಾಸಕ್ಕೆ ಅಪಪ್ರಚಾರ ಮಾಡಿದೆ ಎಂದು ಮಹಾಂತಲಿಂಗ ಶಿವಾಚಾರ್ಯ, ವಿರೂಪಾಕ್ಷ ಶಿವಾಚಾರ್ಯ, ಸೂಗೂರೇಶ್ವರ, ಪ್ರಭು ಸಾರಂಗದೇವ, ರುದ್ರಮುನಿ ಶಿವಾಚಾರ್ಯರು ಸೇರಿ ಮೂವತ್ತಕ್ಕೂ ಹೆಚ್ಚು ಸ್ವಾಮೀಜಿಗಳು ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ನಿಗದಿಮಾಡಿದ್ದ ಪಾಠದಲ್ಲಿ ‘ವೀರಶೈವ ಸಿದ್ಧಾಂತವನ್ನು ಬಸವೇಶ್ವರರು ಪ್ರಚುರಪಡಿಸಿದರು ಮತ್ತು ಶೈವಗುರುಗಳ ಸಾನಿಧ್ಯದಲ್ಲಿ ಲಿಂಗದೀಕ್ಷೆ ಪಡೆದು ಧ್ಯಾನ ಸಾಧನೆ ಮಾಡಿದರು’ ಎಂದಿತ್ತು. ಈಗ ಬದಲಿಸಲಾಗಿದೆ ಎಂದು ದೂರಿದ್ದಾರೆ.

ವೀರಶೈವ ಪದ ಕೈಬಿಟ್ಟಿದ್ದು ಸರಿಯಲ್ಲ. ಸಂಶೋಧಕ ಎಂ.ಎಂ. ಕಲಬುರಗಿ ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿ ವಚನಗಳಲ್ಲಿ ಬಸವಣ್ಣ ಸೇರಿ 30ಕ್ಕೂ ಹೆಚ್ಚು ಶಿವಶರಣರು ತಮ್ಮ 142 ವಚನಗಳಲ್ಲಿ 221 ಬಾರಿ ವೀರಶೈವ ಪದ ಬಳಸಿದ್ದಾರೆ. 10 ವಚನಗಳಲ್ಲಿ 21 ಕಡೆ ಮಾತ್ರ ಲಿಂಗಾಯತ ಪದ ಬಳಕೆ ಮಾಡಿದ್ದಾರೆ. ಒಂದು ವಚನದಲ್ಲಿ ತಾವು ನಿಜ ವೀರಶೈವ ಎಂದು ಉಲ್ಲೇಖಿಸಿದ್ದಾರೆ ಎಂದು ಸ್ವಾಮೀಜಿಗಳು, ತಿರುಚಿದ ಪಾಠವನ್ನು ಸರ್ಕಾರ ತಕ್ಷಣ ಬದಲಾವಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಕೇಂದ್ರ ಪರಿಸರ, ಅರಣ್ಯ, ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಹೊಸ ಪ್ರಸ್ತಾವ

ಮೇಕೆದಾಟು: ಅನುಮೋದನೆಗೆ ಮತ್ತೆ ಯತ್ನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಸಮತೋಲನ ಜಲಾಶಯವನ್ನು ನಿರ್ಮಿಸುವ ಯೋಜನೆಗೆ ಪರಿಸರ ಅನುಮೋದನೆ ಪಡೆಯಲು ಮತ್ತೆ ಪ್ರಯತ್ನ ಆರಂಭಿಸಿರುವ ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಹೊಸ ಪ್ರಸ್ತಾವ ಸಲ್ಲಿಸಿದೆ.

ಯಾವುದೇ ಯೋಜನೆಗೆ ಪರಿಸರ ಅನುಮೋದನೆ ಕೋರುವ ಸಂದರ್ಭದಲ್ಲಿ ಕಾರ್ಯಸೂಚಿಗೆ (ಟಿಒಆರ್) ಒಪ್ಪಿಗೆ ಪಡೆಯುವುದು ಅತ್ಯಗತ್ಯ ಪ್ರಕ್ರಿಯೆ. ಕಾರ್ಯಸೂಚಿಗೆ (ಟಿಒಆರ್) ಒಪ್ಪಿಗೆ ನೀಡಬೇಕು ಎಂದು ಕೋರಿ ರಾಜ್ಯ ಸರ್ಕಾರ ಸಚಿವಾಲಯಕ್ಕೆ 2019ರ ಜೂನ್‌ನಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಸಚಿವಾಲಯವು 2022ರ ಸೆಪ್ಟೆಂಬರ್‌ನಲ್ಲಿ ಪರಿವೇಷ್ ಪೋರ್ಟಲ್‌ನಿಂದ ಪ್ರಸ್ತಾವವನ್ನು ‘ಡಿ ಲಿಸ್ಟ್’ (ತೆಗೆದುಹಾಕು) ಮಾಡಿತ್ತು.

ಮೇಕೆದಾಟು ಯೋಜನೆ ಸುತ್ತ

- 67 ಟಿಎಂಸಿ ಕಾವೇರಿ ನೀರು ಸಂಗ್ರಹಿಸಲು ಸಮತೋಲನ ಜಲಾಶಯ ನಿರ್ಮಾಣ
- ಕುಡಿಯುವ ನೀರು ಹಾಗೂ 400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಗುರಿ
- ಬೆಂಗಳೂರು ಮಹಾನಗರ ಪ್ರದೇಶಕ್ಕೆ 24 ಟಿಎಂಸಿ ಅಡಿ ನೀರು ಪೂರೈಕೆ ಉದ್ದೇಶ
- ಯೋಜನೆಗಾಗಿ 4,716 ಹೆಕ್ಟೇರ್ ಅರಣ್ಯ ಹಾಗೂ 280 ಹೆಕ್ಟೇರ್ ಕಂದಾಯ ಭೂಮಿ ಮುಳುಗಡೆ
- ₹ 5,912 ಕೋಟಿ ಯೋಜನೆಯ ಆರಂಭಿಕ ಅಂದಾಜು ವೆಚ್ಚ
- ₹ 9,000 ಕೋಟಿ ಪರಿಷ್ಕೃತ ಅಂದಾಜು ವೆಚ್ಚ

‘ಈ ಯೋಜನೆ ಅಂತರ್ ರಾಜ್ಯ ಜಲ ವಿವಾದವನ್ನು ಒಳಗೊಂಡಿದೆ. ಹೀಗಾಗಿ, ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಸಿಕ್ಕ ಬಳಿಕ ಹಾಗೂ ಜಲಶಕ್ತಿ ಸಚಿವಾಲಯವು ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಒಪ್ಪಿಗೆ ನೀಡಿದ ನಂತರವಷ್ಟೇ ಟಿಒಆರ್‌ಗೆ ಒಪ್ಪಿಗೆ ನೀಡಲಾಗುವುದು’ ಎಂದು ಪರಿಸರ ಸಚಿವಾಲಯ ಸ್ಪಷ್ಟಪಡಿಸಿತ್ತು. 2 ವರ್ಷಗಳ ನಂತರ ರಾಜ್ಯ ಮತ್ತೆ ಪ್ರಯತ್ನ ನಡೆಸಿದೆ.

ಈ ಯೋಜನೆ ಅನುಷ್ಠಾನದ ಸಂದರ್ಭದಲ್ಲಿ 4,716 ಹೆಕ್ಟೇರ್ ಅರಣ್ಯ ಮುಳುಗಡೆಯಾಗಲಿದೆ. ಯೋಜನೆಯ ಕಾಮಗಾರಿಗೆ ಚಾಲನೆ ನೀಡುವ ಮುನ್ನ ಪರಿಸರದ ಜತೆಗೆ ಅರಣ್ಯ ಹಾಗೂ ವನ್ಯಜೀವಿ ಅನುಮೋದನೆಯನ್ನೂ ಪಡೆಯಬೇಕಿದೆ ಎಂದು ಸುಪ್ರೀಂ ಕೋರ್ಟ್ 2011ರಲ್ಲಿ ನಿರ್ದೇಶನ ನೀಡಿದೆ.

ರಾಜ್ಯದಿಂದ ಮತ್ತೆ ಪತ್ರ: ₹9,000 ಕೋಟಿ ಮೊತ್ತದ ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ಎಚ್.ಡಿ.ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ (2019ರ ಜನವರಿ) ರಾಜ್ಯ ಸರ್ಕಾರವು ಸಲ್ಲಿಸಿತ್ತು. ಈ ಪ್ರಸ್ತಾವದ ಬಗ್ಗೆ ಸಮಗ್ರ ಚರ್ಚೆ ನಡೆಸಿ ಅಭಿಪ್ರಾಯ ನೀಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಆಯೋಗ ಸೂಚಿಸಿತ್ತು. ಆದರೆ, ಪ್ರಾಧಿಕಾರವು ಐದು ವರ್ಷಗಳ ವರೆಗೆ ಚರ್ಚೆ ನಡೆಸಿರಲಿಲ್ಲ.

ಡಿಪಿಆರ್ ಪರಾಮರ್ಶೆಗೆ ಯೋಜನೆಗೆ ಅನುಮೋದನೆ ನೀಡಬೇಕು ಎಂದು ಆಗ್ರಹಿಸಿ ಕೇಂದ್ರ ಜಲ ಆಯೋಗಕ್ಕೆ ರಾಜ್ಯ ಸರ್ಕಾರ ಏ.30ರಂದು ಪತ್ರ ಬರೆದಿತ್ತು. ಆಯೋಗದ ಅಧ್ಯಕ್ಷರಿಗೆ ಜಲಸಂಪನ್ಮೂಲ ಇಲಾಖೆಯು ಈಗ ಜೂನ್ 19ರಂದು ಮತ್ತೊಮ್ಮೆ ಪತ್ರ ಬರೆದಿದೆ.

ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಡಾ ಹಗರಣ

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅವ್ಯವಹಾರದಲ್ಲಿ ಪ್ರಭಾವಿ ರಾಜಕೀಯ ಮುಖಂಡರು ಭಾಗಿದಾರರಾಗಿದ್ದು, ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿಯೇ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿ ರೈತ ಮುಖಂಡ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿವೆ.

‘ಒಂದು ವರ್ಷದ ಹಿಂದೆ ಮುಡಾ ಕಚೇರಿಯಲ್ಲಿನ ದಾಖಲೆಗಳು ಹಾಗೂ ಕಡತಗಳು ಕಳುವು ಆಗಿದ್ದವು. ಅದರ ಬಗ್ಗೆ ತನಿಖೆಗೆ ಒತ್ತಾಯಿಸಿ ರೈತ ಸಂಘಟನೆಯಿಂದ ಪ್ರತಿಭಟಿಸಲಾಗಿತ್ತು. ಆಗಿನ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದರೆ ಪ್ರಭಾವಿಗಳು ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಪ್ರಭಾವಿಗಳಿಂದ ಲಪಟಾಯಿಸುವುದು ತಪ್ಪುತಿತ್ತು’ ಎಂದು ಮನವಿಯಲ್ಲಿ ತಿಳಿಸಲಾಗಿದೆ.

‘ಸುಳ್ಳು ದಾಖಲೆಗಳನ್ನು ನೀಡಿ ಹಾಲಿ, ಮಾಜಿ ಜನಪ್ರತಿನಿಧಿಗಳು ಹಲವಾರು ನಿವೇಶನಗಳನ್ನು ಪಡೆದು ಕೊಂಡು ಜನರಿಗೆ ಸಿಗಬೇಕಾದ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ’ ಎಂದು ತಿಳಿಸಿದರು.

ನಿಯೋಗದಲ್ಲಿ ಕನ್ನಡ ಚಳವಳಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಗುರುದೇವ್ ನಾರಾಯಣ್, ವಕೀಲರಾದ ಎಲ್. ರವಿಕುಮಾರ್, ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಮಾರ್ಬಳ್ಳಿ ನೀಲಕಂಠಪ್ಪ, ಉಡಿಗಾಲ ರೇವಣ್ಣ, ತುಮಕೂರು ಶಿವಕುಮಾರ್, ಬಾಗೇಪಲ್ಲಿ ಗೋವಿಂದರೆಡ್ಡಿ, ಸುಂದ್ರಪ್ಪ ಭಾಗವಹಿಸಿದ್ದರು.

ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಆಂಟೋನ್ಸನ್‌ಗೆ ಸೋಲು

ಸೆಮಿಗೆ ಪ್ರಿಯಾಂಶು ರಾಜಾವತ್

ಪ್ರಿಯಾಂಶು ರಾಜಾವತ್ –ಎಎಫ್‌ಪಿ ಚಿತ್ರ

ಕ್ಯಾಲ್ಗರಿ, (ಕೆನಡಾ) (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ ಪ್ರಿಯಾಂಶು ರಾಜಾವತ್ ನಾಲ್ಕನೇ ಕ್ರಮಾಂಕದ ಆ್ಯಂಡರ್ಸ್ ಆಂಟೋನ್ಸನ್‌ಗೆ ಆಘಾತ ನೀಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಕ್ರವಾರ ತಡರಾತ್ರಿ ನಡೆದ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಾಜಾವತ್ 21-11, 17-21, 21-19 ರಿಂದ ಆಂಟೋನ್ಸನ್ ವಿರುದ್ಧ ಜಯ ಗಳಿಸಿದರು. ಈ ಪಂದ್ಯವು 1 ಗಂಟೆ 19 ನಿಮಿಷ ನಡೆಯಿತು.

ರಾಜಾವತ್ ಅವರು ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ಅಲೆಕ್ಸ್ ಲೆನಿಯರ್ ಅವರನ್ನು ಎದುರಿಸಲಿದ್ದಾರೆ. ರಾಜಾವತ್‌ಗೆ ಇದು ವಿಶ್ವದ ಅಗ್ರ 10 ಕ್ರಮಾಂಕದಲ್ಲಿರುವ ಆಟಗಾರನ ವಿರುದ್ಧದ ಮೊದಲ ಗೆಲುವಾಗಿದೆ.

ಆಂಟೋನ್ಸನ್ ಮೊದಲ ಗೇಮ್‌ನಲ್ಲಿ 9-9 ರಿಂದ ಸಮಬಲ ಸಾಧಿಸುವ ಮುನ್ನ ಉತ್ತಮ ಆರಂಭ ಪಡೆದಿದ್ದ ರಾಜಾವತ್ 7-4ರ ಮುನ್ನಡೆಯಲ್ಲಿದ್ದರು. ನಂತರ ಐದು ಅಂಕ ಗಳಿಸುವ ಮೂಲಕ ರಾಜಾವತ್ ಮೇಲುಗೈ ಸಾಧಿಸಿದರು. ಎದುರಾಳಿ ಆಟಗಾರ ಮತ್ತೆ ಮುನ್ನಡೆ ಸಾಧಿಸಲು ಪ್ರಯತ್ನಿಸಿದರೂ ಸತತ 7 ಅಂಕ ಗಳಿಸಿದ ರಾಜಾವತ್, ಮೊದಲ ಗೇಮ್ ತಮ್ಮದಾಗಿಸಿಕೊಂಡರು.

ಮೊದಲ ಗೇಮ್ ಕಳೆದುಕೊಂಡ ಆಂಟೋನ್ಸನ್ ಎರಡನೇ ಯದ್ದರಲ್ಲಿ ಉತ್ತಮ ಆಟವಾಡಿ ಸಮ ಬಲ ಸಾಧಿಸಿದರು. 17-17ರ ಸಮ ಬಲದ ಹೋರಾಟ ನಡೆಯುತ್ತಿದ್ದಾಗ ನಾಲ್ಕು ನೇರ ಅಂಕಗಳನ್ನು ಬಿಟ್ಟುಕೊಟ್ಟ ರಾಜಾವತ್ ಎರಡನೇ ಗೇಮ್ ಕೈಚೆಲ್ಲಿದರು. ಅಂತಿಮ ಗೇಮ್‌ನಲ್ಲಿ ರಾಜಾವತ್ 5-1ರ ಮುನ್ನಡೆ ಸಾಧಿಸಿದರೂ ಸತತ ಆರು ಅಂಕ ಗಳಿಸಿದ ಆಂಟೋನ್ಸನ್ 7-5ರಿಂದ ಮುನ್ನಡೆ ಸಾಧಿಸಿದರು.

ಮೂರು ಅಂಕ ಗಳಿಸುವ ಮೂಲಕ ಪುನರಾಗಮನ ಮಾಡಿದರೂ ಅನುಭವಿ ಡೆನ್ಮಾರ್ಕ್ ಆಟಗಾರ ವಿರಾಮದ ಹೊತ್ತಿಗೆ 11-10 ರಿಂದ ಮುನ್ನಡೆ ಸಾಧಿಸಿದರು. 19-19ರಿಂದ ಸಮಬಲದ ಸೆಣಸಾಟ ನಡೆಯುತ್ತಿದ್ದಾಗ ಸತತ ಅಂಕ ಗಳಿಸಿದ ಪ್ರಿಯಾಂಶು ರಾಜಾವತ್ ಜಯ ಸಾಧಿಸಿದರು. ಉನ್ನತ ಕ್ರಮಾಂಕದ ಆಟಗಾರರ ವಿರುದ್ಧ ಗೆದ್ದು ಸೆಮಿಫೈನಲ್ ತಲುಪಿರುವ ರಾಜಾವತ್, ವಿಶ್ವ ನಂ.24 ಡೆನ್ಮಾರ್ಕ್‌ನ ರಾಸ್ಮಸ್ ಜೆಮ್ಕೆ ಹಾಗೂ ಜಪಾನ್‌ನ ಟಕುಮಾ ಒಬಯಾಸಿ ಅವರನ್ನು ಕ್ರಮವಾಗಿ ಮೊದಲ ಹಾಗೂ ಎರಡನೇ ಸುತ್ತಿನಲ್ಲಿ ಸೋಲಿಸಿದ್ದರು.

ಟ್ರೀಸಾ–ಗಾಯತ್ರಿ ನಿರ್ಗಮನ

ಮಹಿಳಾ ಡಬಲ್ಸ್ ಜೋಡಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಟೂರ್ನಿಯಿಂದ ನಿರ್ಗಮಿಸಿದ್ದಾರೆ.

ಟ್ರೀಸಾ–ಗಾಯತ್ರಿ ಜೋಡಿ 18-21 21-19 16-21 ರಿಂದ ಚೈನಾ ತೈಪೆಯ ಪೀ ಶಾನ್ ಸೀ ಮತ್ತು ಎನ್ ಜೂ ಹಂಗ್ ಜೋಡಿ ವಿರುದ್ಧ ಪರಾಭವಗೊಂಡಿತು.

ಸಿಕಂದರ್, ಚತಾರಾ ದಾಳಿಗೆ ಒಲಿದ ಗೆಲುವು

ಟಿ20 ಕ್ರಿಕೆಟ್: ಎಂಟು ವರ್ಷಗಳ ನಂತರ ಜಿಂಬಾಬ್ವೆ ಎದುರು ಸೋತ ಭಾರತ

ವಿಕೆಟ್ ಗಳಿಸಿದ ಜಿಂಬಾಬ್ವೆ ತಂಡದ ಸಿಕಂದರ್ ರಝಾ (ಬಲಕ್ಕೆ) ಅವರೊಂದಿಗೆ ಸಂಭ್ರಮಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ಹರಾರೆ (ಪಿಟಿಐ): ಜಿಂಬಾಬ್ವೆ ತಂಡದ ಉತ್ಸಾಹಿ ಆಟಗಾರರು ಶನಿವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಭಾರತದ ಪ್ರತಿಭಾನ್ವಿತ ಆಟಗಾರರ ಪಡೆಯನ್ನು ಮಣಿಸಿದರು.

ಭಾರತ ತಂಡವು ಈಚೆಗಷ್ಟೇ ಟಿ20 ವಿಶ್ವಕಪ್ ಜಯಿಸಿತ್ತು. ಆದರೆ ಆ ತಂಡದಲ್ಲಿ ಆಡಿದವರು ವಿಶ್ರಾಂತಿ ಪಡೆದಿದ್ದರಿಂದ ಉದಯೋನ್ಮುಖ ಆಟಗಾರರ ಬಳಗವನ್ನು ಜಿಂಬಾಬ್ವೆ ಪ್ರವಾಸಕ್ಕೆ ಕಳಿಸಲಾಗಿದೆ. ಆದರೆ ಅನುಭವದ ಕೊರತೆ ಇರುವ ಜಿಂಬಾಬ್ವೆ ತಂಡದ ಎದುರು ಶುಭಮನ್ ಗಿಲ್ ನಾಯಕತ್ವದ ತಂಡವು ಪರದಾಡಿತು. 13 ರನ್‌ಗಳಿಂದ ಸೋತಿತು.

ಆತಿಥೇಯ ತಂಡವು ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು. ಭಾರತ ತಂಡವು 2024ರಲ್ಲಿ ಟಿ20 ಮಾದರಿಯಲ್ಲಿ ಸೋತ ಮೊದಲ ಪಂದ್ಯ ಇದಾಗಿದೆ. ಜಿಂಬಾಬ್ವೆ ಎದುರು ಎಂಟು ವರ್ಷಗಳಿಂದ ಇದ್ದ ಅಜೇಯ ದಾಖಲೆಯೂ ಇದರೊಂದಿಗೆ ಮುರಿದುಬಿತ್ತು.

116 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವನ್ನು 102 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಜಿಂಬಾಬ್ವೆಯ ನಾಯಕ, ಸ್ಪಿನ್ನರ್ ಸಿಕಂದರ್ ರಝಾ (25ಕ್ಕೆ3) ಮತ್ತು ವೇಗಿ ತೆಂದೈ ಚತಾರಾ (16ಕ್ಕೆ3) ಯಶಸ್ವಿಯಾದರು.

ಗುರಿ ಬೆನ್ನಟ್ಟಿದ ಭಾರತ ತಂಡ ಮೊದಲ ಓವರ್‌ನಲ್ಲಿಯೇ ಆಘಾತ ಅನುಭವಿಸಿತು. ಪದಾರ್ಪಣೆ ಪಂದ್ಯ ಆಡಿದ ಅಭಿಷೇಕ್ ಶರ್ಮಾ ಖಾತೆಯನ್ನು ತೆರೆಯದೇ ನಿರ್ಗಮಿಸಿದರು. ಬ್ರಯನ್ ಬೆನೆಟ್ ಬೌಲಿಂಗ್‌ನಲ್ಲಿ ಅಭಿಷೇಕ್ ಕ್ರಾಸ್ ಬ್ಯಾಟ್ ಶಾಟ್ ಆಡಿದರು.

ಆದರೆ, ಮಸಕಜಾ ಪಡೆದ ಕ್ಯಾಚ್‌ಗೆ ಔಟಾದರು. ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಪದಾರ್ಪಣೆ ಮಾಡಿದ ರಿಯಾನ್ ಪರಾಗ್ ಮತ್ತು ಧ್ರುವ ಜುರೇಲ್ ಕೂಡ ಎರಡಂಕಿ ಮುಟ್ಟಲಿಲ್ಲ. ರಿಂಕು ಸಿಂಗ್ ಅವರೂ ಸೊನ್ನೆ ಸುತ್ತಿದರು. ಋತುರಾಜ್ ಗಾಯಕವಾಡ್ (7) ಆಟವೂ ನಡೆಯಲಿಲ್ಲ. ನಾಯಕ ಶುಭಮನ್ ಗಿಲ್ (31; 29ಎ) ಮತ್ತು ವಾಷಿಂಗ್ಟನ್ ಸುಂದರ್ (27; 34ಎ) ಅವರು ಹೋರಾಟ ತೋರಿದರು.

ಆದರೆ ಶಿಸ್ತಿನ ದಾಳಿ ನಡೆಸಿದ ಬೌಲರ್‌ಗಳು ಭಾರತದ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಜಿಂಬಾಬ್ವೆ ಆಟಗಾರರ ಫೀಲ್ಡಿಂಗ್ ಕೂಡ ಗಮನ ಸೆಳೆಯಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ಸ್ಪಿನ್ನರ್ ರವಿ ಬಿಷ್ಣೋಯಿ (13ಕ್ಕೆ4) ಮತ್ತು ವಾಷಿಂಗ್ಟನ್ ಸುಂದರ್ (11ಕ್ಕೆ2) ಅವರ ದಾಳಿಯ ಮುಂದೆ ಜಿಂಬಾಬ್ವೆ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 115 ರನ್ ಗಳಿಸಿತು. ಆತಿಥೇಯ ತಂಡದ ಕ್ಲೈವ್ ಮೆದಾಂದೆ (ಔಟಾಗದೆ 29; 25ಎ) ಅವರು ಕೊನೆಯ ಹಂತದಲ್ಲಿ ದಿಟ್ಟ ಆಟವಾಡಿದರು. ಇದರಿಂದಾಗಿ ತಂಡದ ಮೊತ್ತವು 100ರ ಗಡಿ ದಾಟುವಂತಾಯಿತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 115 (ವೆಸ್ಲಿ ಮದವೆರೆ 21, ಬ್ರಯನ್ ಬೆನೆಟ್ 22, ಡಿಯಾನ್ ಮೆಯರ್ಸ್ 23, ಕ್ಲೈವ್ ಮೆದಾಂದೆ ಔಟಾಗದೆ 29, ರವಿ ಬಿಷ್ಣೋಯಿ 13ಕ್ಕೆ4, ವಾಷಿಂಗ್ಟನ್ ಸುಂದರ್ 11ಕ್ಕೆ2) **ಭಾರತ:** 19.5 ಓವರ್‌ಗಳಲ್ಲಿ 102 (ಶುಭಮನ್ ಗಿಲ್ 31, ವಾಷಿಂಗ್ಟನ್ ಸುಂದರ್ 27, ಆವೇಶ್ ಖಾನ್ 16, ತೆಂದೈ ಚತಾರಾ 16ಕ್ಕೆ3, ಸಿಕಂದರ್ ರಝಾ 25ಕ್ಕೆ3) **ಫಲಿತಾಂಶ:** ಜಿಂಬಾಬ್ವೆ ತಂಡಕ್ಕೆ 13 ರನ್‌ಗಳ ಜಯ ಹಾಗೂ ಸರಣಿಯಲ್ಲಿ 1–0 ಮುನ್ನಡೆ. ಪಂದ್ಯಶ್ರೇಷ್ಠ: ಸಿಕಂದರ್ ರಝಾ.

ಎರಡನೇ ಪಂದ್ಯ ಇಂದು. ಆರಂಭ: ಸಂಜೆ 4.30.
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ನಾಲ್ಕನೇ ಸುತ್ತಿಗೆ ಸಿನ್ನರ್, ಜ್ವೆರೇವ್

ವಿಂಬಲ್ಡನ್ ಟೆನಿಸ್: ಸರ್ಬಿಯಾದ ಮಿಯೊಮಿರ್ ಕೆಮಾನೊವಿಚ್ ಪರಾಭವ

ವಿಂಬಲ್ಡನ್ ಸೆಂಟರ್ ಕೋರ್ಟ್‌ನಲ್ಲಿ ಪ್ರೇಕ್ಷಕರತ್ತ ಕೈಬೀಸುತ್ತಿರುವ ಸಚಿನ್ ತೆಂಡೂಲ್ಕರ್ ಎಪಿ/ಪಿಟಿಐ ಚಿತ್ರ

ಇಟಲಿಯ ಯಾನಿಕ್ ಸಿನ್ನರ್ ಸಂಭ್ರಮ –ಎಎಫ್‌ಪಿ ಚಿತ್ರ

ಲಂಡನ್ (ಎಪಿ): ಇಟಲಿಯ ಯಾನಿಕ್ ಸಿನ್ನರ್ ವಿಂಬಲ್ಡನ್ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿಗೆ ಲಗ್ಗೆ ಹಾಕಿದರು.

ಸೆಂಟರ್ ಕೋರ್ಟ್‌ನಲ್ಲಿ ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಯಾನಿಕ್ 6-1, 6-4, 6-2ರಿಂದ ಸರ್ಬಿಯಾದ ಮಿಯೊಮಿರ್ ಕೆಮಾನೊವಿಚ್ ವಿರುದ್ಧ ಗೆದ್ದರು.

ಸಿನ್ನರ್ ಅವರ ಪ್ರಬಲ ಆಟದ ಮುಂದೆ ಮಿಯೊಮಿರ್ ಅವರು ಯಾವುದೇ ಹಂತದಲ್ಲಿಯೂ ಪೈಪೋಟಿಯೊಡ್ಡುವಲ್ಲಿ ಸಫಲರಾಗಲಿಲ್ಲ. ಮೂರು ಸೆಟ್‌ಗಳಲ್ಲಿಯೂ ಯಾನಿಕ್ ಮೇಲುಗೈ ಸಾಧಿಸಿದರು.

ಮೂರನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ 6-4, 6-4, 7-6ರಿಂದ ಇಂಗ್ಲೆಂಡ್‌ನ ಕ್ಯಾಮರೂನ್ ನೋರಿ ವಿರುದ್ಧ ಜಯಿಸಿದರು.

ಭಾಂಬ್ರಿ–ಒಲಿವೆಟ್ಟಿ ಜೋಡಿಗೆ ಸೋಲು: ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಜೊತೆಗಾರ ಅಲ್ಬಾನೊ ಒಲಿವೆಟ್ಟಿ ವಿಂಬಲ್ಡನ್ ಚಾಂಪಿಯನ್‌ಷಿಪ್‌ನಿಂದ ಶುಕ್ರವಾರ ಹೊರಬಿದ್ದಿದ್ದಾರೆ.

ಪುರುಷರ ಡಬಲ್ಸ್ ಎರಡನೇ ಸುತ್ತಿನಲ್ಲಿ ಇಂಡೋ–ಫ್ರೆಂಚ್ ಜೋಡಿಯು 6-4, 4-6, 3-6 ರಿಂದ ಎಂಟನೇ ಶ್ರೇಯಾಂಕದ ಜರ್ಮನಿಯ ಕೆವಿನ್ ಕ್ರಾವಿಟ್ಜ್ ಮತ್ತು ಟಿಮ್ ಪುಯೆಟ್ಜ್ ಜೋಡಿ ವಿರುದ್ಧ ಸೋಲನುಭವಿಸಿತು.

ತೆಂಡೂಲ್ಕರ್‌ಗೆ ಗೌರವ: ವಿಂಬಲ್ಡನ್ ಟೂರ್ನಿಯ ಪಂದ್ಯ ವೀಕ್ಷಣೆಗೆಂದು ಶನಿವಾರ ಸೆಂಟರ್ ಕೋರ್ಟ್‌ಗೆ ಆಗಮಿಸಿದ ಭಾರತದ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರಿಗೆ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟುವ ಮೂಲಕ ಗೌರವಿಸಿದರು.

ಸೂಟ್ ಧರಿಸಿ ಕೋರ್ಟ್‌ಗೆ ಆಗಮಿಸಿದ ಸಚಿನ್‌ಗೆ ಪ್ರೇಕ್ಷಕರು ಅದ್ದೂರಿ ಸ್ವಾಗತ ಕೋರಿದರು. ಸಚಿನ್ ಕೂಡಾ ಪ್ರೇಕ್ಷಕರತ್ತ ಕೈಬೀಸಿದರು.

‘ಸೆಂಟರ್ ಕೋರ್ಟ್‌ಗೆ ನಿಮ್ಮನ್ನು ಸ್ವಾಗತಿಸಲು ಸಂತೋಷವೆನಿಸುತ್ತದೆ’ ಎಂದು ‘ಎಕ್ಸ್’ನಲ್ಲಿ ವಿಡಿಯೊದೊಂದಿಗೆ ವಿಂಬಲ್ಡನ್ ಪೋಸ್ಟ್ ಮಾಡಿದೆ. ಸೆಂಟರ್ ಕೋರ್ಟ್‌ನ ಉದ್ಘೋಷಕ ಸಚಿನ್‌ರನ್ನು ಸ್ವಾಗತಿಸುವುದು ವಿಡಿಯೊದಲ್ಲಿ ದಾಖಲಾಗಿದೆ. ಇದೇ ವೇಳೆ ಇಂಗ್ಲೆಂಡ್‌ನ ಕ್ರಿಕೆಟಿಗರಾದ ಬೆನ್ ಸ್ಟೋಕ್ಸ್, ಜೋಸ್ ಬಟ್ಲರ್ ಮತ್ತು ಜೋ ರೂಟ್ ಕೂಡಾ ಹಾಜರಿದ್ದರು.

ಅಂಪೈರ್ ಸಂಸ್ಥೆಗೆ ಪ್ರಧಾನ್ ಕುಮಾರ್ ಅಧ್ಯಕ್ಷ

ಬೆಂಗಳೂರು: ಆರ್.ವಿ. ಪ್ರಧಾನ ಕುಮಾರ್ ಅರಸ್ ಮತ್ತು ನಾಗರಾಜ ಜೆ ಅವರು ಕರ್ನಾಟಕ ಕ್ರಿಕೆಟ್ ಅಂಪೈರ್ಸ್ ಸಂಸ್ಥೆಗೆ ಕ್ರಮವಾಗಿ ಅಧ್ಯಕ್ಷ ಹಾಗೂ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ.

ಈಚೆಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪದಾಧಿಕಾರಿಗಳು: ಆರ್.ವಿ. ಪ್ರಧಾನಕುಮಾರ್ ಅರಸ್ (ಅಧ್ಯಕ್ಷ), ರಘೋತ್ತಮ ಬಿ.ಎಸ್ (ಉಪಾಧ್ಯಕ್ಷ), ನಾಗರಾಜ ಜೆ (ಕಾರ್ಯದರ್ಶಿ), ಯೋಗನರಸಿಂಹ ಎಂ.ಆರ್ (ಜಂಟಿ ಕಾರ್ಯದರ್ಶಿ), ರಾಹುಲ್ ರಾಜ್ ಜೆ (ಖಜಾಂಚಿ)

ಕಾರ್ಯಕಾರಿ ಸಮಿತಿ ಸದಸ್ಯರು: ರವೀಂದ್ರ ನಾಥ್ ಎಂ.ಆರ್., ಮಿಥುನ್ ಎಸ್ ಪಾಟೀಲ, ಸುಹಾಸ್ ಎಂ.ಎಸ್., ಶಶಿಧರ್ ಎನ್.

ಮಹಿಳಾ ಕ್ರಿಕೆಟ್: ಎರಡನೇ ಟಿ20 ಇಂದು

ಹರ್ಮನ್ ಬಳಗಕ್ಕೆ ಜಯದ ಒತ್ತಡ

ಹರ್ಮನ್‌ಪ್ರೀತ್ ಕೌರ್

ಚೆನ್ನೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡ ಮತ್ತು ದಕ್ಷಿಣ ಆಫ್ರಿಕಾ ನಡುವಣ ಭಾನುವಾರ ಎರಡನೇ ಟಿ20 ಪಂದ್ಯ ನಡೆಯಲಿದೆ.

ಮೊದಲ ಪಂದ್ಯದಲ್ಲಿ ಸೋತಿರುವ ಆತಿಥೇಯ ತಂಡಕ್ಕೆ ಇದು ಮಾಡು ಇಲ್ಲವೇ ಮಡಿ ಹೋರಾಟವಾಗಿದೆ. ಲೌರಾ ವೊಲ್ವಾರ್ಟ್ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವು ಮೂರು ಟಿ20 ಪಂದ್ಯಗಳಸರಣಿಯಲ್ಲಿ ಈಗಾಗಲೇ 1-0 ಮುನ್ನಡೆಯಲ್ಲಿದೆ. ಈ ಪಂದ್ಯವನ್ನೂ ಜಯಿಸಿದರೆ ಸರಣಿ ಕೈವಶವಾಗಲಿದೆ. ಇದರೊಂದಿಗೆ ಏಕದಿನ ಸರಣಿ ಮತ್ತು ಏಕೈಕ ಟೆಸ್ಟ್ ಸೋಲಿನ ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಪ್ರವಾಸಿ ಬಳಗಕ್ಕೆ ಇದೆ.

ಮೊದಲ ಪಂದ್ಯದಲ್ಲಿ ಭಾರತ ತಂಡದವರ ಕಳಪೆ ಫೀಲ್ಡಿಂಗ್ ಮತ್ತು ಹೆಚ್ಚು ಪರಿಣಾಮಕಾರಿಯಲ್ಲದ ಬೌಲಿಂಗ್ ಸೋಲಿಗೆ ಕಾರಣವಾಗಿದ್ದವು. ದಕ್ಷಿಣ ಆಫ್ರಿಕಾದ ತಾಜ್ಮಿನ್ ಬ್ರಿಟ್ಸ್ ಮತ್ತು ಮರೈಝೇನ್ ಕಾಪ್ ಅವರ ಅಬ್ಬರದ ಅರ್ಧಶತಕ ಗಳಿಸಿದರು. ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ವಿಫಲರಾದರು.

ಆದರೆ ಗುರಿ ಬೆನ್ನಟ್ಟಿದ ತಂಡಕ್ಕೆ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ಉತ್ತಮ ಆರಂಭ ನೀಡಿದ್ದರು. ಮೊದಲ ಐದು ಓವರ್‌ಗಳಲ್ಲಿಯೇ 56 ರನ್ ಕಲೆಹಾಕಿದ್ದರು. ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್ ಮತ್ತು ಜೆಮಿಮಾ ರಾಡ್ರಿಗಸ್ ಅವರೂ ದಿಟ್ಟ ಹೋರಾಟ ಮಾಡಿದರು. ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದರೂ ತಂಡವು ಗುರಿ ಮುಟ್ಟಲಾಗಲಿಲ್ಲ.

ಆದ್ದರಿಂದ ಈ ಪಂದ್ಯದಲ್ಲಿ ಬೌಲರ್‌ಗಳು ತಮ್ಮ ಹಿಂದಿನ ಲೋಪಗಳನ್ನು ಸರಿಪಡಿಸಿಕೊಂಡು ದಾಳಿ ಮಾಡಬೇಕಿದೆ. ಫೀಲ್ಡಿಂಗ್ ಲೋಪಗಳೂ ಸುಧಾರಣೆಯಾದರೆ, ತಂಡದ ಸರಣಿ ಕನಸು ಜೀವಂತವಾಗುಳಿಯಬಹುದು.

ರಿಚಾಗೆ ಗಾಯ: ಪಂದ್ಯದಲ್ಲಿ ಗಾಯ ಗೊಂಡಿದ್ದ ಭಾರತ ತಂಡದ ವಿಕೆಟ್‌ಕೀಪರ್–ಬ್ಯಾಟರ್ ರಿಚಾ ಘೋಷ್ ಈ ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ‘ಅವರಿಗೆ ಮುಖಕ್ಕೆ ಚೆಂಡು ಬಡಿದ ಕಾರಣ ಕುತ್ತಿಗೆ ನೋವು ಮತ್ತು ತಲೆಸುತ್ತುವ ಸಮಸ್ಯೆ ಇದೆ. ಅವರಿಗೆ ಹೆಚ್ಚುವರಿ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳಿಸಲಾಗಿದೆ. ತಂಡದ ವೈದ್ಯರು ನಿಗಾ ವಹಿಸಿದ್ದಾರೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಪಂದ್ಯ ಆರಂಭ: ರಾತ್ರಿ 7,
ನೇರಪ್ರಸಾರ: ಸ್ಪೋರ್ಟ್ಸ್ 18

ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಬೆಳಗಾವಿಯ ತನಿಷ್ಕಾಗೆ ‘ಡಬಲ್’ ಸಂಭ್ರಮ

ಪ್ರಜಾವಾಣಿ ವಾರ್ತೆ

15 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ ಕಪಿಲ್ ಕಾಲಭೈರವ್ ಚೆಂಡು ಹಿಂದಿರುಗಿಸಿದ ರೀತಿ ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಮಂಗಳೂರು: ಬಲಶಾಲಿ ಹೊಡೆತ ಮತ್ತು ಅಮೋಘ ಬ್ಲಾಕಿಂಗ್ ಮೂಲಕ ಗಮನ ಸೆಳೆದ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ್ 24 ತಾಸುಗಳೊಳಗೆ ಎರಡು ಪ್ರಶಸ್ತಿ ಗೆದ್ದು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸಂಭ್ರಮಿಸಿದರು.

ಸಂಗಮ್ ಬೈಲೂರು ಅವರ ಬೆಳಗಾವಿ ಟೇಬಲ್ ಟೆನಿಸ್ ಅಕಾಡೆಮಿಯ ಕ್ರೀಡಾಪಟು, ಡಿವೈನ್ ಪ್ರಾವಿಡೆನ್ಸ್ ಶಾಲೆಯ ವಿದ್ಯಾರ್ಥಿನಿ ತನಿಷ್ಕಾ ಶುಕ್ರವಾರ ರಾತ್ರಿ 17 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿ ಗೆದ್ದುಕೊಂಡರೆ ಶನಿವಾರ ಸಂಜೆ 15 ವರ್ಷದೊಳಗಿನ ಬಾಲಕಿಯರ ವಿಭಾಗದ ಚಾಂಪಿಯನ್ ಆದರು.

ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ, ನಗರದ ಕಂಕನಾಡಿಯ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಟೂರ್ನಿಯ 17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕಿತೆ ತನಿಷ್ಕಾ 11-5, 11-5, 11-4ರಲ್ಲಿ ಪರ್ಣವಿ ಎದುರು ಜಯ ಗಳಿಸಿದರು.

15 ವರ್ಷದೊಳಗಿನವರ ವಿಭಾಗ ದಲ್ಲಿ ಪಾಂಗ್ ಸ್ಮಾಷರ್ಸ್‌ನ ಹಿಯಾ ಸಿಂಗ್ ವಿರುದ್ಧ 11-13, 6-11, 11-9, 11-4, 11-3ರಲ್ಲಿ ಗೆದ್ದರು.

17 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿಯೂ ಎರಡನೇ ಶ್ರೇಯಾಂಕಿತ ಆಟಗಾರನ ಪಾಲಾಯಿತು.

ತಮಗಿಂತ ಕಡಿಮೆ ಶ್ರೇಯಾಂಕದ ಗೌರವ್ ಗೌಡ ವಿರುದ್ಧ ಬೆಂಗಳೂರು ಸ್ಮೈಸ್ ಅಕಾಡೆಮಿಯ ವಿಭಾಸ್ ವಿ.ಜಿ 11-7, 11-13, 11-6, 9-11, 11-5ರಲ್ಲಿ ಗೆದ್ದು ಪ್ರಶಸ್ತಿಗೆ ಮುತ್ತಿಕ್ಕಿದರು.

ಇಂಗ್ಲೆಂಡ್‌ಗೆ ಮಣಿದ ಸ್ವಿಜರ್ಲೆಂಡ್

ಡಸೆಲ್ ಡಾರ್ಫ್ ಜರ್ಮನಿ (ಎಎಫ್‌ಪಿ): ಇಂಗ್ಲೆಂಡ್ ತಂಡ ಶನಿವಾರ ಪೆನಾಲ್ಟಿ ಶೂಟೌಟ್‌ನಲ್ಲಿ ಸ್ವಿಜರ್ಲೆಂಡ್ ತಂಡವನ್ನು ಮಣಿಸಿ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಪಂದ್ಯ ನಿಗದಿ ಅವಧಿಯ ಆಟ 1–1ರಲ್ಲಿ ಸಮಬಲಗೊಂಡ ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಇಂಗ್ಲೆಂಡ್ 5–3 ರಿಂದ ಜಯ ಸಾಧಿಸಿತು.

ಪಂದ್ಯದ 75ನೇ ನಿಮಿಷ ಬ್ರೀಲ್ ಎಂಬೊಲೊ ಸ್ವಿಜರ್ಲೆಂಡ್‌ಗೆ ಮುನ್ನಡೆ ಒದಗಿಸಿದರು. ಆದರೆ, ಬುಕಾಯೊ ಸಾಕಾ 80ನೇ ನಿಮಿಷದಲ್ಲಿ ಗೋಲು ಗಳಿಸಿ ಇಂಗ್ಲೆಂಡ್ ಸಮಬಲ ಸಾಧಿಸಲು ನೆರವಾದರು.

ಫ್ರಾನ್ಸ್‌ಗೆ ಜಯ: ಶುಕ್ರವಾರ ತಡರಾತ್ರಿ ನಡೆದ ಮತ್ತೊಂದು ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡವು 5–3 ರಿಂದ ಪೋರ್ಚುಗಲ್ ತಂಡವನ್ನು ಸೋಲಿಸಿ, ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ. ಪಂದ್ಯ ನಿಗದಿ ಅವಧಿಯ ಆಟದಲ್ಲಿ ಎರಡು ತಂಡಗಳಿಗೂ ಗೋಲು ಗಳಿಸಲು ಆಗಲಿಲ್ಲ.

ಎಂಜಿನಿಯರಿಂಗ್‌ಗೆ ವಿದಾಯ; ಟ್ರ್ಯಾಕ್‌ನಲ್ಲಿ ಮಿಂಚು

ಒಲಿಂಪಿಕ್ಸ್: 4x400 ಮೀಟರ್ಸ್ ರಿಲೆ ತಂಡದಲ್ಲಿ ಮಂಗಳೂರಿನ ಮಿಜೊ ಚಾಕೊ

• ವಿಕ್ರಂ ಕಾಂತಿಕೆರೆ

ಮಿಜೊ ಚಾಕೊ ಕುರಿಯನ್

ಮಂಗಳೂರು: ಪ್ಲಸ್–ಟು ಓದುತ್ತಿದ್ದಾಗ ಓರಗೆಯವರು ಓಡುತ್ತಿದ್ದುದನ್ನು ನೋಡಿ ಟ್ರ್ಯಾಕ್‌ನತ್ತ ಒಲವು ಬೆಳೆಸಿಕೊಂಡ ಮಂಗಳೂರಿನ ಯುವಕ ಓಟದಲ್ಲಿ ಸಾಧನೆಯ ಕನಸು ಹೊತ್ತು ಎಂಜಿನಿಯರಿಂಗ್ ಪದವಿಗೆ ಅರ್ಧದಲ್ಲೇ ವಿದಾಯ ಹೇಳಿದರು.

ಒಂದು ದಶಕದಲ್ಲಿ ಭಾರತದ ಅಥ್ಲೆಟಿಕ್ಸ್‌ನಲ್ಲಿ ಮಿಂಚು ಹರಿಸಿ ಈಗ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಸಂಭ್ರಮದಲ್ಲಿದ್ದಾರೆ. ಮಂಗಳೂರಿನ ಎನ್‌ಎಂಪಿಟಿ (ಈಗ ಎನ್‌ಎಂಪಿಎ) ಮತ್ತು ಸೇಂಟ್ ಅಲೋಶಿಯಸ್ ಶಾಲೆ, ಶಾರದಾ ಮತ್ತು ಶ್ರೀನಿವಾಸ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಮಿಜೋ ಚಾಕೊ ಕುರಿಯನ್ ಅವರು ಆಳ್ವಾಸ್ ಶಿಕ್ಷಣ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಅಭ್ಯಾಸ ಮಾಡಿದ್ದರು.

ಮೇ ತಿಂಗಳಲ್ಲಿ ಬಹಾಮಸ್‌ನ ನಾಸೌದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್‌ನ ರಿಲೆಯಲ್ಲಿ ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ತಂಡದಲ್ಲಿ ಸ್ಥಾನ ಗಳಿಸಿದ್ದು ಈಗ ಅಭ್ಯಾಸನಿರತರಾಗಿದ್ದಾರೆ.

ಮಿಜೊ ಅವರ ತಂದೆ ಕುರಿಯನ್ ಮತ್ತು ತಾಯಿ ಮಿನಿ ದಂಪತಿ ಕೇರಳದ ಆಲಪ್ಪುಳ ಜಿಲ್ಲೆಯ ತಿರುವಲ್ಲದವರು. ಕುರಿಯನ್ ಮಂಗಳೂರಿನ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದರು. ಮಿಜೊ ಜನಿಸಿದ್ದು ಮಂಗಳೂರಿನಲ್ಲಿ. ಶಾರದಾ ಕಾಲೇಜಿನಲ್ಲಿ ಪ್ಲಸ್ ಟು ಓದುತ್ತಿದ್ದಾಗ ದಿಢೀರ್ ಆಗಿ ಅಥ್ಲೆಟಿಕ್ಸ್ ಮೇಲೆ ಆಸಕ್ತಿ ಮೂಡಿತು.

ಮಂಗಳಾ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಅವರ ಕನಸನ್ನು ಪೋಷಿಸಿದವರು ಕೋಚ್ ದಿನೇಶ್ ಕುಂದರ್. ಶ್ರೀನಿವಾಸ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುತ್ತಿದ್ದ ಮಿಜೊ ಓದನ್ನು ಅರ್ಧಕ್ಕೇ ನಿಲ್ಲಿಸಿದ ಪೂರ್ಣಪ್ರಮಾಣದಲ್ಲಿ ಟ್ರ್ಯಾಕ್‌ನತ್ತ ಹೊರಳಿದರು. ಇದೇ ಸಂದರ್ಭದಲ್ಲಿ ವಾಯುಸೇನೆಯಲ್ಲಿ ಉದ್ಯೋಗವೂ ಲಭಿಸಿತು. ಜೂನಿಯರ್ ವಾರಂಟ್ ಆಫೀಸರ್ ಹುದ್ದೆಯಲ್ಲಿರುವ ಅವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಮೊದಲ ಪದಕದ ಸಂಭ್ರಮ: ತಾಲ್ಲೂಕು, ಜಿಲ್ಲಾ ಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುತ್ತಿದ್ದ ಮಿಜೊ 2018ರಲ್ಲಿ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯದ ರಿಲೆಯಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದರು. 2022ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 400 ಮೀಟರ್ಸ್ ಓಟದಲ್ಲಿ ವೈಯಕ್ತಿಕ ಪದಕ ಗಳಿಸಿದರು. ಅದೇ ವರ್ಷ ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆಯಾದರು.

ಕಳೆದ ವರ್ಷ ನಡೆದ ಏಷ್ಯನ್ ಗೇಮ್ಸ್‌ನ ರಿಲೆಯಲ್ಲಿ ಚಿನ್ನ ತಂಡದಲ್ಲಿ ಮಿಜೊ ಇದ್ದರು. ಫೈನಲ್‌ನಲ್ಲಿ ಭಾಗವಹಿಸಲು ಅವಕಾಶ ಸಿಗದೇ ಇದ್ದರೂ ಒಲಿಂಪಿಕ್ಸ್ ಅರ್ಹತಾ ಶಿಬಿರಕ್ಕೆ ಆಯ್ಕೆಯಾದರು.

‘ಇದು ನನ್ನ ಕನಸಾಗಿತ್ತು. ಆದ್ದರಿಂದ ತುಂಬ ಖುಷಿಯಲ್ಲಿದ್ದೇನೆ. ಒಲಿಂಪಿಕ್ಸ್‌ನಂಥ ಪ್ರಮುಖ ಕೂಟದಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ ಎಂದು ಕನಸಿನಲ್ಲೂ ಎನಿಸಿರಲಿಲ್ಲ. ಪ್ಯಾರಿಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿ ಭಾರತಕ್ಕೆ ಪದಕ ತಂದುಕೊಡಬೇಕು. ಅದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇನೆ’ ಎಂದು ತಿರುವನಂತಪುರದ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ಜಮೈಕಾದ ಕೋಚ್ ಡಾಸನ್ ಬಳಿ ತರಬೇತಿ ಪಡೆಯುತ್ತಿರುವ ಮಿಜೊ ದೂರವಾಣಿ ಮೂಲಕ ‘ಪ್ರಜಾವಾಣಿ’ಗೆ ತಿಳಿಸಿದರು.

ಬಾಲಕರ ವಿಭಾಗ: 400 ಮೀ ಫ್ರೀಸ್ಟೈಲ್‌ನಲ್ಲಿ ಎಸ್.ದರ್ಶನ್‌ಗೆ ಮೊದಲ ಸ್ಥಾನ

ರಾಜ್ಯ ಈಜು: ಖುಜುಲಾ ದಾಖಲೆ

ಪ್ರಜಾವಾಣಿ ವಾರ್ತೆ

ಎಸ್. ಖುಜುಲಾ

ಬೆಂಗಳೂರು: ಡಾಲ್ಫಿನ್ ಈಜು ಕೇಂದ್ರದ ಎಸ್. ಖುಜುಲಾ, ಇಲ್ಲಿ ನಡೆಯುತ್ತಿರುವ ರಾಜ್ಯ ಜೂನಿಯರ್ ಮತ್ತು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನ ಬಾಲಕಿಯರ 100 ಮೀಟರ್ಸ್ ಫ್ರೀಸ್ಟೈಲ್ ವಿಭಾಗದ 1ಎ ಗುಂಪಿನಲ್ಲಿ ನೂತನ ದಾಖಲೆ ಬರೆದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಖುಜುಲಾ 59.16 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಬಾಲಕರ ವಿಭಾಗದ 400 ಮೀ ಫ್ರೀಸ್ಟೈಲ್ 1ಎ ಗುಂಪಿನಲ್ಲಿ ಬಸವನಗುಡಿ ಈಜುಕೇಂದ್ರದ ಎಸ್ ದರ್ಶನ್ ಮೊದಲ ಸ್ಥಾನ ಗಳಿಸಿದರು.

ಫಲಿತಾಂಶಗಳು: ಬಾಲಕರು: 400 ಮೀ ಫ್ರೀಸ್ಟೈಲ್: 1ಎ ಗುಂಪು: ಎಸ್. ದರ್ಶನ್ (ಬಸವನಗುಡಿ ಈಜುಕೇಂದ್ರ; ಕಾಲ: 4 ನಿಮಿಷ 09.61 ಸೆ)–1, ಎಸ್ ಧಕ್ಷಣ್ (ಬಸವನಗುಡಿ ಈಜುಕೇಂದ್ರ)–2, ಚಿಂತನ್ ಎಸ್.ಶೆಟ್ಟಿ (ಮಂಗಲಾ ಅಕ್ವೆಟಿಕ್ಸ್)–3

1ಬಿ : ಮೋನಿಷ್.ಪಿ.ವಿ (4ನಿ 21.18ಸೆ)–1, ಪೃಥ್ವಿರಾಜ್ ಮೆನನ್–2 (ಇಬ್ಬರೂ ಬಿಎಸಿ), ಅಭಿಮನ್ಯು ನಂಬಿಯಾರ್ (ಡಾಲ್ಫಿನ್ ಅಕ್ವೆಟಿಕ್ಸ್)–3

3ಎ: ಅಮಿತ್ ಪವನ್.ಎಚ್ (4ನಿ 57.65ಸೆ–ಜಿಐಆರ್‌ಎಸ್)–1, ಲೋಹಿತಾಶ್ವ ನಾಗೇಶ್ (ಗ್ಲೋಬಲ್)–2, ಎನ್. ಪವನ್ ಕೃಷ್ಣಾ (ಬಿಎಸಿ)–3.

3ಬಿ : ರಿಷಿಕ್.ಎ (5ನಿ 36.78ಸೆ–ಎನ್‌ಎಸಿ)–1, ಸ್ನಿಥಿಕ್.ಎನ್ (ಡಾಲ್ಫಿನ್)–2, ಆಧ್ರಿತ್ ಎ.ಶಾಂಡಿಲಿಯ (ಡಾಲ್ಫಿನ್ ಅಕ್ವೆಟಿಕ್ಸ್)–3. 200 ಮೀ ಬಟರ್‌ಫ್ಲೈ: 1 ಎ ಗುಂಪು: ಎಸ್.ದರ್ಶನ್ (2ನಿ 08.92ಸೆ–ಬಿಎಸಿ)–1, ನಿರಂಜನ್ ಕಾರ್ತಿಕ್ (ಗ್ಲೋಬಲ್)–2, ರೇಣುಕಾಚಾರ್ಯ ಹೊದ್ಮನಿ (ಬಿಎಸಿ)–3. 1ಬಿ: ಅನೀಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್; 2ನಿ 15.60ಸೆ)–1, ಹರಿಕಾರ್ತಿಕ್ ವೇಲು (ಗೋಲ್ಡನ್)–2, ವೇದಾಂತ ವಿ.ಎಂ (ಬಿಎಸಿ)–3

50 ಮೀ ಬ್ರೆಸ್ಟ್‌ಸ್ಟ್ರೋಕ್: 3ಎ: ಮೊಹಮ್ಮದ್ ಅರ್ಮಾನ್ ಸಮೀರ್ (41.69ಸೆ–ಬಿಎಸ್‌ಆರ್‌ಸಿ), ಅವ್ಯಕ್ತ್ ಮೋಹನ್ (ಬಿಎಸಿ)–2, ಸಮರ್ಥ್ ಭಾರದ್ವಾಜ್ (ಎನ್‌ಎಸಿ)–3

3ಬಿ : ಡ್ಯಾನಿಯಲ್ ಇಮ್ಮಾನ್ಯುಯಲ್ ಸಲ್ಡಾನಾ (43.64 ಸೆ–ಜೈ ಹಿಂದ್)–1, ಇಂದ್ರದತ್ ಎನ್.ಆರ್ (ಪಿಎಂಎಸ್‌ಸಿ)–2, ದಕ್ಷ್ ಶ್ರೀಯಾನ್ (ಜೈಹಿಂದ್)–3

1ಎ: ಕ್ರಿಶ್ ಸುಕುಮಾರ್ (31.12ಸೆ–ಡಾಲ್ಫಿನ್)–1, ಸೂರ್ಯ ಜ್ಯೊಯಪ್ಪ (ಬಿಎಸಿ)–2, ವಿಶಾಗನ್ ಸರವಣನ್ (ಬಿಎಸಿ)–3

1ಬಿ ಗುಂಪು: ಆಯುಷ್ ಶಿವರಾಜ್.ಎಂ (31.89 ಸೆ–ಡಾಲ್ಫಿನ್)–1, ದಕ್ಷ್ ಮಠ (ಬಿಎಸಿ)–2, ಸಾಯಿಶ್ ಕಿಣಿ (ಗ್ಲೋಬಲ್)–3. 3ಎ: ರಕ್ಷಿತ್ ಎ.ಕೋರೆ (34.75 ಸೆ; ಎನ್‌ಎಸಿ)–1, ಅಮಿತ್ ಪವನ್ (ಜಿಐಆರ್‌ಎಸ್)–2, ಆರಿತ್ ಚಂದ್ರಶೇಖರ್ (ಮತ್ಸ್ಯ)–3

3ಬಿ: ಡ್ಯಾನಿಯಲ್ ಇಮ್ಮಾನ್ಯುಯಲ್ ಸಲ್ಡಾನಾ (39.01ಸೆ–ಜೈ ಹಿಂದ್)–1, ಆಯುಷ್ ವಿಕ್ರಮ್ (ಬಿಎಸಿ)–2, ಮುಹಮ್ಮದ್ ಜೈದ್ (ಎನ್‌ಎಸಿ)–3

ಬಾಲಕಿಯರು: 100 ಮೀ ಫ್ರೀಸ್ಟೈಲ್: 1ಎ ಗುಂಪು: ಎಸ್. ಖುಜುಲಾ (ಡಾಲ್ಫಿನ್; 59.16ಸೆ)–1(ನೂತನ ದಾಖಲೆ), ವಿನೀತಾ ನಯನಾ (ಬಿಎಸಿ)–2, ಆರುಷಿ ಅಗರವಾಲ್ (ಡಾಲ್ಫಿನ್)–3

400 ಮೀ ಫ್ರೀಸ್ಟೈಲ್: 1ಎ ಗುಂಪು: ಶಿರಿನ್ (4ನಿ 37.85ಸೆ)–1, ಹಷಿಕಾ ರಾಮಚಂದ್ರ–2, ಅದಿತಿ ಎನ್ ಮುಲಯ–3 (ಮೂವರೂ ಬಿಎಸಿ).

1ಬಿ ಗುಂಪು: ಶ್ರೀ ಚರಣಿ ತುಮು (ಗ್ಲೋಬಲ್ ಸ್ವಿಮಿಂಗ್ ಅಕಾಡೆಮಿ: 4ನಿ 36.76ಸೆ)–1, ಮೀನಾಕ್ಷಿ ಮೆನನ್ (ಬಿಎಸಿ)–2, ಸುಹಾಸಿನಿ ಘೋಷ್ (ಡಾಲ್ಫಿನ್ ಅಕ್ವೆಟಿಕ್ಸ್)–3

3ಎ : ಸ್ತುತಿ ಸಿಂಗ್ (5ನಿ 16.81ಸೆ–ಬಿಎಸ್‌ಎ)–1, ಸಾನ್ವಿ ಜೈನ್ (ಬಿಎಸ್‌ಎ)–2, ನಯನಾ ಮಧ್ಯಸ್ಥ (ಎನ್‌ಎಸಿ)–3

3ಬಿ : ಝೂನಾರ್ಾ ಸಿಸೋಡಿಯಾ (5ನಿ 45.27ಸೆ–ಏಕಲವ್ಯ)–1, ಸಾನ್ವಿ (ಡಾಲ್ಫಿನ್ ಅಕ್ವೆಟಿಕ್ಸ್)–2, ಸ್ಮೃತಿ ಮಹೇಶ (ಬಿಎಸಿ)–3

200 ಮೀ ಬಟರ್‌ಫ್ಲೈ: 1ಎ ಗುಂಪು: ಹಷಿಕಾ ರಾಮಚಂದ್ರ (2ನಿ 26.27ಸೆ–ಬಿಎಸಿ)–1, ರಿತ್ವಿಕಾ ಬಿ.ಎಂ (ಮತ್ಸ್ಯ)–2, ಜನ್ಯಾ (ಬಿಎಸಿ)–3

1 ಬಿ : ಸುಹಾಸಿನಿ ಘೋಷ್ (2ನಿ 28.32ಸೆ–ಡಾಲ್ಫಿನ್)–1, ಅಂಜಲಿ ಹೊಸಕೆರೆ (ಬಿಎಸಿ)–2, ತನಿಶಾ ವಿನಯ್ (ಬಿಎಸಿ)–3. 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್: 3ಎ ಗುಂಪು: ಶ್ರೇಯಾ ಸುರೇಶ್ ಪೂಜಾರ್ (40.79–ಬಿಎಸ್‌ಎ)–1, ಆರಾಧ್ಯಾ ಆಚಾರ್ (ಮಂಗಲಾ)–2, ಧೃತಿ ಅಭಿಲಾಷ್ (ಬಿಎಸಿ)–3. 3ಬಿ : ರಿತನ್ಯಾ ಶಿವಕುಮಾರ್ (45.06 ಸೆ–ಬಿಎಸಿ)–1, ನಿಯಾ ನಿಧೀನ್ (ಸ್ವಿಮ್‌ಲೈಫ್)–2, ನಿಧಿ ಮುಚಂಡಿ (ಎಬಿಬಿಎಎ)–3

1ಎ : ಮಾನವಿ ವರ್ಮಾ (35.23 ಸೆ–ಡಾಲ್ಫಿನ್)–1, ಲಿನೆಯ್ ಶಾ ಎ.ಕೆ (ಗ್ಲೋಬಲ್)–2, ಪ್ರತೀಕ್ಷಾ ಶೆಣೈ (ಪುತ್ತೂರು) –3. 1ಬಿ: ಹಿಯಾ ಮುಂಚಂಡ (36.07 ಸೆ–ಡಾಲ್ಫಿನ್)–1, ತಾನ್ಯಾ.ಎಸ್ (ಜಿಐಆರ್‌ಎಸ್)–2, ತನ್ಮಯಿ ಧರ್ಮೇಶ (ಗ್ಲೋಬಲ್)–3

3ಎ: ಶ್ವಿತಿ ದಿವಾಕರ್ ಸುವರ್ಣ (36.72ಸೆ–ಡಾಲ್ಫಿನ್)–1, ಆರೋಹಿ ಚೈತ್ರಾ (ಎಬಿಬಿಎಎ)–2, ನೈರಾ ಬೋಪಣ್ಣ ಕೆ.(ಸ್ವಿಮ್‌ಲೈಫ್)–3

ಸೂಪರ್ ಬೆಟ್ ಚೆಸ್: ಕರುವಾನಾಗೆ ಪ್ರಶಸ್ತಿ


ಫ್ಯಾಬಿಯಾನೊ ಕರುವಾನಾ

ಬುಖಾರೆಸ್ಟ್ (ರೊಮೇನಿಯಾ) (ಪಿಟಿಐ): ಅಗ್ರ ಶ್ರೇಯಾಂಕದ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರು ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಡಿ. ಗುಕೇಶ್ ಮತ್ತು ಆರ್. ಪ್ರಜ್ಞಾನಂದ ಅವರನ್ನೊಳಗೊಂಡ ಫೋರ್ ವೇ ಟೈಬ್ರೇಕರ್‌ನಲ್ಲಿ ಎಲ್ಲಾ ಮೂರು ರ್‍ಯಾಪಿಡ್ ಗೇಮ್‌ಗಳನ್ನು ಗೆಲ್ಲುವ ಮೂಲಕ ಸೂಪರ್‌ಬೆಟ್ ಕ್ಲಾಸಿಕ್ ಚೆಸ್ ಟೂರ್ನಿಯ ಪ್ರಶಸ್ತಿ ಉಳಿಸಿಕೊಂಡರು.

ಕರುವಾನಾ ಅವರು ಕ್ಲಾಸಿಕಲ್ ಮಾದರಿಯಲ್ಲಿ ಡಚ್ ಗ್ರ್ಯಾಂಡ್‌ಮಾಸ್ಟರ್ ಅನೀಶ್ ಗಿರಿ ವಿರುದ್ಧ ಸೋತರು. ಗುಕೇಶ್, ಪ್ರಜ್ಞಾನಂದ ಮತ್ತು ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಕ್ಲಾಸಿಕಲ್ ವಿಭಾಗದಲ್ಲಿ ಮೊದಲ ಬಾರಿಗೆ ತಲಾ ಐದು ಅಂಕ ಸಂಪಾದಿಸಿದರು.

ಅಲಿರೇಝಾ ಕ್ಲಾಸಿಕಲ್ ವಿಭಾಗದಲ್ಲಿ ಅಂತಿಮ ಸುತ್ತನ್ನು ಗೆದ್ದಿದ್ದರೆ ಟೈಬ್ರೇಕರ್ ಅಗತ್ಯವಿರಲಿಲ್ಲ. ಏಕೆಂದರೆ ಅವರು ಅಂಕಗಳಲ್ಲಿ ಕರುವಾನಾ ಅವರನ್ನು ಹಿಂದಿಕ್ಕುತ್ತಿದ್ದರು. ಆದರೆ ಕರುವಾನಾ ಸೋತರು. ಗುಕೇಶ್ ಮತ್ತು ಪ್ರಜ್ಞಾನಂದ ಡ್ರಾ ಸಾಧಿಸಿದರು. ಆಗ ವಿಜೇತರನ್ನು ನಿರ್ಧರಿಸಲು ಫೋರ್ ವೇ ಟೈಬ್ರೇಕರ್ ನಡೆಸಲಾಯಿತು.

ಕರುವಾನಾ ಅವರು ಗುಕೇಶ್, ಪ್ರಜ್ಞಾನಂದ, ಅಲಿರೇಝಾ ಅವರನ್ನು ಸೋಲಿಸಿ ಪ್ರಶಸ್ತಿ ತನ್ನದಾಗಿಸಿಕೊಂಡರು. ಟೈಬ್ರೇಕರ್‌ನಲ್ಲಿ ಭಾರತದ ಇಬ್ಬರು ಆಟಗಾರರು ಹಿನ್ನಡೆ ಅನುಭವಿಸಿದರು.

ಫಲಿತಾಂಶದ ವಿವರ: ಅನೀಶ್ ಗಿರಿ (ನೆದರ್ಲೆಂಡ್ಸ್, 4.5) ವಿರುದ್ಧ ಫ್ಯಾಬಿಯಾನೊ ಕರುವಾನಾ (5)ಗೆ ಸೋಲು; ಅಲಿರೇಝಾ ಫಿರೋಜ್ (ಫ್ರಾನ್ಸ್ 5)– ಆರ್. ಪ್ರಜ್ಞಾನಂದ (ಭಾರತ 5) ಪಂದ್ಯ ಡ್ರಾ; ಡೇನಿಯಲ್ ಬೊಗ್ಡಾನ್ (ರೊಮೇನಿಯಾ, 3.5)– ವೇಷಿಯರ್ ಲಗ್ರಾವ್ (ಫ್ರಾನ್ಸ್ 4.5) ಪಂದ್ಯ ಡ್ರಾ; ವೆಸ್ಲಿ ಸೊ (ಅಮೆರಿಕ 4) – ಡಿ. ಗುಕೇಶ್ (ಭಾರತ, 5) ಪಂದ್ಯ ಡ್ರಾ; ಇಯಾನ್ ನಿಪೊಮ್ ನಿಷಿ (ಫಿಡೆ 4.5)–ನಾಡಿರ್ಬೆಕ್ ಅಬ್ದುಸತ್ತಾರೊವ್ (ಉಜ್ಬೇಕಿಸ್ತಾನ, 4.5) ಪಂದ್ಯ ಡ್ರಾ.

ಕೊಪಾ: ಸೆಮಿ ಫೈನಲ್‌ಗೆ ಕೆನಡಾ

ಅರ್ಲಿಂಗ್ಟನ್, (ಅಮೆರಿಕ) (ಎಪಿ): ಕೆನಡಾ ತಂಡವು ಕೊಪಾ ಅಮೆರಿಕಾ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ತಡರಾತ್ರಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಕೆನಡಾ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 4–3ರಿಂದ ವೆನಿಜುವೆಲಾ ವಿರುದ್ಧ ಗೆದ್ದಿತು. ನಿಗದಿಯ ಅವಧಿಯ ಆಟದಲ್ಲಿ ಪಂದ್ಯವು 1–1ರಿಂದ ಡ್ರಾ ಅಗಿತ್ತು.

ಜೇಕಬ್ ಶಾಫೆಲ್‌ಬರ್ಗ್ 13ನೇ ನಿಮಿಷದಲ್ಲಿ ಗೋಲು ಗಳಿಸಿ ಕೆನಡಾಗೆ ಮುನ್ನಡೆ ಒದಗಿಸಿದರು. ಆದರೆ ಸಾಲೋಮನ್ ರೊಂಡನ್ 64ನೇ ನಿಮಿಷದಲ್ಲಿ ಗೋಲು ಬಾರಿಸಿ 1–1ರ ಸಮಬಲ ಸಾಧಿಸಲು ವೆನಿಜುವೆಲಾಗೆ ನೆರವಾದರು. ಸೆಮಿಫೈನಲ್‌ನಲ್ಲಿ ಕೆನಡಾ ತಂಡವು ವಿಶ್ವಚಾಂಪಿಯನ್ ಅರ್ಜೆಂಟೀನಾವನ್ನು ಎದುರಿಸಲಿದೆ. ಗುಂಪು ಹಂತದ ಆರಂಭಿಕ ಪಂದ್ಯದಲ್ಲಿ ಕೆನಡಾ, ಅರ್ಜೆಂಟೀನಾ ವಿರುದ್ಧ ವಿರುದ್ಧ ಸೋತಿತ್ತು.

ಸಾಟಿಯಿಲ್ಲದ ಸವಾರಿ, ಅತ್ಯಾಕರ್ಷಕ ಕೊಡುಗೆ.

Hero MotoCorp ನಿಂದ VIDA ಎಲೆಕ್ಟ್ರಿಕ್ ಸ್ಕೂಟರ್‌ನೊಂದಿಗೆ ₹40,000* ಮೌಲ್ಯದ ಕೊಡುಗೆಗಳನ್ನು ಆನಂದಿಸಿ.

- 2 ರಿಮೋವಬಲ್ ಬ್ಯಾಟರಿಗಳು
- 165 km** ಪ್ರಮಾಣೀಕೃತ ಶ್ರೇಣಿ
- 2500+ ಫಾಸ್ಟ್ ಚಾರ್ಜರ್
- ವ್ಯಾಪಕ ಸೇವಾ ಜಾಲ

Limited period offer. Call your nearest Hero dealership now.

#MAKEWAY

*T&C Apply.

VIDA
Powered by Hero

Visit us in **BANGALORE:** Vittal Mallya Road — RT KRISHNA AUTOS, 7428411021 | Bommanahalli — VIDA HUB RT KRISHNA AUTO, 8762865999 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 9865262136 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 8762058999 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | BTM Layout — V3S MOTORS, 9035007999.

**Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.